ಸಂಪುಟ: 06 ಸಂಚಿಕೆ: 226 ಪುಟಗಳು: 08 ಭಾನುವಾರ 01 ನವೆಂಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಯಾರೂ ಶ್ರೇಷ್ಠರೂ ಅಲ್ಲ ಕನಿಷ್ಠರೂ ಅಲ್ಲ ಪ್ರತಿಯೊಬ್ಬರಿಗೂ ಅವರದ್ದೇ ಆದ ವೈಶಿಷ್ಟ್ಯಗಳಿರುತ್ತವೆ. ಯಾರನ್ನೂ ಯಾರಿಗೂ ಹೋಲಿಸದೇ ಎಲ್ಲರನ್ನು ಗೌರವಿಸೋಣ

ಬೆಂಗಳೂರಲ್ಲಿ ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಣೆಗೆ ವಿವಿಧ ಸಂಘಟನೆಗಳಿಂದ ಸಿದ್ಧತೆ

• ಉದಯವಾಹಿನಿ, ಬೆಂಗಳೂರು

ಕನ್ನಡ ರಾಜ್ಯೋತ್ಸವದ ಅಂಗವಾಗಿ ನಗರದಲ್ಲಿ ಇಂದು ವಿವಿಧ ಸಂಘಟನೆಗಳಿಂದ ಅದ್ದೂರಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ವಾಟಾಳ್ ನಾಗರಾಜ್ ಅವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯೋತ್ಸವ ಸಮಿತಿ ವತಿಯಿಂದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಕನ್ನಡ ಹಬ್ಬ 71 ಕಾರ್ಯಕ್ರಮ ಆಯೋಜಿಸಲಾಗಿದ್ದು, ಬೆಳಿಗ್ಗೆ 11 ಗಂಟೆಗೆ ಸಿಎಂ ಡಿಕೆಶಿ ಶಿವಕುಮಾರ್ ಅವರು ಧ್ವಜಾರೋಹಣ ನೇರವೇರಿಸಲಿದ್ದು, ಸತತ 8 ವರ್ಷಗಳಿಂದ ಮಾಜಿ ಸಿಎಂ ಸಿದ್ದರಾಮಯ್ಯ ಅವರು ರಾಜ್ಯೋತ್ಸವಕ್ಕೆ ಚಾಲನೆ ನೀಡುತ್ತಾ ಬಂದಿದ್ದು, ಮಧ್ಯಾಹ್ನ 2 ಗಂಟೆಗೆ ಭುವನೇಶ್ವರಿಗೆ ತಾಯಿಗೆ ಅವರು ಪೂಜೆ ಸಲ್ಲಿಸಿ ನಗರ ದೇವತೆ ಅಣ್ಣಮ ದೇವಿ



ಹಾಗೂ ಭುವನೇಶ್ವರಿಯ ವೈಭವದ ಮೆರವಣಿಗೆಗೆ ಅವರು ಚಾಲನೆ ನೀಡಲಿದ್ದಾರೆ. ಖ್ಯಾತ ವಕೀಲರಾದ ಪ್ರಮೀಳ ನೇಸರ್ಗಿ, ವಾಟಾಳ್ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್ ಬೆಂಗಳೂರು ಕೇಂದ್ರ ಪಾಲಿಕೆ ಆಯುಕ್ತ ಆರ್ ಜಗದೀಶ್ ಸೇರಿದಂತೆ ಹಲವಾರು ಗಣ್ಯರು ಪಾಲ್ಗೊಳ್ಳುತ್ತಿದ್ದಾರೆ.

ಕನ್ನಡ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಕೆ.ಸಿ. ಮೂರ್ತಿ ಅವರ ನೇತೃತ್ವದಲ್ಲಿ ಕಳೆದ 41 ವರ್ಷಗಳಿಂದ ಅದ್ದೂರಿ ಕನ್ನಡ ರಾಜ್ಯೋತ್ಸವನ್ನು ಆಚರಿಸಲಿದ್ದು, ನಾಳೆ ಬೆಳಿಗ್ಗೆ ವಿವಿಧ ಕಾರ್ಯಕ್ರಮಗಳನ್ನು ಸಿಎಂ ಡಿ.ಕೆ. ಶಿವಕುಮಾರ್ ಉದ್ಘಾಟಿಸಲಿದ್ದಾರೆ. ಸಚಿವ ಯುಟಿ ಖಾದರ್, ಶಾಸಕರಾದ ದಿನೇಶ್ ಗುಂಡುರಾವ್, ಡಾ. ಅಶ್ವತ್ ನಾರಾಯಣ, ಹ್ಯಾರಿಸ್, ಪ್ರಿಯಕೃಷ್ಣ, ರಾಜ್ಯ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಎಚ್‌ಎಂ ರೇವಣ್ಣ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಬಾಯಿ, ಪಿಎಂ ಕೃಷ್ಣಮೂರ್ತಿ, ಎಚ್‌ಪಿ ದಯಾನಂದ, ಆರ್ ಮುನಿರಾಜು, ಸಪ್ತಗಿರಿ ಗೌಡ, ಎಂ, ಪರಮೇಶ್, ರಾಘವೇಂದ್ರ ಸೇರಿದಂತೆ ಹಲವಾರು ಗಣ್ಯರು ಪಾಲ್ಗೊಳ್ಳುತ್ತಿದ್ದಾರೆ. ಬೆಳಿಗ್ಗೆ 11 ಕ್ಕೆ ಧ್ವಜಾರೋಹಣ ನಂತರ ವೇದಿಕೆ ಕಾರ್ಯಕ್ರಮ, ವಿಚಾರ ಸಂಕಿರಣ ಹಾಗೂ ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ, ಸಾಧಕಿಯರಿಗೆ ಸನಾನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮಿಕೊಳ್ಳಲಾಗಿದೆ.

ಕನ್ನಡ ಸೇನೆ -ಕರ್ನಾಟಕ ವತಿಯಿಂದ ಕನ್ನಡ ಹಬ್ಬವನ್ನು ಹಮಿಕೊಳ್ಳಲಾಗಿದೆ.

ಶ್ರೀ ಹವಾ ಮಲ್ಲಿನಾಥ ಮಹಾರಾಜ ನಿರ್ಗುಡಿ ಅವರ ದಿವ್ಯ ಸಾನಿಧ್ಯದಲ್ಲಿ ಗಾನ ಕೋಗಿಲೆ ಎಸ್. ಜಾನಕಿ ಹಾಗೂ ಗಾನ ಗಂಧರ್ವ ಎಸ ಬಾಲಸುಬ್ರಮಣ್ಯಂ ವೇದಿಕೆಯಲ್ಲಿ ಅದ್ದೂರಿ ರಾಜ್ಯೋತ್ಸವವನ್ನು ಆಯೋಜಿಸಲಾಗಿದೆ.

2027ರ ಜನವರಿ ಮೊದಲೆರಡು ವಾರಗಳಲ್ಲಿ ಜಿಪಂ, ತಾಪಂ ಚುನಾವಣೆ

• ಉದಯವಾಹಿನಿ, ಬೆಂಗಳೂರು

ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಗಳು 2027ರ ಜನವರಿ ಮೊದಲ ಅಥವಾ 2ನೇ ವಾರ ನಡೆಯಲಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ತಿಳಿಸಿದರು. ಬೆಂಗಳೂರಿನಲ್ಲಿ ಮಾತಾಡಿದ ಈಶ್ವರ್ ಖಂಡ್ರೆ, ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಕರಡು ಮೀಸಲು ಅಧಿಸೂಚನೆ ಹೊರಡಿಸಿದೆ. ಬರುವ ಜನವರಿಯೊಳಗೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳು ನಡೆದೇ ನಡೆಯುತ್ತವೆ ಎಂದರು. ಅ.19ರ ವರೆಗೆ ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಸುಮಾರು 2 ಸಾವಿರಕ್ಕೂ ಅಧಿಕ ಆಕ್ಷೇಪಣೆ ಬಂದಿದ್ದು, ಅಧಿಕಾರಿಗಳು ನಿಯಮಾನುಸಾರ ಪರಿಶೀಲನೆ ಮಾಡುತ್ತಿದ್ದು, ಶೀಘ್ರವೇ ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ ಎಂದರು. ರಾಜ್ಯ ಸರ್ಕಾರ ಪ್ರಸ್ತಾವನೆ ಸಲ್ಲಿಸಿದ ತರುವಾಯ ರಾಜ್ಯ ಚುನಾವಣೆ ಆಯೋಗ, ಕೇಂದ್ರ ಚುನಾವಣೆ ಆಯೋಗದಿಂದ ಮತದಾರರ ಪಟ್ಟಿ ಪಡೆದು ಅಥವಾ ತನ್ನಲ್ಲಿರುವ ಮತದಾರರ ಪಟ್ಟಿಯನ್ನೇ ಪರಿಷ್ಕರಿಸಿ ಚುನಾವಣೆ ನಡೆಸುವ ಕುರಿತಂತೆ ಕ್ರಮ ವಹಿಸಲಿದೆ. ಬಹುತೇಕ ಜನವರಿ ಮೊದಲ ಅಥವಾ 2ನೇ ವಾರದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳು ನಡೆಯುತ್ತವೆ.

ಕಬ್ಬು ಬೆಳೆಗಾರರು ರಾಷ್ಟ್ರೀಯ ಹೆದ್ದಾರಿಗಳ ಬಂದ್‌ಗೆ ಕರೆ ನೀಡಿರುವ ಹಿನ್ನೆಲೆ ಬಾಗಲಕೋಟೆ ಜಿಲ್ಲೆಯಲ್ಲಿ ಬಿಎನ್‌ಎಸ್ 163ರಡಿ ಇಂದು ಬೆಳಗ್ಗೆ 6 ರಿಂದ ರಾತ್ರಿ 10ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಸಂಗಪ್ಪ ಆದೇಶಿಸಿದ್ದಾರೆ. ಈ ನಡುವೆಯೂ ಬಾಗಲಕೋಟೆ ಜಿಲ್ಲೆಯ ಬೀಳಗಿ ಕ್ರಾಸ್‌ನಲ್ಲಿ ರೈತರ ಪ್ರತಿಭಟನೆ ನಡೆದಿದೆ. ಹೆದ್ದಾರಿಗೆ ಅಡ್ಡಲಾಗಿ ಕಲ್ಲು, ಮುಳ್ಳು ಹಾಕಿ, ಟ್ರ್ಯಾಕ್ಟರ್ ನಿಲ್ಲಿಸಿ ಪ್ರತಿಭಟನೆ ನಡೆಸಲಾಗಿದ್ದು, ಪ್ರತಿಭಟನಾ ನಿರತರು ಪೋಲಿಸರೊಂದಿಗೆ ವಾಗ್ವಾದ ನಡೆಸಿದ್ದಾರೆ. ವಿಜಯಪುರ ಜಿಲ್ಲೆಯ 10 ಪ್ರಮುಖ ಸ್ಥಳಗಳಲ್ಲಿಯೂ ರೈತರಿಂದ ಪ್ರತಿಭಟನೆ, ಹೆದ್ದಾರಿ ತಡೆಗೆ ಸಿದ್ಧತೆ ಹಿನ್ನೆಲೆ ಇಂದು ಬೆಳಗ್ಗೆ 6ರಿಂದ ರಾತ್ರಿ 10ರ ಜಿಲ್ಲೆಯಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ. ಟೋಲ್ ಪ್ಲಾಜಾಗಳ ಪ್ರವೇಶ, ನಿರ್ಗಮನ ಮಾರ್ಗ ಬಂದ್ ಮಾಡುವಂತಿಲ್ಲ. ಟೋಲ್ ಸಂಗ್ರಹಣೆ ಮತ್ತು ಸಿಬ್ಬಂದಿ ಕರ್ತವ್ಯಕ್ಕೆ ಅಡ್ಡಿಪಡಿಸಬಾರದು. ಟ್ರ್ಯಾಕ್ಟರ್, ಲಾರಿ ಸೇರಿದಂತೆ ವಾಹನಗಳನ್ನು ಅಡ್ಡಲಾಗಿ ನಿಲ್ಲಿಸಿ ರಸ್ತೆ ತಡೆ ಮಾಡುವಂತಿಲ್ಲ. ಹೆದ್ದಾರಿಗಳಲ್ಲಿ ಧರಣಿ, ಮೆರವಣಿಗೆ ಹಾಗೂ ವಾಹನ ಸಂಚಾರಕ್ಕೆ ಅಡ್ಡಿಪಡಿಸುವುದಕ್ಕೆ ನಿರ್ಬಂಧವಿರಲಿದೆ. ಆಂಬುಲೆನ್ಸ್, ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ವಾಹನಗಳ ಸಂಚಾರಕ್ಕೆ ಅಡ್ಡಿ ಮಾಡುವಂತಿಲ್ಲ. ಸಾರ್ವಜನಿಕ ಆಸ್ತಿ ಹಾನಿ, ಸರ್ಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಡಿಸಿ ಡಾ.ಆನಂದ್ ಕೆ. ಆದೇಶಿಸಿದ್ದಾರೆ. ಧಾರವಾಡ ಜಿಲ್ಲೆಯಲ್ಲಿಯೂ ಇದೇ ರೀತಿಯ ಆದೇಶ ಮಾಡಲಾಗಿದೆ.







ಚಿಕ್ಕೋಡಿ ,ಅಥಣಿ ತಾಲ್ಲೂಕು ಸಂಪೂರ್ಣ ಸ್ತಬ್ಧ

ಬೆಳ್ಳಂಬೆಳಗ್ಗೆಯೇ ರಸ್ತೆಗಿಳಿದು ಠಿಕಾಣಿ ಹೂಡಿರುವ ರೈತರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಕಬ್ಬು ಬೆಳೆಗಾರರಿಗೆ ಆದಷ್ಟು ಬೇಗನೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆ ತೀವ್ರಗೊಳಿಸಿದ್ದಾರೆ. ಚಿಕ್ಕೋಡಿ-ಮಹಾಲಿಂಗಪುರ ಮಾರ್ಗದ ನಡುರಸ್ತೆಯಲ್ಲೇ ರೈತರು ಬೆಳಗಿನ ಉಪಹಾರವನ್ನು ತಯಾರಿಸುವ ಮೂಲಕ ಸರ್ಕಾರದ ವಿರುದ್ಧ ವಿಭಿನ್ನವಾಗಿ ಆಕ್ರೋಶ ಹೊರಹಾಕಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರು ರಸ್ತೆಗೆ ಮುಳ್ಳುಕಂಟಿ ಹಾಕಿ ರಸ್ತೆ ತಡೆ ನಡೆಸಿದ್ದಾರೆ. ಬಸ್ ಸಂಚಾರವಿಲ್ಲದೆ ಜನರು ಪರದಾಡುವಂತಾಗಿದೆ. ಬಂದ್‌ಗೆ ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ವ್ಯಾಪಾರಸ್ಥರು ಸ್ವಯಂಪ್ರೇರಿತವಾಗಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ. ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ಸಂಪೂರ್ಣ ಬಂದ್ ಆಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ಧಾರವಾಡದಲ್ಲಿ ನಿಷೇಧಾಜ್ಞೆ ಜಾರಿ

ಕಬ್ಬು ಬೆಳೆಗಾರರಿಂದ ಬಂದ್ ಕರೆ ಹಿನ್ನೆಲೆಯಲ್ಲಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಇಲ್ಲಿನ ಕಬ್ಬು ಬೆಳೆಗಾರರು ಸಹ ಬಂದ್ ಮಾಡುವ ಸಾಧ್ಯತೆಯಿದೆ. ಬೆಂಗಳೂರು ಪುಣೆ ಹೆದ್ದಾರಿ ಬಂದ್ ಸಾಧ್ಯತೆಯಿದ್ದು, ಸಾರ್ವಜನಿಕವಾಗಿ ತೊಂದರೆಯಾಗದಂತೆ ಶಾಂತಿ ಕಾಪಾಡುವಂತೆ ಜಿಲ್ಲಾಡಳಿತ ಮನವಿ ಮಾಡಿದೆ. ಇಲ್ಲಿನ ರೈತರು, ಪುಣೆ ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಲು ತೀರ್ಮಾನಿಸಿದ್ದು, ಈ ನಿಟ್ಟಿನಲ್ಲಿ ನಿಷೇಧ ಹೇರಲಾಗಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಸಂಪರ್ಕಿಸುವ ಪ್ರಮುಖ ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಪ್ರಯಾಣಿಕರ ಅಗತ್ಯ ಸಂಚಾರ, ವಸ್ತುಗಳ ಸಾಗಣೆ ವಾಣಿಜ್ಯ ಚಟುವಟಿಕೆ ಹಾಗೂ ಸರಕು ಸಾಗಣೆ ಮಾಡಲು ಪ್ರಮುಖ ರಸ್ತೆಯಾಗಿದೆ. ಇಲ್ಲಿಂದ ಪ್ರತಿದಿನ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕ ಹಾಗೂ ವಾಣಿಜ್ಯ ವಾಹನಗಳು ಸಂಚರಿಸುತ್ತದೆ. ಶಾಂತಿ ಕಾಪಾಡುವ ನಿಟ್ಟಿನಲ್ಲಿ ಮುಂದಿನ ಆದೇಶದವರೆಗೆ ಪುಣೆ ಬೆಂಗಳೂರು ಹೆದ್ದಾರಿ, ಹುಬ್ಬಳ್ಳಿ ಅಂಕೋಲಾ ರಾಷ್ಟ್ರೀಯ ಹೆದ್ದಾರಿ, ನವಲಗುಂದ ಸೋಲಾಪೂರ ರಾಷ್ಟ್ರೀಯ ಹೆದ್ದಾರಿ, ಹುಬ್ಬಳ್ಳಿ ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ ಹಾಗೂ ಅದರ ಸುತ್ತಮುತ್ತ ಐದು ಕಿಲೋಮೀಟರ್ ವ್ಯಾಪ್ತಿಯಲ್ಲಿ ನಿಷೇಧಿಸಲಾಗಿದೆ.

ಶಿವಾನಂದ ನೀಲಣ್ಣನವರ್‌ಗೆ ಇಡಿ ಶಾಕ್! 427 ಕೋಟಿ ಮೌಲ್ಯದ ಆಸ್ತಿ ಜಪ್ತಿ

• ಉದಯವಾಹಿನಿ, ಬೆಂಗಳೂರು

ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣನವರ್‌ಗೆ ಜಾರಿ ನಿರ್ದೇಶನಾಲಯ (ಇ.ಡಿ) ಬಿಗ್ ಶಾಕ್ ನೀಡಿದೆ. ಹೂಡಿಕೆದಾರರಿಂದ ಬರೋಬ್ಬರಿ 2,459 ಕೋಟಿ ರೂ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ 427 ಕೋಟಿ ರೂ ಮೌಲ್ಯದ ಆಸ್ತಿಯನ್ನು ಇ.ಡಿ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಫಿಕ್ಸೆಡ್ ಡೆಪಾಸಿಟ್, ಬ್ಯಾಂಕ್ ಖಾತೆಗಳಲ್ಲಿನ ಹಣ, ಷೇರು ಹೂಡಿಕೆ, ಕೃಷಿ ಜಮೀನು ಹಾಗೂ ಬಂಗಲೆ ಸೇರಿದಂತೆ ವಿವಿಧ ಆಸ್ತಿಗಳನ್ನು ಜಪ್ತಿ ಮಾಡಲಾಗಿದೆ. ಇಡಿ ಅಧಿಕಾರಿಗಳು ಒಟ್ಟು 427 ಕೋಟಿ ರೂ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿದ್ದಾರೆ. ಈ ಪೈಕಿ 367 ಕೋಟಿ ರೂ ಮೌಲ್ಯದ ಫಿಕ್ಸೆಡ್ ಡೆಪಾಸಿಟ್‌ಗಳು, 47 ಬ್ಯಾಂಕ್ ಖಾತೆಗಳಲ್ಲಿದ್ದ 44 ಕೋಟಿ ರೂ ಹಣ, 13 ಕೋಟಿ ರೂ ಮೌಲ್ಯದ ಸ್ಥಿರಾಸ್ತಿಗಳು ಹಾಗೂ ಷೇರು ಮಾರುಕಟ್ಟೆಯಲ್ಲಿನ 1.31 ಕೋಟಿ ರೂ ಹೂಡಿಕೆ ಸೇರಿದೆ. ಶಿವಂ ಅಸೋಸಿಯೇಟ್ಸ್ ಸಂಸ್ಥೆಯು 35 ಸಾವಿರಕ್ಕೂ ಹೆಚ್ಚು ಹೂಡಿಕೆದಾರರಿಂದ ಬರೋಬ್ಬರಿ 2,459 ಕೋಟಿ ರೂ ಹಣ ಸಂಗ್ರಹಿಸಿರುವುದು ಇಡಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಸಂಬಂಧ ಬೆಳಗಾವಿಯ ಮಾಳಮಾರುತಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಐಟಿ ಕಂಪನಿಗಳಲ್ಲಿ ಕನ್ನಡಿಗರಿಗೆ ಅನ್ಯಾಯ

• ಉದಯವಾಹಿನಿ, ಬೆಂಗಳೂರು

ಕರವೇ ಅಧ್ಯಕ್ಷ ನಾರಾಯಣ ಗೌಡ ನವೆಂಬರ್ 1ರಿಂದ ಕನ್ನಡಿಗರಿಗೆ ಉದ್ಯೋಗ ಮೀಸಲಾತಿಗಾಗಿ ರಾಜ್ಯವ್ಯಾಪಿ ಅಭಿಯಾನ ಆರಂಭಿಸಲಿದ್ದಾರೆ. ಐಟಿ-ಬಿಟಿ ಕಂಪನಿಗಳಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತಿದ್ದು, ಉದ್ಯೋಗದ ಅಂಕಿ-ಅಂಶಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ತಿಳಿಸಿದ್ದಾರೆ.

ಉದ್ಯಮಿಗಳ ಬೆದರಿಕೆಗೆ ಮಣಿಯದೆ, ಕಾಯ್ದೆ ಜಾರಿಗೆ ತರುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಒತ್ತಾಯಿಸಿದ್ದಾರೆ. ರಾಜ್ಯದ ಐಟಿ ಮತ್ತು ಬಿಟಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಆಗುತ್ತಿರುವ ಅನ್ಯಾಯವನ್ನು ಪ್ರಶ್ನಿಸಿ ಕರ್ನಾಟಕ ರಕ್ಷಣಾ ವೇದಿಕೆ ನವೆಂಬರ್ 1ರಿಂದ ರಾಜ್ಯವ್ಯಾಪಿ ಬೃಹತ್ ಅಭಿಯಾನವನ್ನು ಪ್ರಾರಂಭಿಸಲಿದೆ. ಕರವೇ ಅಧ್ಯಕ್ಷ ನಾರಾಯಣ ಗೌಡ ಅವರು ಈ ಅಭಿಯಾನದ ಬಗ್ಗೆ ಮಾಹಿತಿ ನೀಡಿದ್ದು, ಕನ್ನಡಿಗರಿಗೆ ಉದ್ಯೋಗ ಮೀಸಲಾತಿಯನ್ನು ಕಾಯ್ದೆ ರೂಪದಲ್ಲಿ ತರುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ. ನವೆಂಬರ್ 1ರಿಂದ 30ರವರೆಗೆ ನಡೆಯಲಿರುವ ಈ ಅಭಿಯಾನದಲ್ಲಿ, ಕರವೇ ತಂಡಗಳು ರಾಜ್ಯದ ಐಟಿ ಸೇರಿದಂತೆ ವಿವಿಧ ಉದ್ಯಮಗಳಿಗೆ ಭೇಟಿ ನೀಡಿ, ಕನ್ನಡಿಗರಿಗೆ ನೀಡಲಾಗಿರುವ ಉದ್ಯೋಗಗಳ ಕುರಿತು ಅಂಕಿ-ಅಂಶಗಳನ್ನು ಸಂಗ್ರಹಿಸಲಿವೆ.

ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ರೈತರು ಕಿಡಿ

ಕಬ್ಬು ಬೆಳೆಗಾರರಿಂದ ಕರ್ನಾಟಕ ಬಂದ್



• ಉದಯವಾಹಿನಿ, ಬೆಂಗಳೂರು

ಪ್ರತಿ ಟನ್ ಕಬ್ಬಿಗೆ 5,500 ರೂ. ಹಾಗೂ ಸಕ್ಕರೆಗೆ ಎಂಎಸ್ಪಿ(ಕನಿಷ್ಠ ಬೆಂಬಲ ಬೆಲೆ) ನಿಗದಿಪಡಿಸುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ನೀಡಿರುವ ರಾಜ್ಯ ಬಂದ್‌ಗೆ ಬೆಳಗಾವಿ ಜಿಲ್ಲೆಯ ವಿವಿಧೆಡೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಜಿಲ್ಲಾ ಕೇಂದ್ರ ಮಾತ್ರವಲ್ಲದೆ ತಾಲ್ಲೂಕು ಹಾಗೂ ಗ್ರಾಮೀಣ ಪ್ರದೇಶದ ಕೆಲವೆಡೆ ರಸ್ತೆ ತಡೆದು ವಾಹನ ಸಂಚಾರಕ್ಕೆ ಅಡ್ಡಿಪಡಿಸುವ ಮೂಲಕ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಳಗಾವಿ ಕೇಂದ್ರ ಬಸ್ ನಿಲ್ದಾಣದಲ್ಲಿ ರೈತ ಮುಖಂಡರು ಬಸ್ ಕಾರ್ಯಾಚರಣೆ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲು ಯತ್ನಿಸಿದರು. ಬಸ್‌ಗಳ ಮುಂದೆ ಅಡ್ಡಲಾಗಿ ಕುಳಿತು ಸಂಚಾರ ತಡೆದರು. ಇದರಿಂದ ಬಸ್ ಸಂಚಾರ ಸ್ಥಗಿತಗೊಂಡು ಪ್ರಯಾಣಿಕರು ಪರದಾಡುವಂತಾಯಿತು. ಕಬ್ಬಿಗೆ ನ್ಯಾಯಯುತ ಬೆಲೆ ನಿಗದಿಪಡಿಸುವವರೆಗೆ ಹೋರಾಟ ಕೈಬಿಡುವುದಿಲ್ಲ ಎಂದು ರೈತರು ಘೋಷಿಸಿದರು. ಒಂದು ಗಂಟೆ ಬಳಿಕ ಪೊಲೀಸರು ಪ್ರತಿಭಟನಾನಿರತರನ್ನು ವಶಕ್ಕೆ ಪಡೆಯಲು ಮುಂದಾದರು. ಈ ವೇಳೆ ಮಾತನಾಡಿದ ರೈತ ಮುಖಂಡ ಕಿಶನ್ ನಂದಿ, ಗ್ಯಾರಂಟಿ ಯೋಜನೆ ಜಾರಿಗೊಳಿಸುವಾಗ ನೀವೇನು ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದಿದ್ದರಾ.. ಎರಡು ತಿಂಗಳು ಗ್ಯಾರಂಟಿಗಳನ್ನು ಬಂದ್ ಮಾಡಿ, ಪ್ರತಿ ಟನ್ ಕಬ್ಬಿಗೆ 1 ಸಾವಿರ ರೂ. ಪ್ರೋತ್ಸಾಹಧನ ನೀಡಬೇಕು. ಇಲ್ಲದಿದ್ದರೆ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ, ಮನೆಗೆ ಹೋಗು, ಮುಂದೆ ಬರುವ ಮುಖ್ಯಮಂತ್ರಿ ಮುಂದೆ ನಮ್ಮ ಬೇಡಿಕೆ ಇಡುತ್ತೇವೆ. ಜೊತೆಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಎಂಎಸ್ಪಿ 60 ರೂ. ಮಾಡಲೇಬೇಕು. ಪೊಲೀಸರ ಮೂಲಕ ನಮ್ಮ ಹೋರಾಟ ತಡೆಯುವ ಕೆಲಸ ಸರ್ಕಾರ ಮಾಡುತ್ತಿದೆ. ಇದಕ್ಕೆ ನಾವು ಹೆದರುವುದಿಲ್ಲ. ಲಕ್ಷಾಂತರ ರೈತರು ಜೈಲಿಗೆ ಹೋಗಲು ಸಿದ್ಧರಿದ್ದೇವೆ ಎಂದು ಎಚ್ಚರಿಸಿದ್ದಾರೆ. ರಾಮದುರ್ಗ ತಾಲ್ಲೂಕಿನ ಸುರೇಬಾನ ಸುತ್ತಮುತ್ತಲಿನ ಗೊಣ್ಣಾಗರ, ಹಂಪಿಹೊಳಿ ಹಾಗೂ ಮುಳ್ಳೂರು ಗ್ರಾಮಗಳಲ್ಲಿಯೂ ರಸ್ತೆ ತಡೆದಿರುವ ರೈತ ಹೋರಾಟಗಾರರು, ರಾಜ್ಯ ಬಂದ್‌ಗೆ ಬೆಂಬಲ ಸೂಚಿಸಿದ್ದಾರೆ. ಅದೇ ರೀತಿ ಗೋಕಾಕ್ – ಹಿಡಕಲ್ ಡ್ಯಾಂ ರಾಜ್ಯ ಹೆದ್ದಾರಿ ತಡೆದು ರೈತರು ಪ್ರತಿಭಟನೆ ಹಮ್ಮಿಕೊಂಡಿದ್ದಾರೆ. ಗೋಕಾಕ್ ತಾಲ್ಲೂಕಿನ ಹಲವೆಡೆ ಬಸ್‌ಗಳ ಸಂಚಾರ ಬಂದ್ ಆಗಿದೆ. ರಸ್ತೆಯಲ್ಲೇ ಅಡುಗೆ ಮಾಡಿ ಅನ್ನದಾತರು ಭಾರೀ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಸ್ತೆಗೆ ಅಡ್ಡಲಾಗಿ ನೀರಿನ್ ಟ್ಯಾಂಕರ್ ನಿಲ್ಲಿಸಿ ಸಂಚಾರ ಬಂದ್ ಮಾಡಲಾಗಿದೆ. ಗೋಕಾಕ್–ಹಿಡಕಲ್ ಡ್ಯಾಂ ಸಂಪರ್ಕಿಸುವ ರಾಜ್ಯ ಹೆದ್ದಾರಿ ಸಂಪೂರ್ಣ ಬಂದ್ ಆಗಿದ್ದು, ವಾಹನ ಸವಾರರು ಪರದಾಡುವಂತಾಗಿದೆ. ಹಳ್ಳಿ ಹಳ್ಳಿಗಳಲ್ಲೂ ರೈತರ ಪ್ರತಿಭಟನೆ ವ್ಯಾಪಿಸಿದ್ದು, ಮೂಡಲಗಿ ತಾಲ್ಲೂಕಿನ ಮುಸಗುಪ್ಪಿ–ಮಹಾಲಿಂಗಪುರ ಸಂಪರ್ಕಿಸುವ ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಲಾಗಿದೆ.



ಪ್ರಧಾನಮಂತ್ರಿಗೆ ಪತ್ರ ಬರೆದು ಮನವಿ

ಕಬ್ಬಿನ ದರ ನಿಗದಿ ವಿಚಾರವಾಗಿ ರೈತ ಮುಖಂಡರು ಹಾಗೂ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳೊಂದಿಗೆ ಈಗಾಗಲೇ ಮಾತುಕತೆ ನಡೆಸಲಾಗಿದೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಕೇಂದ್ರ ಸರ್ಕಾರದಿಂದ ದರ ನಿಗದಿಪಡಿಸುವುದಾಗಿ ಭರವಸೆ ನೀಡಿದ್ದಾರೆ. ಕೇಂದ್ರ ಸರ್ಕಾರ ಎಷ್ಟು ದರ ನಿಗದಿಪಡಿಸುತ್ತದೆಯೋ ಅದರ ಪ್ರಯೋಜನವನ್ನು ರೈತರಿಗೆ ತಲುಪಿಸುವ ಕುರಿತು ಕಾರ್ಖಾನೆಗಳೊಂದಿಗೆ ಚರ್ಚಿಸಲಾಗಿದೆ ಎಂದು ಹೇಳಿದರು. ಕೇಂದ್ರ ಸರ್ಕಾರ ಕೈಗೊಳ್ಳುವ ತೀರ್ಮಾನಕ್ಕೆ ಅನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ರೈತರಿಗೆ ನಿಗದಿತ ದರ ದೊರೆಯುವಂತೆ ಸಕ್ಕರೆ ಕಾರ್ಖಾನೆಗಳ ಮೂಲಕ ಹಣ ಪಾವತಿಸುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ವಹಿಸಿಕೊಳ್ಳಲಿದೆ ಎಂದು ತಿಳಿಸಿದರು.

ಸಕ್ಕರೆಯ ಬೆಲೆಯನ್ನು ಕನಿಷ್ಠ ಕೆಜಿಗೆ 50ಕ್ಕೆ ಹೆಚ್ಚಿಸುವಂತೆ ಸಂಬಂಧಪಟ್ಟ ಸಮಿತಿಯ ಮುಂದೆಯೂ ಮನವಿ ಮಾಡಲಾಗಿದೆ.

ಕಳೆದ ಎಂಟು ವರ್ಷಗಳಿಂದ ಸಕ್ಕರೆಯ ಬೆಲೆಯಲ್ಲಿ ಒಂದು ರೂಪಾಯಿಯಷ್ಟು ಹೆಚ್ಚಳವಾಗಿಲ್ಲ. ಸಕ್ಕರೆಯ ಬೆಲೆ ಹೆಚ್ಚಳವಾದರೆ ಮಾತ್ರ ಕಬ್ಬು ಬೆಳೆಗಾರರಿಗೆ ಉತ್ತಮ ದರ ನೀಡಲು ಸಾಧ್ಯವಾಗುತ್ತದೆ ಎಂದು ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಕ್ಕರೆಯ ಬೆಲೆ ಹೆಚ್ಚಿಸುವುದು ಅಗತ್ಯವಾಗಿದೆ. ಉತ್ಪಾದನಾ ವೆಚ್ಚ ಸೇರಿದಂತೆ ವಿವಿಧ ಕಾರಣಗಳಿಂದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಹೀಗಾಗಿ ರೈತರ ಹಿತ ಕಾಪಾಡಲು ಕೇಂದ್ರ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ರೈತರ ಸಮಸ್ಯೆಗಳ ಕುರಿತು ಈಗಾಗಲೇ ಪ್ರಧಾನಮಂತ್ರಿಗೆ ಪತ್ರ ಬರೆದು ಮನವಿ ಮಾಡಲಾಗಿದೆ.

ರಸ್ತೆ ಸಂಚಾರ ಬಂದ್

ರಾಯಬಾಗ ತಾಲ್ಲೂಕಿನ ಬಾವನ ಸೌಂದತ್ತಿ, ಯಡ್ರಾ ಗ್ರಾಮದಲ್ಲಿ ಅಂಕಲಿ-ರಾಯಬಾಗ ರಸ್ತೆಗೆ ಟೈರ್‌ಗಳಿಗೆ ಬೆಂಕಿ ಹಚ್ಚಿ ರಸ್ತೆ ಸಂಚಾರ ಬಂದ್ ಮಾಡಲಾಯಿತು. ಕಬ್ಬೂರು ಗ್ರಾಮದಲ್ಲಿ ನಿಪ್ಪಾಣಿ-ಮೂಡಲಗಿ ರಾಜ್ಯ ಹೆದ್ದಾರಿಯನ್ನು ರೈತರು ತಡೆದಿದ್ದಾರೆ.

ಇನ್ನು ಅಥಣಿಯ ಅಂಬೇಡ್ಕರ್ ವೃತ್ತ ಸೇರಿದಂತೆ ವಿವಿಧೆಡೆ ರಾಷ್ಟ್ರೀಯ ಹೆದ್ದಾರಿ ಮಾರ್ಗಗಳಲ್ಲಿಯೂ ರೈತರು ಪ್ರತಿಭಟನೆ ನಡೆಸಿದ್ದಾರೆ. ಬೆಳಗಾವಿ ಕೇಂದ್ರ ಬಸ್ ನಿಲ್ದಾಣ ಹಾಗೂ ಪ್ರಮುಖ ಪ್ರತಿಭಟನಾ ಸ್ಥಳಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಮುನ್ನೆಚ್ಚರಿಕೆವಹಿಸಲಾಗಿದೆ. ಈವರೆಗೆ ಬೆಳಗಾವಿ ಮಹಾನಗರದಲ್ಲಿ ಕೇಂದ್ರ ಬಸ್ ನಿಲ್ದಾಣ ಬಿಟ್ಟರೆ, ಬೇರೆ ಕಡೆ ಬಂದ್ ಬಿಸಿ ತಟ್ಟಿಲ್ಲ, ಎಂದಿನಂತೆ ಶಾಲಾ-ಕಾಲೇಜು, ವಾಹನಗಳ ಓಡಾಟ, ವ್ಯಾಪಾರ-ವಹಿವಾಟು ಎಂದಿನಂತಿವೆ. ಇನ್ನು ಸಿಬಿಟಿಯಲ್ಲಿ ಸಿಟಿ ಬಸ್‌ಗಳು ಸಂಚರಿಸುತ್ತಿದ್ದವು. ಬಸ್ ಸಂಚಾರ ತಡೆಯಲು ಯತ್ನಿಸಿದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈಗ ಕೇಂದ್ರ ಬಸ್ ನಿಲ್ದಾಣದಲ್ಲೂ ವಾಹನಗಳ ಓಡಾಟ ಶುರು ಆಗಿದೆ.



ಕಬ್ಬಿಗೆ ಸೂಕ್ತ ಬೆಲೆ ನಿಗದಿಗೆ ಮನವಿ

ರಾಜ್ಯದ ಕಬ್ಬು ಬೆಳೆಗಾರರಿಗೆ ನ್ಯಾಯಯುತ ಬೆಲೆ ದೊರಕಿಸಿಕೊಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷ ಚುನ್ನಪ್ಪ ಪೂಜಾರಿ ಅವರು ಸಂಪೂರ್ಣ ಕರ್ನಾಟಕ ಬಂದ್‌ಗೆ ಕರೆ ನೀಡಿರುವ ಹಿನ್ನಲೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಕೋಡಿಹಳ್ಳಿ ಬಣ) ಬೀದರ್ ಜಿಲ್ಲಾ ಘಟಕ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ಮನವಿ ಪತ್ರ ಸಲ್ಲಿಸಿದೆ. ಈ ಕುರಿತು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಅವರಿಗೆ ಸಲ್ಲಿಸಿದ ಮನವಿಯಲ್ಲಿ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಪ್ರತಿ ಟನ್ ಕಬ್ಬಿಗೆ 5,500 ರೂ. ಬೆಲೆ ನಿಗದಿಪಡಿಸಬೇಕು. ಕೃಷಿ ವೆಚ್ಚ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಕಬ್ಬಿನ ಬೆಳೆಯಿಂದ ನ್ಯಾಯಯುತ ಆದಾಯ ದೊರೆಯುವಂತೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ. ರೈತರ ಬೇಡಿಕೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಕಬ್ಬಿಗೆ ಸೂಕ್ತ ಬೆಲೆ ನಿಗದಿಪಡಿಸಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ಬೀದಿಗಿಳಿದು ತೀವ್ರ ಹೋರಾಟ ನಡೆಸಲಾಗುವುದು ಎಂದು ಸಂಘದ ಪದಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಕನ್ನಡ ವಿಷಯವೇ ಮಕ್ಕಳಿಗೆ ಕಬ್ಬಿಣದ ಕಡಲೆಯಾಯ್ತಾ?

• ಉದಯವಾಹಿನಿ, ಬೆಂಗಳೂರು

ಕನ್ನಡಿಗರ ಮಕ್ಕಳಿಗೆ ಕನ್ನಡ ಕಬ್ಬಿಣದ ಕಡಲೆ ಆಗಿದೆಯಾ, ಮಾತೃ ಭಾಷೆಯಲ್ಲೇ ಮಕ್ಕಳ ಕಲಿಕೆ ಕಷ್ಟವಾಗುತ್ತಿದೆಯಾ ಎಂಬ ಅನುಮಾನಗಳು ಮೂಡಿವೆ. ಏಕೆಂದರೆ 2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬರೋಬ್ಬರಿ 1.65 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಕನ್ನಡ ವಿಷಯದಲ್ಲೇ ಫೇಲ್ ಆಗಿದ್ದಾರೆ. ಈ ಆಘಾತಕಾರಿ ಫಲಿತಾಂಶ ಬೆನ್ನಲ್ಲೇ ಕನ್ನಡ ಪಠ್ಯಪುಸ್ತಕಗಳ ಪರಿಷ್ಕರಣೆಗೆ ತಜ್ಞರ ಸಮಿತಿ ಶಿಫಾರಸು ಮಾಡಿದೆ. ಮಕ್ಕಳಿಗೆ ಕನ್ನಡ ಕಲಿಕೆ ಕಷ್ಟವಾಗುತ್ತಿದೆಯಾ, ಮಾತೃ ಭಾಷೆಯಲ್ಲೇ ಮಕ್ಕಳು ಹಿಂದೆ ಬೀಳುತ್ತಿದ್ದಾರಾ? ಇಂತಹದ್ದೊಂದು ಪ್ರಶ್ನೆ ಇದೀಗ ಶಿಕ್ಷಣ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಏಕೆಂದರೆ 2025–26ನೇ ಸಾಲಿನ ಪರೀಕ್ಷೆಯ ಕನ್ನಡ ವಿಷಯದ ಫಲಿತಾಂಶ ಆತಂಕ ಮೂಡಿಸಿದೆ. ಸುಮಾರು 7 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರೆ, ಬರೋಬ್ಬರಿ 1.65 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಕನ್ನಡ ವಿಷಯದಲ್ಲೇ ಅನುತ್ತೀರ್ಣರಾಗಿದ್ದಾರೆ.

ಸಾರ್ವಜನಿಕ ದೋಷಾರೋಪ: ಸಿಇಸಿ ಜ್ಞಾನೇಶ್ ಕುಮಾರ್ ವಿರುದ್ಧ ನಿರ್ಣಯ ಅಂಗೀಕರಿಸಿದ INDIA ಒಕ್ಕೂಟ

• ಉದಯವಾಹಿನಿ, ಬೆಂಗಳೂರು

ಮತ ಕಳ್ಳತನ ಮತ್ತು ಕುಮಾರ್ ಅವರನ್ನು ಪದಚ್ಯುತಗೊಳಿಸಲು ಒತ್ತಾಯಿಸಿ ಪ್ರತಿಪಕ್ಷಗಳ ಮಹಾರ್‍ಯಾಲಿಗೆ ಒಂದು ದಿನ ಮೊದಲು ನವದೆಹಲಿಯಲ್ಲಿ ಆಯೋಜಿಸಲಾದ ಸಾರ್ವಜನಿಕ ದೋಷಾರೋಪಣೆ ಕಾರ್ಯಕ್ರಮದಲ್ಲಿ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ವಿರುದ್ಧ ಸರ್ವಾನುಮತದ ನಿರ್ಣಯ ಅಂಗೀಕರಿಸಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಈ ನಿರ್ಣಯವನ್ನು ಅಂಗೀಕರಿಸಲಾಯಿತು.

ಮಾಜಿ ಲೋಕಸಭಾ ಸ್ಪೀಕರ್ ಮತ್ತು ಹಿರಿಯ ಕಾಂಗ್ರೆಸ್ ನಾಯಕಿ ಮೀರಾ ಕುಮಾರ್ ಅವರು ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಇದರಲ್ಲಿ ಎಸ್‌ಪಿ, ಆರ್‌ಜೆಡಿ, ಎನ್‌ಸಿಪಿ (ಎಸ್‌ಸಿಪಿ), ಶಿವಸೇನೆ (ಯುಬಿಟಿ), ಜೆಎಂಎಂ, ಜೆಕೆಎನ್‌ಸಿ, ಜೆಕೆಪಿಡಿಪಿ, ಕೇರಳ ಕಾಂಗ್ರೆಸ್ (ಎಂ), ಸಿಪಿಐ ಮತ್ತು ನಾಗರಿಕ ಸಮಾಜದ ಸದಸ್ಯರು ಸೇರಿದಂತೆ ಭಾರತೀಯ ಬ್ಲಾಕ್ ಪಕ್ಷಗಳ ಹಲವಾರು ನಾಯಕರು ಭಾಗವಹಿಸಿದ್ದರು.



ಅಣಕು ಸಂಸತ್‌ನಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸುವ ಪ್ರಸ್ತಾವನೆಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ.



ಅವರ ವಿರುದ್ಧ ದೇಶದ್ರೋಹದ ಆರೋಪದಡಿ ವಿಚಾರಣೆ ನಡೆಯಬೇಕು ಮತ್ತು ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ. ಪರಿಸ್ಥಿತಿ ಬದಲಾಗುತ್ತಿದೆ, ಇಲ್ಲಿ ಒಂದು ಹೊಸ ರಾಜಕೀಯ ಅಸ್ತ್ರ ಬಂದಿದೆ. ಇದು ನಿಮಗೆ ತೀವ್ರವಾದ ಪೆಟ್ಟು ನೀಡಲಿದೆ ಎಂದು ಅಧಿಕಾರಿಗಳಿಗೆ ರಾಹುಲ್ ಗಾಂಧಿ ಇದೇ ವೇಳೆ ಎಚ್ಚರಿಕೆ ನೀಡಿದ್ದಾರೆ.

ಬಿಜೆಪಿ ಚುನಾವಣೆಗಳಲ್ಲಿ ಅಕ್ರಮ ಎಸಗುವುದನ್ನು ಮುಂದುವರಿಸಬಹುದು. ಆದರೆ, ಭಾರತದ ಜನರು ಮತ್ತು ವಿರೋಧ ಪಕ್ಷದ ಸದಸ್ಯರು ಇದನ್ನು ಕ್ಷಮಿಸುವುದಿಲ್ಲ ಹಾಗೂ ಮರೆಯುವುದೂ ಇಲ್ಲ ಎಂದು ರಾಹುಲ್ ಗಾಂಧಿ ಇದೇ ವೇಳೆ ಎಚ್ಚರಿಕೆ ನೀಡಿದರು. 'ಜ್ಞಾನೇಶ್ ಕುಮಾರ್ ಕೇವಲ ಕೈಗೊಂಬೆ, ಪ್ರಧಾನಿ ಮೋದಿ, ಅಮಿತ್ ಶಾ ಮುಖ್ಯ ಕೈಗೊಂಬೆಗಳು' ಎಂದು ಟಿಎಂಸಿಯ ಮಹುವಾ ಮೊಯಿತ್ರಾ ಹೇಳಿದ್ದಾರೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ನಮ್ಮ ಪ್ರಜಾಪ್ರಭುತ್ವವನ್ನು ವ್ಯವಸ್ಥಿತವಾಗಿ ನಾಶಪಡಿಸಿದ್ದಾರೆ ಎಂದು ತೃಣಮೂಲ ಸಂಸದ ಮಹುವಾ ಮೊಯಿತ್ರಾ ಶನಿವಾರ ಆರೋಪಿಸಿದ್ದಾರೆ.

ಈ ಸಂಪೂರ್ಣ ಎಸ್‌ಐಆರ್ ಬಿಜೆಪಿ ರೂಪಿಸಿದ ಒಂದು ಮೆಕಿಯಾವೆಲಿಯನ್ ಯೋಜನೆಯಾಗಿತ್ತು. ಯಾವುದೇ ತಪ್ಪು ಮಾಡಬೇಡಿ, ಜ್ಞಾನೇಶ್ ಕುಮಾರ್ ಕೇವಲ ಕೈಗೊಂಬೆ. ಮುಖ್ಯ ಕೈಗೊಂಬೆಗಳು ಅಮಿತ್ ಶಾ ಮತ್ತು ನರೇಂದ್ರ ಮೋದಿ ಎಂದು ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಅಕ್ರಮಗಳ ಕುರಿತು ಸಿಇಸಿ ಜ್ಞಾನೇಶ್ ಕುಮಾರ್ ವಿರುದ್ಧ ದೋಷಾರೋಪಣೆಗೆ ಒತ್ತಾಯಿಸಿ ನಡೆದ ಇಂಡಿಯಾ ಬ್ಲಾಕ್‌ನ ಅಣಕು ಸಂಸತ್ತಿನಲ್ಲಿ ಮೊಯಿತ್ರಾ ಆಗ್ರಹಿಸಿದರು.

ಮತ್ತೊಂದು ಕಡೆ, ಚುನಾವಣಾ ಆಯೋಗವು ಮತದಾರರ ಪಟ್ಟಿಗಳ ಪರಿಷ್ಕರಣೆಗಾಗಿ ಕೈಗೊಂಡಿರುವ ವಿವಾದಾತ್ಮಕ 'ವಿಶೇಷ ತೀವ್ರ ಪರಿಷ್ಕರಣೆ' ಪ್ರಕ್ರಿಯೆಯ ಮೂಲಕ, ಜನರ ಮತದಾನದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ ಎಂದು ಶಿವಸೇನೆ (ಯುಬಿಟಿ) ಸಂಸದ ಅರವಿಂದ ಸಾವಂತ್ ದೂರಿದ್ದಾರೆ.

ಸಾಂಕೇತಿಕ ಸಂಸತ್ ಅಧಿವೇಶ

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸುವ ಕುರಿತು 'ಇಂಡಿಯಾ' ಒಕ್ಕೂಟವು ಆಯೋಜಿಸಿದ್ದ ಸಾಂಕೇತಿಕ ಸಂಸತ್ ಅಧಿವೇಶನದಲ್ಲಿ ಮಾತನಾಡಿದ ಸಾವಂತ್, ಜ್ಞಾನೇಶ್ ಕುಮಾರ್ ಅವರ ವಿರುದ್ಧದ ಈ ಪದಚ್ಯುತಿ ಪ್ರಕ್ರಿಯೆಗೆ ತಮ್ಮ ಪಕ್ಷವು ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ತಿಳಿಸಿದರು. ರಾಷ್ಟ್ರ ರಾಜಧಾನಿಯಲ್ಲಿ ಶುಕ್ರವಾರ ಸುರಿದ ಮಳೆಯ ಕಾರಣದಿಂದಾಗಿ ಮುಂದೂಡಲ್ಪಟ್ಟಿದ್ದ ಈ 'ಅಣಕು ಸಂಸತ್ತು' ಕಾರ್ಯಕ್ರಮವನ್ನು ಇಂದಿಗೆ ನಿಗದಿ ಮಾಡಲಾಗಿತ್ತು. ಹಿರಿಯ ನಾಯಕರಿಗೆ ಯಾವುದೇ ಅನಾನುಕೂಲವಾಗದಂತೆ ಎಲ್ಲರ ಒಮ್ಮತದ ಮೇರೆಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತಿಳಿಸಿದ್ದರು.


ಈ ದಿನದ ದರ ಪೆಟ್ರೋಲ್: 111.68 ₹/L ಡೀಸೆಲ್ : 99.56 ₹/L ಬಂಗಾರ: ₹13,888/Gram24ct ₹12,730/Gram22ct ಬೆಳ್ಳಿ: ₹200.00/Gram

ಸ್ಟಿಂಗ್ ಪ್ರಕರಣದ ಬೆನ್ನಲ್ಲೇ ಕಾಂಗ್ರೆಸ್‌ನಿಂದ ಕೃಪಾ ಆಳ್ವಾ ಉಚ್ಚಾಟನೆ

• ಉದಯವಾಹಿನಿ, ಬೆಂಗಳೂರು

ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರ ಸೂಚನೆ ಮೇರೆಗೆ ಕಾಂಗ್ರೆಸ್ ನಾಯಕಿ ಕೃಪಾ ಆಳ್ವಾ ಅವರನ್ನು ಕಾಂಗ್ರೆಸ್‌ನಿಂದ ಉಚ್ಚಾಟನೆ ಮಾಡಲಾಗಿದೆ.

ಸ್ಟಿಂಗ್ ಪ್ರಕರಣದಲ್ಲಿ ಹೆಸರು ಕೇಳಿ ಬಂದಿದ್ದು, ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪ ಹಿನ್ನೆಲೆ ಕಾಂಗ್ರೆಸ್ ಕೃಪಾ ಆಳ್ವಾ ಅವರಿಗೆ ನೋಟಿಸ್ ನೀಡಿತ್ತು. ಆದರೆ ಈವರೆಗೆ ನೋಟಿಸ್‌ಗೆ ಪ್ರತಿಕ್ರಿಯಿಸಿರಲಿಲ್ಲ. ಹೀಗಾಗಿ ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರ ಸೂಚನೆ ಮೇರೆಗೆ ಕೃಪಾ ಆಳ್ವಾ ಅವರನ್ನು ಕಾಂಗ್ರೆಸ್‌ನಿಂದ ಉಚ್ಚಾಟನೆ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಮುಖಂಡರುಗಳನ್ನು ಗುರಿಯಾಗಿಸಿ ಸ್ಟಿಂಗ್ ಆಪರೇಶನ್ ನೆಡೆಸಲಾಗಿದೆ ಎಂಬ ಪ್ರಕರಣದ ಬಗ್ಗೆ ನಕಾರಾತ್ಮಕ ಪ್ರಚಾರ ಹಾಗೂ ಪ್ರತಿಕ್ರಿಯೆಗಳಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ಮುಜುಗರ ಎದುರಾದ ಹಿನ್ನಲೆ ಈ ಘಟನೆಯಲ್ಲಿ


ಉದಯವಾಹಿನಿ ಚಿತ್ರ

ತಾವು ಭಾಗಿಯಾಗಿದ್ದಾರೆಂಬ ಆರೋಪಗಳ ಹಿನ್ನಲೆ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ಕೆಪಿಸಿಸಿ ವತಿಯಿಂದ ಕಾರಣ ಕೇಳಿ ನೀಡಲಾದ ನೋಟಿಸ್‌ಗೆ ಇದುವರೆಗೂ ಯಾವುದೇ ರೀತಿಯ ಉತ್ತರ ಅಥವಾ ಸಮಜಾಯಿಷಿ ನೀಡಿಲ್ಲ.

ಈ ಸ್ಟಿಂಗ್ ಪ್ರಕರಣದಲ್ಲಿ ತಮ್ಮ ಹೆಸರು ಕೇಳಿ ಬಂದ ಕಾರಣದಿಂದ ಹಾಗೂ ಈ ಪ್ರಕರಣದಲ್ಲಿ ನಿಮ್ಮ ನಡವಳಿಕೆ ಪಕ್ಷ ವಿರೋಧಿ ಚಟುವಟಿಕೆಯಾಗಿದ್ದು, ಕೆಪಿಸಿಸಿ ಅಧ್ಯಕ್ಷರ ಸೂಚನೆಯ ಮೇರೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಕೃಪಾ ಆಳ್ವಾ ಅವರನ್ನು ಪಕ್ಷದಿಂದ ಆರು ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ದೀಪಾವಳಿ ಕೆಎಸ್‌ಆರ್‌ಟಿಸಿಯಿಂದ 2,600 ಹೆಚ್ಚುವರಿ ಬಸ್‌ಗಳ ವಿಶೇಷ ವ್ಯವಸ್ಥೆ

• ಉದಯವಾಹಿನಿ, ಬೆಂಗಳೂರು

ದೀಪಾವಳಿ ಹಬ್ಬ ಹಾಗೂ ಸಾಲು ಸಾಲು ರಜೆಗಳ ಹಿನ್ನೆಲೆಯಲ್ಲಿ ಊರುಗಳಿಗೆ ತೆರಳುವ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು (ಕೆಎಸ್‌ಆರ್‌ಟಿಸಿ) ಬೃಹತ್ ಮಟ್ಟದ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿದೆ.

ನವೆಂಬರ್ 6ರಿಂದ 8ರವರೆಗೆ ಬೆಂಗಳೂರಿನಿಂದ ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ನೆರೆ ರಾಜ್ಯಗಳ ಪ್ರಮುಖ ನಗರಗಳಿಗೆ ಒಟ್ಟು 2,600 ಹೆಚ್ಚುವರಿ ವಿಶೇಷ ಬಸ್‌ಗಳನ್ನು ಕಾರ್ಯಾಚರಣೆ ಮಾಡಲು ನಿಗಮ ನಿರ್ಧರಿಸಿದೆ. ನವೆಂಬರ್ 7 ಮತ್ತು 8ರಂದು ವಾರಾಂತ್ಯದ ರಜೆ ಹಾಗೂ ನವೆಂಬರ್ 8ರಂದು ನರಕ ಚತುರ್ದಶಿ ಹಬ್ಬವಿರುವುದರಿಂದ ಪ್ರಯಾಣಿಕರ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗುವ ನಿರೀಕ್ಷೆಯಿದೆ.

ಈ ಹಿನ್ನೆಲೆಯಲ್ಲಿ ಹಬ್ಬ ಮುಗಿಸಿ ಮರಳಿ ಬೆಂಗಳೂರಿಗೆ ಆಗಮಿಸುವ ಪ್ರಯಾಣಿಕರಿಗಾಗಿ ನವೆಂಬರ್ 10 ಮತ್ತು 11ರಂದು ವಿವಿಧ ಸ್ಥಳಗಳಿಂದ ವಿಶೇಷ ಬಸ್ ಸೇವೆ ಲಭ್ಯವಿರಲಿದೆ.

ಈ ವಿಶೇಷ ಬಸ್‌ಗಳು ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಹಾಗೂ ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣಗಳಿಂದ ನಿರ್ಗಮಿಸಲಿವೆ.

ವಾರಾಂತ್ಯದ ರಜೆ, ನವೆಂಬರ್ 8ರಂದು ನರಕ ಹೆಚ್ಚುವರಿಯಾಗಿ, ಮುಂಗಡ ಟಿಕೆಟ್ ಕಾಯ್ದಿರಿಸಿದ ಪ್ರಯಾಣಿಕರ ಸುಲಭ ಸಂಚಾರಕ್ಕಾಗಿ ಶಾಂತಿನಗರ,ವಿಜಯನಗರ, ಯಶವಂತಪುರ, ಜಯನಗರ ಟಿಟಿಎಂಸಿಗಳು, ಮಲ್ಲೇಶ್ವರಂ 18ನೇ ಕ್ರಾಸ್, ಬಸವೇಶ್ವರನಗರ, ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ ಮತ್ತು ಟಿನ್ ಫ್ಯಾಕ್ಟರಿ ಸೇರಿದಂತೆ ನಗರದ ವಿವಿಧ ಪ್ರಮುಖ ನಿಲ್ದಾಣಗಳಿಂದಲೂ ಬಸ್‌ಗಳ ಕಾರ್ಯಾಚರಣೆ ನಡೆಯಲಿದೆ.

ನಂದಿನಿ ಹಾಲು, ಮೊಸರಿನ ದರ ಏರಿಕೆ; ನಾಳೆಯಿಂದಲೇ ಜಾರಿ; ನೂತನ ದರಪಟ್ಟಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರ ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 8 ರೂ. ಹೆಚ್ಚಿಸಲು ಹಸಿರು ನಿಶಾನೆ ತೋರಿದ ಬೆನ್ನಲ್ಲೇ ಕೆಎಂಎಫ್ ನವೆಂಬರ್ 1ರಿಂದ ಅನ್ವಯವಾಗುವಂತೆ ನಂದಿನಿಯ ಎಲ್ಲಾ ಮಾದರಿ ಹಾಲು ಹಾಗೂ ಮೊಸರಿನ ಪರಿಷ್ಕೃತ ದರಪಟ್ಟಿಯನ್ನು ಬಿಡುಗಡೆ ಮಾಡಿದೆ.



ಉದಯವಾಹಿನಿ ಚಿತ್ರ

ಪರಿಷ್ಕೃತ ದರಪಟ್ಟಿಯಂತೆ ಟೋನ್ಡ್ ಹಾಲು (ಬ್ಲೂ ಪ್ಯಾಕೆಟ್) ಪ್ರತಿ ಲೀಟರ್‌ಗೆ ಇದ್ದ 46 ರೂ. ದರ 54 ರೂ. ಗೆ ಏರಿಕೆಯಾಗಿದೆ.

ಇನ್ನು ಹೋಮೋಜೀನೈಸ್ಡ್ ಟೋನ್ಡ್ ಹಾಲು (ಹಸಿರು) ಪ್ರತಿ ಲೀಟರ್‌ಗೆ ಇದ್ದ 47 ರೂ. ದರ 56 ರೂ.ಗೆ ಏರಿಕೆಯಾಗಿದೆ. ಹೋಮೋಜೀನೈಸ್ಡ್ ಹಸುವಿನ ಹಾಲು ಪ್ರತಿ ಲೀಟರ್‌ಗೆ ಇದ್ದ 50 ರೂ. ದರ 58 ರೂ.ಗೆ ಏರಿಕೆಯಾಗಿದೆ.

ಸ್ಪೆಷಲ್ ಟೋನ್ಡ್ ಹಾಲು ಪ್ರತಿ ಲೀಟರ್‌ಗೆ ಇದ್ದ 52 ರೂ. ದರ 64 ರೂ.ಗೆ ಏರಿಕೆಯಾಗಿದೆ. ಶುಭಂ ಹಾಲು ಪ್ರತಿ ಲೀಟರ್‌ಗೆ ಇದ್ದ 52 ರೂ. ದರ 64 ರೂ.ಗೆ ಏರಿಕೆಯಾಗಿದೆ.

ಹೋಮೊಜೆನೈಸ್ಡ್ ಶುಭಂ ಹಾಲು ಪ್ರತಿ ಲೀಟರ್‌ಗೆ ಇದ್ದ 53 ರೂ. ದರ 65 ರೂ.ಗೆ ಏರಿಕೆಯಾಗಿದೆ. ಮೊಸರು ಅರ್ಧ ಲೀಟರ್‌ಗೆ ಇದ್ದ 28 ರೂ. ದರ ಇದೀಗ 34 ರೂ. ಗೆ ಏರಿಕೆಯಾಗಿದೆ.

ಗೋ ರಕ್ಷಣೆ ಮಾಡಬೇಕಾದರೆ ಗೋವುಗಳಿಗೆ ಒಳ್ಳೆಯದು ಮಾಡಬೇಕು

ವಾಹನಗಳು 15 ವರ್ಷಕ್ಕಿಂತ ಹಳೆಯದಾಗಿದ್ದು, ಪದೇ ಪದೇ ದುರಸ್ತಿಯ ಅಗತ್ಯವಿರುವುದರಿಂದ ಅವುಗಳ ಕಾರ್ಯಕ್ಷಮತೆ ಕುಂಠಿತಗೊಂಡಿದೆ ಎಂದು ತಿಳಿಸಿದರು.

• ಉದಯವಾಹಿನಿ, ಬೆಂಗಳೂರು

1 ಬೇರೆ ವಿಧಿಯೇ ಇಲ್ಲ
2 ಪಕ್ಕದ ರಾಜ್ಯದಲ್ಲಿ ಜಾಸ್ತಿ ಇದೆ
3 ರೈತರಿಗೆ ಒಳ್ಳೆಯ ಬೆಲೆ ಕೊಡಲು ಸಾಧ್ಯ

ಬರಗಾಲದ ಕಾರಣ ಹಾಲು ಕೂಡ ಕಡಿಮೆ ಆಗುತ್ತಿದೆ. ಅದಕ್ಕೆ ಬೇರೆ ವಿಧಿಯೇ ಇಲ್ಲ. ಹಸುಗಳು, ಗೋ ರಕ್ಷಣೆ ಮಾಡಬೇಕಾದರೆ ಗೋವುಗಳಿಗೆ ಒಳ್ಳೆಯದು ಮಾಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಸದಾಶಿವನಗರ ನಿವಾಸದ ಬಳಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮೇವು ಕೊಡಬೇಕು, ಊಟ ಕೊಡಬೇಕು. ಮೇವು ಕೊಡಬೇಕಾದರೆ ರೈತ ಚೆನ್ನಾಗಿ ಇರಬೇಕು, ಅವನ ಹತ್ತಿರ ಹಣ ಇರಬೇಕು.

ರೈತರ ಬಳಿ ಹಣ ಇಲ್ಲ ಅಂದರೆ ಕಡಿಮೆ ಮಾಡುತ್ತಾರೆ. ಗೋ ಮಾತೆಗೆ ಗೌರವ ಕೊಡುವ ಕೆಲಸ ಮಾಡಬೇಕು. ಬರಗಾಲದಲ್ಲಿ ಗೋಮಾತೆಯನ್ನು ಉಳಿಸಬೇಕು. ಹಾಲು ಒಕ್ಕೂಟದವರು 12 ರೂಪಾಯಿ ಕೇಳಿದ್ದರು. ಪಕ್ಕದ ರಾಜ್ಯದಲ್ಲಿ ಜಾಸ್ತಿ ಇದೆ. ಇಲ್ಲಿಂದ ನಮ್ಮ ರೈತರು ಅಲ್ಲಿಗೆ ಹಾಲು ಶಿಫ್ಟ್ ಮಾಡುವುದು ಆಗುತ್ತಿತ್ತು. ಆ ದೃಷ್ಟಿಯಿಂದ ಹಾಲಿನ ದರ ಏರಿಕೆ ಮಾಡಲಾಗಿದೆ. ಬಹಳ ವರ್ಷಗಳಿಂದ ಮಾಡಿರಲಿಲ್ಲ. ಮೊಸರು ದರ ಅವರಿಗೆ ಬಿಟ್ಟಿದ್ದು, ಜಾಸ್ತಿ ಫ್ಯಾಟ್ ನೋಡಿ ದರ ನಿಗದಿ ಮಾಡಿದ್ದೇವೆ ಎಂದರು.

ಉತ್ತರಾಖಂಡ ಹೆಲಿಕಾಪ್ಟರ್ ಪತನದಲ್ಲಿ ಕನ್ನಡಿಗರ ಸಾವಿನ ವಿಚಾರವಾಗಿ ಪ್ರತಿಕ್ರಿಯಿಸಿ, ಉತ್ತರಾಖಂಡದಲ್ಲಿ ಆಗಿರುವ ಅನಾಹುತ ನಮ್ಮೆಲ್ಲರಿಗೂ ಗಾಬರಿ ಆಗುವ ವಿಚಾರ. ನಾನು ಕೂಡ ಒಂದೆರಡು ವರ್ಷಗಳ ಹಿಂದೆ ಹೋಗಿದ್ದೆ. ನಮ್ಮ ರಾಜ್ಯದವರಿಗೆ ಸಮಸ್ಯೆ ಆಗಿದೆ. ಸಂಬಂಧಿಸಿದ ಸರ್ಕಾರ, ದೆಹಲಿಯವರು ಗಂಭೀರವಾಗಿದ್ದಾರೆ. ನಾನು ಸಹ ತಿಳಿಸಿದ್ದೇನೆ. ಬಹಳ ದುಃಖದ ಪರಿಸ್ಥಿತಿ. ದೇವರ ಪ್ರಾರ್ಥನೆಗೆ ಹೋಗಿ ಈ ರೀತಿ ಆಗಿದ್ದು ದುರದೃಷ್ಟಕರ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ನಮ್ಮ ಪ್ರವಾಸಿಗರು ಎಚ್ಚರಿಕೆಯಿಂದ ಇರಬೇಕು. ದೇವಸ್ಥಾನ ಬಂದ್ ಆಗುತ್ತಿದೆಯಂತೆ. ಸ್ವಾಮಿಗಳೊಂದಿಗೆ ನಾನು ಮಾತನಾಡಿದ್ದೇನೆ. ಕೇದಾರನಾಥನಲ್ಲಿ ನಮ್ಮ ರಾಜ್ಯದವರೇ ಆದ ಸ್ವಾಮಿಗಳು ಇದ್ದಾರೆ. ಮೃತದೇಹ ತರಿಸಲು ಅಗತ್ಯ ವ್ಯವಸ್ಥೆ ಮಾಡಿದ್ದೇವೆ ಎಂದು ಸ್ಪಷ್ಟಪಡಿಸಿದರು.



ಉದಯವಾಹಿನಿ ಚಿತ್ರ

ಕನಿಷ್ಟ 50 ರೂ. ಶುಗರ್ ಬೆಲೆ ಮಾಡಬೇಕು: ಬೆಳಗಾವಿ ಕಬ್ಬು ಬೆಳೆಗಾರರ ಹೋರಾಟದ ವಿಚಾರವಾಗಿ ಮಾತನಾಡಿ, ನಮಗೂ ಅವರಿಗೂ ಮಾತುಕತೆ ಆಗಿದೆ. ಕೇಂದ್ರ ಸರ್ಕಾರದಿಂದ ದರ ನಿಗದಿ ಮಾಡುತ್ತೇವೆ ಎಂದು ಪ್ರಲ್ಹಾದ್ ಜೋಶಿ ಅವರು ಮಾತು ಕೊಟ್ಟಿದ್ದಾರೆ. ಅವರು ಎಷ್ಟು ದರ ನಿಗದಿ ಮಾಡುತ್ತಾರೋ, ಅದನ್ನು ಪಾಸ್ ಆನ್ ಮಾಡಬೇಕು ಎಂದು ನಮಗೂ ಕಾರ್ಖಾನೆಯವರಿಗೂ ಮಾತುಕತೆ ಆಗಿತ್ತು. ರೈತ ಮುಖಂಡರ ಮಧ್ಯದಲ್ಲಿ ಮಾತುಕತೆ ಆಗಿದೆ. ಕೇಂದ್ರದ ಸಮಿತಿಯವರ ಮುಂದೆ ಸಹ ನಾವು ಹೇಳಿದ್ದೇವೆ. ಪ್ರತಿ ಕೆಜಿಗೆ ಕನಿಷ್ಠ 50 ರೂಪಾಯಿ ಸಕ್ಕರೆ ಬೆಲೆ ಮಾಡಬೇಕು ಅಂತ ಮನವಿ ಮಾಡಿದ್ದೇವೆ ಎಂದರು. ಆಗ ಮಾತ್ರ ರೈತರಿಗೆ ಒಳ್ಳೆಯ ಬೆಲೆ ಕೊಡಲು ಸಾಧ್ಯ. ಸುಮಾರು ಎಂಟು ವರ್ಷಗಳಿಂದ ಸಕ್ಕರೆ ಬೆಲೆ ಒಂದು ರೂಪಾಯಿ ಕೂಡ ಜಾಸ್ತಿ ಮಾಡಿಲ್ಲ.

ರೈತರನ್ನು ಬದುಕಿಸಲು ಆದರೂ ಸಕ್ಕರೆ ಬೆಲೆ ಜಾಸ್ತಿ ಮಾಡಬೇಕು. ಹೊರಗಡೆಯಿಂದ ಉತ್ಪಾದನೆ ಜಾಸ್ತಿ ಆಯಿತು ಅಂತ ಬೆಲೆ ಏರಿಕೆ ಜಾಸ್ತಿ ಆಗಿದೆ. ಅದಕ್ಕೆ ರೈತರನ್ನು ಉಳಿಸಬೇಕು. ಕಾರ್ಖಾನೆಗಳು ಸಂಬಳ ಕೊಡಲೇಬೇಕು. ರೈತರಿಗೆ ಸಮಸ್ಯೆ ಆಗುವುದು ಬೇಡ. ಸೆಪ್ಟಂಬರ್‌ನಲ್ಲಿ ಕಬ್ಬು ಅರೆಯಿರಿ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಆಗ ಜ್ಯೂಸ್ ಕಡಿಮೆ ಆಗುತ್ತದೆ. ಕಬ್ಬು ಬಲಿತಿರುವುದಿಲ್ಲ ಎಂದರೂ ಕಬ್ಬು ಟೈಮ್ ವೇಸ್ಟ್ ಆಗುವುದು ಬೇಡ.

> ನಾನು ರೈತರ ಪರವಾಗಿ ಇದ್ದೇನೆ. ಪಿಎಂಗೂ ಪತ್ರ ಬರೆದಿದ್ದೇನೆ. ಮನವಿ ಮಾಡಿದ್ದೇನೆ. ಮುಂದೆ ಕೇಂದ್ರ ಮಂತ್ರಿಗಳನ್ನು ಭೇಟಿ ಮಾಡುತ್ತೇವೆ. ನೀವು ಮಾಡುತ್ತಿರುವ ಹಠದಿಂದ ರೈತರು ಬದುಕಿರುವಾಗಲೇ ಸತ್ತು ಹೋಗುತ್ತಾರೆ. ಜ್ಯೂಸ್ ಕಂಟೆಂಟ್ ಕಡಿಮೆ ಆಗುತ್ತದೆ. ಬೆಂಕಿ ಹಚ್ಚುವುದು ಆಗುತ್ತದೆ ಎಂದು ಹೇಳಿದರು.

ರೈತ ಮುಖಂಡರಿಗೆ ಮನವಿ

ದಯವಿಟ್ಟು ನಾನು ರೈತ ಮುಖಂಡರಿಗೆ ಮನವಿ ಮಾಡುತ್ತೇನೆ. ಆವತ್ತು ಏನು ಮಾತು ಆಗಿತ್ತು, ಅದರಂತೆ ನೀವು ನಡೆದುಕೊಳ್ಳಬೇಕು. ಕೇಂದ್ರದ ತೀರ್ಮಾನದಂತೆ ಫ್ಯಾಕ್ಟರಿಯವರಿಂದ ಕೊಡಿಸುವ ಜವಾಬ್ದಾರಿ ನಮ್ಮದು ಎಂದು ಸಿಎಂ ಮನವಿ ಮಾಡಿದರು.

ವಿದ್ಯುತ್ ಶಾಕ್‌ಗೆ ಬಲಿ ಮತ್ತಿಬ್ಬರಿಗೆ ಗಾಯ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ನಗರದ ಹೋಟೆಲ್ ಒಂದರ ಸ್ವಿಮ್ಮಿಂಗ್ ಪೂಲ್‌ನಲ್ಲಿ ವಿದ್ಯುತ್ ಶಾಕ್‌ಗೆ ಇಬ್ಬರು ವಿದೇಶಿಗರು ಬಲಿಯಾಗಿದ್ದಾರೆ. ಈ ಅವಘಡದಲ್ಲಿ ಮತ್ತಿಬ್ಬರು ಗಾಯಗೊಂಡಿದ್ದಾರೆ. ಸ್ಲೋವೇಕಿಯಾ ಪ್ರಜೆ ಓರಿಯಾಟ್ (45) ಹಾಗೂ ಡಚ್ ಪ್ರಜೆ ಅಲೆಕ್ಸಾಂಡರ್ ಮ್ಯಾಕ್ಸಿಲನ್ (59) ಮೃತ ವಿದೇಶಿಗರು. ನಗರದ ಕೊನ್ರಾಡ್ ಹೋಟೆಲ್‌ನ 3ನೇ ಮಹಡಿಯಲ್ಲಿರುವ ಸ್ವಿಮ್ಮಿಂಗ್ ಪೂಲ್‌ನಲ್ಲಿ ಅ.30ರ ರಾತ್ರಿ 11:30ರ ಸುಮಾರಿಗೆ ಈ ಅವಘಡ ಸಂಭವಿಸಿದೆ. ರಾತ್ರಿ ಸ್ವಿಮ್ ಮುಗಿಸಿ ಹೋಗುವಾಗ ಜಾರಿ ಬಿದ್ದಿದ್ದು, ಈ ವೇಳೆ ಕರೆಂಟ್ ಶಾಕ್‌ನಿಂದ ಇಬ್ಬರೂ ಸಾವನ್ನಪ್ಪಿದ್ದಾರೆ. ಕಳೆದ ಕೆಲ ದಿನಗಳಿಂದ ಇವರು ಹೋಟೆಲ್‌ನಲ್ಲಿ ಉಳಿದುಕೊಂಡಿದ್ದರು ಎಂದು ತಿಳಿದು ಬಂದಿದೆ. ಸ್ವಿಮ್ಮಿಂಗ್ ಪೂಲ್‌ಗೆ ಬಿದ್ದಿದ್ದ ಇಬ್ಬರನ್ನು ರಕ್ಷಿಸಲು ಮುಂದಾಗಿದ್ದ ಅಮೇರಿಕ ಮೂಲದ ವ್ಯಕ್ತಿ ಹಾಗೂ ಅಟೆಂಡರ್‌ಗೆ ಗಾಯಗಳಾಗಿವೆ. ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಬ್ಬರೂ ಕೂಡ ಪ್ರಾಣಪಾಯದಿಂದ ಪಾರಾಗಿದ್ದು, ಚಿಕಿತ್ಸೆ ಮುಂದುವರೆಸಲಾಗುತ್ತಿದೆ. ಹೋಟೆಲ್ ಸಿಬ್ಬಂದಿ ನಿರ್ಲಕ್ಷ್ಯದಿಂದ ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಆರೋಪಿಸಲಾಗಿದೆ. ಕೊನ್ರಾಡ್ ಹೋಟೆಲ್ ಮ್ಯಾನೇಜ್ಮೆಂಟ್ ವಿರುದ್ಧ ಹಲಸೂರು ಠಾಣೆಯಲ್ಲಿ ಅಲೆಕ್ಸಾಂಡರ್ ಪತ್ನಿ ದೂರು ದಾಖಲಿಸಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮಣಿಪಾಲ್ ಆಸ್ಪತ್ರೆಗೆ ಎರಡೂ ಮೃತದೇಹಗಳ ರವಾನಿಸಿದ್ದಾರೆ. ಈ ಬಗ್ಗೆ ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

ಪೊಲೀಸ್, ಎಫ್‌ಎಸ್‌ಎಲ್ ಸೇರಿ ರಾಜ್ಯದ 7 ಅಧಿಕಾರಿ - ಸಿಬ್ಬಂದಿಗೆ 2026ನೇ ಸಾಲಿನ ಕೇಂದ್ರ ಗೃಹ ಮಂತ್ರಿಗಳ ದಕ್ಷತಾ ಪದಕ

• ಉದಯವಾಹಿನಿ, ಬೆಂಗಳೂರು

2026ನೇ ಸಾಲಿನ ಕೇಂದ್ರ ಗೃಹಮಂತ್ರಿಗಳ ದಕ್ಷತಾ ಪದಕ ಗೌರವಕ್ಕೆ ಪೊಲೀಸ್ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯ ಸೇರಿದಂತೆ ಕರ್ನಾಟಕದ ಒಟ್ಟು 7 ಮಂದಿ ಅಧಿಕಾರಿಗಳು ಭಾಜನರಾಗಿದ್ದಾರೆ. ತನಿಖಾ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಪರಿಗಣಿಸಿ ಈ ಪದಕವನ್ನು ಘೋಷಿಸಲಾಗಿದೆ.


ಉದಯವಾಹಿನಿ ಚಿತ್ರ

ಬೆಂಗಳೂರಿನ ಹಲಸೂರು ಗೇಟ್ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಶೋಭಾ ಎನ್, ಬೆಳಗಾವಿ ನಗರದ ಮಾಳಮಾರುತಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಬಾವುದ್ದೀನ್ ರುಕ್ಮುದ್ದೀನ್ ಗಡೇಕರ್, ಬೆಂಗಳೂರಿನ ಪೊಲೀಸ್ ಪ್ರಧಾನ ಕಚೇರಿಯ ಇನ್ಸ್‌ಪೆಕ್ಟರ್ ಎಂ ಶ್ರೀನಿವಾಸ್ ರಾವ್, ರಾಯಚೂರು ಜಿಲ್ಲೆಯ ದೇವದುರ್ಗ ಠಾಣೆ ಇನ್ಸ್‌ಪೆಕ್ಟರ್ ಮಂಜುನಾಥ್, ಬೆಂಗಳೂರು ಪೂರ್ವ ವಿಭಾಗದ ಮಹಿಳಾ ಪೊಲೀಸ್ ಠಾಣೆ ಎಎಸ್‌ಐ ರತ್ನಮ್ಮ ಕೆ. ಹಾಗೂ ಸಿಐಡಿ ಘಟಕದ ಸಿಹೆಚ್‌ಸಿ ಬಾಲಕೃಷ್ಣ ವೈ ಅವರು ತನಿಖಾ ವಿಭಾಗದಲ್ಲಿ ಪದಕ ಪಡೆದಿದ್ದಾರೆ.

ಅದೇ ರೀತಿ ವಿಧಿವಿಜ್ಞಾನ ಪ್ರಯೋಗಾಲಯ ಕ್ಷೇತ್ರದಲ್ಲಿ ಮೈಸೂರಿನ ಆರ್ ಎಫ್‌ಎಸ್‌ಎಲ್‌ನ ಉಪನಿರ್ದೇಶಕ ಡಾ. ಚಂದ್ರಶೇಖರ್ ಅವರಿಗೆ ಪದಕ ಲಭಿಸಿದೆ. ಪದಕ ಗೌರವಕ್ಕೆ ಭಾಜನರಾದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗೆ ರಾಜ್ಯ ಪೊಲೀಸ್ ಇಲಾಖೆಯಿಂದ ಅಭಿನಂದನೆಗಳನ್ನು ತಿಳಿಸಲಾಗಿದೆ.

ಒಂದು ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ತಾಂತ್ರಿಕ ರಾಜೀನಾಮೆ ನೀಡಿ ಮತ್ತೊಂದು ಸಂಸ್ಥೆಗೆ ಸೇರಿದರೆ ಹಿಂದಿನ ಸೇವೆ ರದ್ದಾಗುವುದಿಲ್ಲ: ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಪಿಂಚಣಿ ಎಂಬುದು ಸರ್ಕಾರ ನೀಡುವ ದಯೆಯಲ್ಲ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಒಂದು ವಿವಿಯಿಂದ ಮತ್ತೊಂದು ವಿವಿಗೆ ಸೇರಲು ತಾಂತ್ರಿಕ ರಾಜೀನಾಮೆ ನೀಡಿ ಹುದ್ದೆಗೆ ಸೇರಿದಾಗ, ಆತನ ಹಿಂದಿನ ಸೇವೆಯು ರದ್ದಾಗುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ಒಟ್ಟು 28 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಪ್ರೊ. ಚಿದಾನಂದರೆಡ್ಡಿ ಎಸ್. ಪಾಟೀಲ್ ಅವರಿಗೆ ಹಳೆಯ ಪಿಂಚಣಿ ಸೌಲಭ್ಯ ನೀಡುವಂತೆ ಏಕಸದಸ್ಯ ಪೀಠ ನೀಡಿದ್ದ ಆದೇಶವನ್ನು ಎತ್ತಿ ಹಿಡಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಹಾಗೂ ನ್ಯಾಯಮೂರ್ತಿ ಹೇಮಾ ಕುಲಕರ್ಣಿ ಅವರಿದ್ದ ವಿಭಾಗಿಯಪೀಠವು ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿದೆ.

ಅಷ್ಟೇ ಅಲ್ಲದೆ, ಸರ್ಕಾರಿ ಹಾಗೂ ನಿಯಮಿತ ಸೇವೆ ಸಲ್ಲಿಸಿದ ಪ್ರೊಫೆಸರ್‌ಗೆ ಹಳೆಯ ಪಿಂಚಣಿ ಪಡೆಯುವುದು ಆತನ ಹಕ್ಕಾಗಿರಲಿದ್ದು, ಬಾಕಿ ಇರುವ ಪಿಂಚಣಿ ಮೊತ್ತವನ್ನು ಶೇ. 6ರ ಬಡ್ಡಿಯೊಂದಿಗೆ ಪಾವತಿಸುವಂತೆ ಸರ್ಕಾರಕ್ಕೆ ಸ್ಪಷ್ಟ ನಿರ್ದೇಶನ ನೀಡಿದೆ. ಅಲ್ಲದೆ, ಪೂರ್ವಭಾವಿ ಅನುಮತಿಯೊಂದಿಗೆ, ತಾಂತ್ರಿಕ ರಾಜೀನಾಮೆ ನೀಡಿ ಮತ್ತೊಂದು ವಿಶ್ವವಿದ್ಯಾಲಯದಲ್ಲಿ ಉನ್ನತ ಹುದ್ದೆಗೆ ಸೇರಿದಾಗ ಸೇವಾ ನಿರಂತರತೆ ಕಾಯ್ದುಕೊಳ್ಳುತ್ತದೆ.



ಉದಯವಾಹಿನಿ ಚಿತ್ರ

1996 ರಿಂದ 2013ರವರೆಗಿನ 17 ವರ್ಷಗಳ ಸೇವೆಯನ್ನು ಸರ್ಕಾರ ಕೈ ಬಿಟ್ಟು ಹೊಸ ನೇಮಕಾತಿ ಎಂದು ಪರಿಗಣಿಸಲು ಸಾಧ್ಯವಿಲ್ಲ. ನೇಮಕಾತಿ ಆದೇಶದಲ್ಲಿ ಹೊಸ ಪಿಂಚಣಿ ಯೋಜನೆ ಅನ್ವಯವಾಗುತ್ತದೆ ಎಂಬ ಶರತ್ತು ಸೇರಿಸಲಾಗಿದ್ದರೂ, ಅದು ಕಾನೂನಿಗಿಂತ ದೊಡ್ಡದಲ್ಲ. ಶಾಸನಬದ್ಧ ಹಕ್ಕನ್ನು ಆಡಳಿತಾತ್ಮಕ ಷರತ್ತಿನ ಮೂಲಕ ಕಸಿದುಕೊಳ್ಳಲಾಗದು ಎಂದು ಪೀಠ ಹೇಳಿದೆ.

ತಿಂಡಿ ತಿನ್ನುವಾಗಲೇ ಹೃದಯಸ್ತಂಭನದಿಂದ ಬಾರ್ ಅಂಡ್ ರೆಸ್ಟೋರೆಂಟ್ ಕ್ಯಾಷಿಯರ್ ಸಾವು

• ಉದಯವಾಹಿನಿ, ಬೆಂಗಳೂರು

ತಿಂಡಿ ತಿನ್ನುವಾಗ ಹಠಾತ್ ಆಗಿ ಕಾಣಿಸಿಕೊಂಡ ಹೃದಯಸ್ತಂಭನದಿಂದ ಬಾರ್ ಅಂಡ್ ರೆಸ್ಟೋರೆಂಟ್ ವೊಂದರ ಕ್ಯಾಷಿಯರ್ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಚಂದ್ರಶೇಖರ್ (40) ಸಾವನ್ನಪ್ಪಿದ ಕ್ಯಾಷಿಯರ್ ಸದ್ಯ ಮೃತದೇಹವನ್ನು ಖಾಸಗಿ ಆಸ್ಪತ್ರೆಯೊಂದರಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ.

ಸಾವಿನ ಹಿಂದೆ ಅನುಮಾನವಿರುವುದಾಗಿ ಚಂದ್ರಶೇಖರ್ ಕುಟುಂಬಸ್ಥರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ಬೆಳಗ್ಗೆ 11:40 ಸುಮಾರಿಗೆ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ಪುಟ್ಟೇನಹಳ್ಳಿಯಲ್ಲಿ ವಾಸವಿದ್ದ ಚಂದ್ರಶೇಖರ್, ಗುರು ಗ್ರೀನ್ ಬಾರ್ ಅಂಡ್ ರೆಸ್ಟೋರೆಂಟ್ ಕ್ಯಾಷಿಯರ್ ಆಗಿ ನಾಲ್ಕು ವರ್ಷಗಳಿಂದ ಕೆಲಸ ಮಾಡುತ್ತಿದ್ದರು ಎಂದಿನಂತೆ ರೆಸ್ಟೋರೆಂಟ್‌ನಲ್ಲಿ ತಿಂಡಿ ತಿನ್ನುವಾಗ ಏಕಾಏಕಿ ಎದೆನೋವು ಕಾಣಿಸಿಕೊಂಡ ಪರಿಣಾಮ ಕ್ಷಣಾರ್ಧದಲ್ಲಿ ಕುಳಿತಿದ್ದ ಟೇಬಲ್‌ನಿಂದ ಕುಸಿದು ಬಿದ್ದಿದ್ದಾರೆ. ಕೆಲ ಕ್ಷಣಗಳ ಬಳಿಕ ಸಿಬ್ಬಂದಿ ನೋಡಿ ಕೂಡಲೇ ಪ್ರಾಥಮಿಕ ಚಿಕಿತ್ಸೆ ನೀಡಿದ್ದಾರೆ. ಪ್ರಜ್ಞೆ ಬರದ ಕಾರಣ ಸ್ಥಳೀಯ ಖಾಸಗಿ ಆಸ್ಪತ್ರೆಗೆ ಸೇರಿಸುವಷ್ಟರಲ್ಲಿ ಪ್ರಾಣಪಕ್ಷಿ ಹಾರಿಹೋಗಿದೆ. ಮೃತದೇಹವನ್ನು ತಪಾಸಣೆ ನಡೆಸಿದ ವೈದ್ಯರು ಹೃದಯಸ್ತಂಭನದಿಂದ ಸಾವನ್ನಪ್ಪಿದ್ದಾರೆ ಎಂದು ಹೇಳಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

18 ಕೋಟಿ ರೂ. ಚರಂಡಿ, ರಸ್ತೆ ಕಾಮಗಾರಿಗೆ ಚಾಲನೆ

• ಉದಯವಾಹಿನಿ, ಆನೇಕಲ್


ಉದಯವಾಹಿನಿ ಚಿತ್ರ

ಅತ್ತಿಬೆಲೆ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 18 ಕೋಟಿ ರೂಪಾಯಿ ಮೌಲ್ಯದ ಚರಂಡಿ ಮತ್ತು ರಸ್ತೆ ಡಾಂಬರೀಕರಣಕ್ಕೆ ಚಾಲನೆ ನೀಡಿದರು ಶಾಸಕರಾದ ಬಿ.ಶಿವಣ್ಣ.

ಈ ವೇಳೆ ಶಾಸಕರಾದ ಬಿ.ಶಿವಣ್ಣರು ಮಾತನಾಡಿ, ಅತ್ತಿಬೆಲೆ ಕೈಗಾರಿಕಾ ಪ್ರದೇಶದಲ್ಲಿರುವ ರಸ್ತೆಗಳಲ್ಲಿ ತೀವ್ರ ಸಮಸ್ಯೆ ಉಂಟಾಗಿತ್ತು. ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಅತ್ತಿಬೆಲೆ ಇಂಡಸ್ಟ್ರೀಸ್ ಅಸೋಸಿಯೇಷನ್ ಪದಾಧಿಕಾರಿಗಳು ಮತ್ತು ಸ್ಥಳೀಯ ಮುಖಂಡರು ನಮ್ಮ ಬಳಿ ಬೇಡಿಕೆ ಇಟ್ಟಿದ್ದರು. ಅದಕ್ಕಾಗಿ ಸುಮಾರು 18 ಕೋಟಿ ರೂಪಾಯಿ ಅನುದಾನದಲ್ಲಿ ಅತ್ತಿಬೆಲೆ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಚಾಲನೆ ನೀಡಲಾಗಿದೆ, ಎಂದು ಹೇಳಿದರು. ಇನ್ನು ರಾಜ್ಯದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಉತ್ತಮ ಆಡಳಿತ ನೀಡಿ ಜನ ಮೆಚ್ಚುಗೆಯನ್ನು ಗಳಿಸುತ್ತಿದ್ದು, 2028ರಲ್ಲಿಯೂ ಸಹ ಕಾಂಗ್ರೆಸ್ ಸರ್ಕಾರ ಮರು ಅಧಿಕಾರಕ್ಕೆ ಬರುವುದು ನೂರಕ್ಕೆ ನೂರು ಖಚಿತ, ಎಂದು ಹೇಳಿದರು.

ಅತಿಯಾದ ಆಸ್ಪತ್ರೆ ಬಿಲ್ ಮೇಲೆ ನಿಯಂತ್ರಣ, ಔಷಧಗಳ ಬೆಲೆ ಕ್ರಮಬದ್ಧಗೊಳಿಸಲು ರಾಜ್ಯ ಸರ್ಕಾರದಿಂದ ಕ್ರಮಕ್ಕೆ ಯೋಜನೆ!

• ಉದಯವಾಹಿನಿ, ಬೆಂಗಳೂರು

ಖಾಸಗಿ ಆಸ್ಪತ್ರೆಗಳ ಅತಿಯಾದ ಬಿಲ್ಲಿಂಗ್‌ಗೆ ಕಡ್ಡಿವಾಣ ಹಾಕಲು, ಔಷಧಗಳ ಮೇಲಿನ ಅತಿಯಾದ ದರಗಳನ್ನು ನಿಯಂತ್ರಿಸಲು ಮತ್ತು ಚಿಕಿತ್ಸಾ ವೆಚ್ಚದಲ್ಲಿ ಪಾರದರ್ಶಕತೆ ತರಲು ರಾಜ್ಯ ಸರ್ಕಾರ ಕಠಿಣ ಕ್ರಮಗಳಿಗೆ ಮುಂದಾಗಿದೆ. ಆಸ್ಪತ್ರೆಗಳು ತಾವು ಖರೀದಿಸುವ ಔಷಧಿಗಳು, ವೈದ್ಯಕೀಯ ಸಾಧನಗಳು ಮತ್ತು ವಸ್ತುಗಳ ಖರೀದಿ ಬೆಲೆ (ಲ್ಯಾಂಡಿಂಗ್ ಬೆಲೆ), ಗರಿಷ್ಠ ಚಿಲ್ಲರೆ ಬೆಲೆ ಮತ್ತು ರೋಗಿಗಳಿಗೆ ವಿಧಿಸುವ ಬಿಲ್ ಮೊತ್ತವನ್ನು ನವೆಂಬರ್ 1 ರಿಂದ ಕಡ್ಡಾಯವಾಗಿ ಬಹಿರಂಗಪಡಿಸಬೇಕು ಎಂದು ಅಕ್ಟೋಬರ್ 1 ರಂದು ಸುತ್ತೋಲೆ ಹೊರಡಿಸಿತ್ತು. ಆದರೆ, ಖಾಸಗಿ ಆಸ್ಪತ್ರೆಗಳ ಒಕ್ಕೂಟ ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಇದರ ಬೆನ್ನಲ್ಲೇ, ಈ ನಿಯಮವನ್ನು ಮರುಪರಿಶೀಲಿಸುವುದಾಗಿ ಸರ್ಕಾರ ಕೋರ್ಟ್‌ಗೆ ಹೇಳಿತ್ತು. ಮುಂದಿನ ವಿಚಾರಣೆ ನಡೆಯಲಿರುವ


ಉದಯವಾಹಿನಿ ಚಿತ್ರ

ನವೆಂಬರ್ 12 ರವರೆಗೆ ಸುತ್ತೋಲೆ ಜಾರಿಯನ್ನು ಮುಂದೂಡಲು ಒಪ್ಪಿಕೊಂಡಿದೆ. ಈ ಮಧ್ಯೆ, ಅಕ್ಟೋಬರ್ 22 ರಂದು ಆರೋಗ್ಯ ಸಚಿವ ಯು.ಟಿ. ಖಾದರ್ ಅವರು ಫಾನಾ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ನಂತರ ಬಿಲ್ಲಿಂಗ್ ಮತ್ತು ಬೆಲೆ ನಿಯಂತ್ರಣದಲ್ಲಿ ವ್ಯಾಪಕ ಸುಧಾರಣೆಗಳಲ್ಲಿ ತರುವುದಾಗಿ ಪ್ರಕಟಿಸಿದ್ದಾರೆ. ಕ್ಯಾನ್ಸರ್, ಹೃದಯರೋಗ ಮತ್ತು ಮೂತ್ರಪಿಂಡದ ಚಿಕಿತ್ಸೆಗಳ ಬಿಲ್‌ಗಳಲ್ಲಿ ಭಾರಿ ಪ್ರಮಾಣದ ವಂಚನೆ ನಡೆಯುತ್ತಿರುವ ಬಗ್ಗೆ ಮತ್ತು ಇನ್ಸೂರೆನ್ಸ್ ಹಣ ಸಾಲದೇ ರೋಗಿಗಳು ಕೈಯಿಂದ ಹೆಚ್ಚುವರಿ ಹಣ ಪಾವತಿಸುತ್ತಿರುವ ದೂರುಗಳ ಹಿನ್ನೆಲೆಯಲ್ಲಿ ಈ ಸುಧಾರಣೆಗೆ ಸರ್ಕಾರ ಕೈಹಾಕಿದೆ.

ಆಸ್ಪತ್ರೆಗಳಲ್ಲಿ ಚಿಕಿತ್ಸಾ ದರಪಟ್ಟ ಪ್ರದರ್ಶನ ಕಡ್ಡಾಯ: ಆಸ್ಪತ್ರೆಗಳಲ್ಲಿ ಲಭ್ಯವಿರುವ ಪ್ರಮುಖ ಚಿಕಿತ್ಸೆಗಳ ದರಪಟ್ಟಿಯನ್ನು ರೋಗಿಗಳಿಗೆ ಕಾಣಿಸುವಂತೆ ಸ್ವಾಗತ ಕೌಂಟರ್‌ಗಳ ದೊಡ್ಡ ಬೋರ್ಡ್‌ಗಳಲ್ಲಿ ನವೆಂಬರ್ 1, 2026 ರಿಂದ ಪ್ರದರ್ಶಿಸಬೇಕು ಎಂದು ಸಚಿವ ಯು.ಟಿ ಖಾದರ್ ಹೇಳಿದ್ದಾರೆ.

4 ಸಾವಿರಕ್ಕೂ ಹೆಚ್ಚು ಚಿಕಿತ್ಸೆಗಳನ್ನು ಆಸ್ಪತ್ರೆಗಳಲ್ಲಿ ನೀಡಲಾಗುವ ಕಾರಣ, ಎಲ್ಲಾ ದರಗಳನ್ನು ಪ್ರದರ್ಶಿಸಲು ಸಾಧ್ಯವಿಲ್ಲ. ಪ್ರಮುಖ ಚಿಕಿತ್ಸೆಗಳ ದರವನ್ನು ರೋಗಿಗಳು ಓದುವಂತೆ ಫಲಕಗಳನ್ನು ಹಾಕಬೇಕು. ಇತರ ಚಿಕಿತ್ಸೆಗಳ ಬೆಲೆಗಳನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ಇಡಲು ಸೂಚಿಸಲಾಗಿದೆ. ಇದಕ್ಕೆ ಫಾನಾ ಒಪ್ಪಿಗೆ ಸೂಚಿಸಿದೆ ಎಂದು ಅವರು ತಿಳಿಸಿದ್ದಾರೆ.ಖಾಸಗಿ ಆಸ್ಪತ್ರೆಗಳ ಸೌಲಭ್ಯಗಳು ವಿಭಿನ್ನವಾಗಿರುವ ಕಾರಣ ಅವು ಸರ್ಕಾರಿ ದರಗಳನ್ನೇ ಪಾಲಿಸಬೇಕಾಗಿಲ್ಲ. ಆದರೆ, ಆಸ್ಪತ್ರೆಗಳು ವಿಧಿಸುವ ಗರಿಷ್ಠ ಶುಲ್ಕಕ್ಕೆ ಒಂದು ಮಿತಿ ಇರಬೇಕು ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಸುತ್ತೋಲೆಗೆ ಹೈಕೋರ್ಟ್‌ನಲ್ಲಿ ತಡೆ: ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಆಯುಕ್ತರು ಅಕ್ಟೋಬರ್ 1 ರಂದು ಹೊರಡಿಸಿದ ಸುತ್ತೋಲೆಯಲ್ಲಿ, ಔಷಧಿಗಳು, ವೈದ್ಯಕೀಯ ಸಾಧನಗಳು ಮತ್ತು ವಸ್ತುಗಳ ಲ್ಯಾಂಡಿಂಗ್ ಬೆಲೆ, ಗರಿಷ್ಠ ಚಿಲ್ಲರೆ ಬೆಲೆ, ವಿಧಿಸಲಾದ ಮೊತ್ತ ಮತ್ತು ಅನ್ವಯವಾಗುವ ತೆರಿಗೆಗಳನ್ನು ಆಸ್ಪತ್ರೆಗಳು ಪ್ರದರ್ಶಿಸಬೇಕು. ಎಲ್ಲಾ ದರಗಳನ್ನು ಪ್ರದರ್ಶಿಸಲು ಸಾಧ್ಯವಿಲ್ಲ. ಮೂರು ವರ್ಷಗಳವರೆಗೆ ಆ ದಾಖಲೆಗಳನ್ನು ಉಳಿಸಿಕೊಳ್ಳಬೇಕು.

ಮತ್ತೆ ಮಳೆ ನಿರೀಕ್ಷೆ: 14 ಜಿಲ್ಲೆಗಳಿಗೆ ಯಲ್ಲೋ ಅಲರ್ಟ್

• ಉದಯವಾಹಿನಿ, ಬೆಂಗಳೂರು

ಅರಬ್ಬಿ ಸಮುದ್ರ ಹಾಗೂ ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ನವೆಂಬರ್ 2ರಿಂದ ಮತ್ತೆ ಮಳೆಯ ವಾತಾವರಣ ನಿರ್ಮಾಣವಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ನ. 2 ರಿಂದ ಕರಾವಳಿ, ಮಲೆನಾಡು ಹಾಗೂ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಬಿರುಗಾಳಿ ಮತ್ತು ಗುಡುಗು ಸಹಿತ ವ್ಯಾಪಕ ಮಳೆಯಾಗುವ ನಿರೀಕ್ಷೆಯಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ರಾಜ್ಯದ ಸುಮಾರು 14 ಜಿಲ್ಲೆಗಳಿಗೆ ಯಲ್ಲೋ ಅಲರ್ಟ್ ಘೋಷಿಸಲಾಗಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡದ ದಕ್ಷಿಣ ಭಾಗಗಳಲ್ಲಿ ತುಂತುರು ಮಳೆಯಾಗುವ ನಿರೀಕ್ಷೆಯಿದೆ. ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡದಲ್ಲಿ ನವೆಂಬರ್ 1 ಮತ್ತು 2 ರಂದು ಸಾಧಾರಣ ಮಳೆಯಾಗಲಿದ್ದು, ನವೆಂಬರ್ 3 ರಿಂದ 5 ರವರೆಗೆ ಪ್ರತ್ಯೇಕ ಸ್ಥಳಗಳಲ್ಲಿ ಭಾರಿ ಮಳೆ ಸುರಿಯುವ ಸಾಧ್ಯತೆಯಿದೆ. ಅದೇ ರೀತಿ ಮಲೆನಾಡು ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ನವೆಂಬರ್ 2 ರಿಂದ 5 ರವರೆಗೆ ಗುಡುಗು-ಮಿಂಚು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ರಾಜಧಾನಿ ಬೆಂಗಳೂರು ನಗರ ಸೇರಿದಂತೆ ಬೆಂಗಳೂರು ಗ್ರಾಮಾಂತರ, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ಚಿತ್ರದುರ್ಗ, ದಾವಣಗೆರೆ, ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ನವೆಂಬರ್ 2 ಮತ್ತು 3 ರಂದು ವೇಗವಾಗಿ ಗಾಳಿ ಬೀಸಲಿದ್ದು, ಸಾಧಾರಣದಿಂದ ಉತ್ತಮ ಮಳೆಯಾಗುವ ಸಾಧ್ಯತೆಯಿದೆ.

ಸುಪ್ರೀಂ ಕೋರ್ಟ್ ಆದೇಶದಂತೆ ರಾತ್ರಿ 8-10 ಗಂಟೆಯವರೆಗೆ ಮಾತ್ರ ಪಟಾಕಿ ಸಿಡಿಸಲು ಅವಕಾಶ

ದೀಪಾವಳಿ ಹಬ್ಬದ ದಿನಗಳಂದು ಪಟಾಕಿಗಳಿಂದಾಗುವ ಶಬ್ದ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸಲು ನಿಗದಿ

• ಉದಯವಾಹಿನಿ, ಬೆಂಗಳೂರು

1 ರಾತ್ರಿ 8 ಗಂಟೆಯಿಂದ ರಾತ್ರಿ 10 ಗಂಟೆವರೆಗೆ
2 ಸಾರ್ವಜನಿಕ ಆರೋಗ್ಯದ ಮೇಲೆ ತೀವ್ರ ಪರಿಣಾಮ
3 ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು

ರಾತ್ರಿ 8 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ಮಾತ್ರ ಪಟಾಕಿ ಸಿಡಿಸಲು ಸುಪ್ರೀಂ ಕೋರ್ಟ್ ಅವಕಾಶ ನೀಡಿರುವುದರಿಂದ ಉಳಿದ ಸಮಯದಲ್ಲಿ ಪಟಾಕಿಗಳ ಸ್ಫೋಟವನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಅರಣ್ಯ, ಪರಿಸರ ಸಚಿವ ರಾಮಲಿಂಗಾ ರೆಡ್ಡಿ ಅವರು ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಈ ಸಂಬಂಧ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ಬರೆದಿರುವ ಸಚಿವರು, ಬೆಳಕಿನ ಹಬ್ಬ ದೀಪಾವಳಿ-2026ನ್ನು ಪ್ರತಿ ವರ್ಷದಂತೆ ಈ ವರ್ಷವೂ ಸಹ ರಾಜ್ಯಾದ್ಯಂತ 8.11.2026 ರಿಂದ 10.11.2026 ರವರೆಗೆ ಆಚರಿಸಲಾಗುತ್ತಿದೆ. ಆ ಸಮಯದಲ್ಲಿ ವಿವಿಧ ರೀತಿಯ ಪಟಾಕಿಗಳನ್ನು ಸ್ಫೋಟಿಸುವುದರಿಂದ ಉಂಟಾಗುವ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯದಿಂದ ಸಾರ್ವಜನಿಕ ಆರೋಗ್ಯದ ಮೇಲೆ ತೀವ್ರ ಪರಿಣಾಮವಾಗುವುದು ನಮ್ಮೆಲ್ಲರಿಗೂ ತಿಳಿದ ವಿಷಯ.

2026ರ ದೀಪಾವಳಿ ಹಬ್ಬದ ದಿನಗಳಂದು ಪಟಾಕಿಗಳಿಂದಾಗುವ ಶಬ್ದ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಸುಪ್ರೀಂ ಕೋರ್ಟ್ ಆದೇಶದಂತೆ ಕ್ರಮ ಜರುಗಿಸಲು ಸೂಚಿಸಿದ್ದಾರೆ. ಸುಪ್ರೀಂ ಕೋರ್ಟ್ ಆದೇಶಗಳನ್ನು ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು



ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯ ಎಲ್ಲಾ ಅಧೀನ ಅಧಿಕಾರಿಗಳ ಗಮನಕ್ಕೆ ತರುವುದು ಮತ್ತು ಆದೇಶ ಪಾಲನೆಗೆ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಬೇಕು. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಜಿಲ್ಲಾ ಅಗ್ನಿಶಾಮಕ ಪಡೆ ಅಧಿಕಾರಿ, ಸ್ಥಳೀಯ ಸಂಸ್ಥೆಯ ಆರೋಗ್ಯಾಧಿಕಾರಿಗಳು, ತಹಶೀಲ್ದಾರರು, ಜಿಲ್ಲಾ ಪರಿಸರ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಆಸಕ್ತ ನಾಗರಿಕರು ಹಾಗೂ ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಕಾರ್ಯಪಡೆಗಳನ್ನು ರಚಿಸಿ, ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಪಟಾಕಿ ಮಾರಾಟಗಾರರ ಗೋದಾಮುಗಳನ್ನು ಪರಿಶೀಲಿಸಬೇಕು. ಅಲ್ಲಿ ಹಸಿರು ಪಟಾಕಿಯಲ್ಲದೆ, ಇನ್ನಾವುದಾದರೂ ನಿಷೇಧಿತ ಪಟಾಕಿಗಳನ್ನು ದಾಸ್ತಾನು ಮಾಡಿದ್ದಲ್ಲಿ, ಇಡೀ ಗೋದಾಮನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಹಾಗೂ ಸಂಬಂಧಿತ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬೇಕು ಎಂದು ಸೂಚನೆ ನೀಡಿದ್ದಾರೆ.

> ಹೊರ ರಾಜ್ಯಗಳಿಂದ ಅನಧಿಕೃತವಾಗಿ ಯಾವುದೇ ರೀತಿಯ ನಿಷೇಧಿತ ಪಟಾಕಿಗಳನ್ನು ಸಾಗಾಟ ಮಾಡುತ್ತಿದ್ದಲ್ಲಿ ಕೂಡಲೇ ವಾಣಿಜ್ಯ ತೆರಿಗೆ ಇಲಾಖೆಯ ವತಿಯಿಂದ ರಾಜ್ಯದ ಗಡಿಗಳಲ್ಲಿರುವ ತಮ್ಮ ತಮ್ಮ ತನಿಖಾ ಠಾಣೆಗಳ ಮುಖಾಂತರ ನಿಷೇಧಿತ ಪಟಾಕಿಗಳು ಹಾಗೂ ಸಂಬಂಧಿತ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಸಾಗಾಟ ಮಾಡುವ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವುದು, ಇದಕ್ಕೆ ಅವಶ್ಯಕತೆಯಿದ್ದಲ್ಲಿ ಸಂಬಂಧಪಟ್ಟ ಇಲಾಖೆಗಳ ಸಹಯೋಗವನ್ನು ಪಡೆದುಕೊಳ್ಳಬಹುದು ಎಂದು ಸಚಿವ ರಾಮಲಿಂಗಾ ರೆಡ್ಡಿ ಸೂಚಿಸಿದ್ದಾರೆ.

ಎಲ್ಲಾ ಹಸಿರು ಪಟಾಕಿಗಳ ಮೇಲೆ ಹಾಗೂ ಅವುಗಳ ಪ್ಯಾಕೆಟ್ ಮೇಲೆ ಹಸಿರು ಪಟಾಕಿಯ ಚಿಹ್ನೆಯಿರುತ್ತದೆ, ಜೊತೆಗೆ ಕ್ಯೂ.ಆರ್.ಕೋಡ್ ಸಹಾ ಇರುತ್ತದೆ. ಈ ಚಿಹ್ನೆಯ ಬಗ್ಗೆ ಸಂಬಂಧಪಟ್ಟ ಜಿಲ್ಲೆಯ ಪರಿಸರ ಅಧಿಕಾರಿಗಳಿಂದ ಖಚಿತ ಪಡಿಸಿಕೊಳ್ಳಬೇಕು.

ಚಿಹ್ನೆ ಇಲ್ಲದ ಯಾವುದೇ ಪಟಾಕಿ ಹಸಿರು ಪಟಾಕಿಯೆನಿಸುವುದಿಲ್ಲ ಮತ್ತು ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ದೀಪಾವಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು ಹಾಗೂ ಇವುಗಳನ್ನು ಬಳಸುವಾಗ ಯಾವುದೇ ಪ್ರಾಣಿ, ಪಕ್ಷಿಗಳು, ಮಕ್ಕಳು ಹಾಗೂ ವೃದ್ಧರಿಗೆ ತೊಂದರೆಯಾಗದಂತೆ ಬಳಸಬೇಕು. ಯಾವುದೇ ಸ್ಥಳೀಯ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳ ಸುತ್ತಮುತ್ತಲಿನ ಇನ್ನಾವುದೇ ನಿಷೇಧಿತ ಪ್ರದೇಶದಲ್ಲಿ ಯಾವುದೇ ರೀತಿಯ ಪಟಾಕಿಗಳನ್ನು ಸ್ಫೋಟಿಸುವಂತಿಲ್ಲ ಅಥವಾ ಬಳಸುವಂತಿಲ್ಲ. ಎಲ್ಲಾ ಸ್ಥಳೀಯ ಸಂಸ್ಥೆ ಹಾಗೂ ಪೊಲೀಸ್ ಇಲಾಖೆಗಳು ಕಡ್ಡಾಯವಾಗಿ ಪಾಲಿಸಬೇಕು ಎಂದು ಸಚಿವರು ಸೂಚನೆ ನೀಡಿದ್ದಾರೆ.

ಉದಯವಾಹಿನಿ
ಪ್ರಾದೇಶಿಕ
ಭಾನುವಾರ 01ನವೆಂಬರ್ 2026

ಪ್ರಥಮ ಸ್ಥಾನ ಪಡೆದ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ

• **ಉದಯವಾಹಿನಿ, ನಂಜನಗೂಡು**

ಕರ್ತವ್ಯದಲ್ಲಿ ಬದ್ಧತೆ, ಕಾರ್ಯನಿರ್ವಹಣೆಯಲ್ಲಿ ಶಿಸ್ತು, ಅಪರಾಧ ನಿಯಂತ್ರಣದಲ್ಲಿ ದಕ್ಷತೆ ಹಾಗೂ ಸಾರ್ವಜನಿಕರೊಂದಿಗೆ ಜನಸ್ನೇಹಿ ನಡವಳಿಕೆ ಈ ಎಲ್ಲಾ ಅಂಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ 2026ನೇ ಸಾಲಿನ ಠಾಣೆಗಳ ಕಾರ್ಯನಿರ್ವಹಣಾ ಮೌಲ್ಯಮಾಪನದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಮೈಸೂರು ಜಿಲ್ಲೆಗೆ ಹೆಮ್ಮೆ ತಂದಿದೆ. ಪೊಲೀಸ್ ಠಾಣೆಯ ಕಾರ್ಯವೈಖರಿ, ಪ್ರಕರಣಗಳ ವಿಲೇವಾರಿ, ತನಿಖೆ, ನ್ಯಾಯಾಲಯದ ಪ್ರಕ್ರಿಯೆಗಳು, ಬೀಟ್ ವ್ಯವಸ್ಥೆ, ಸಾರ್ವಜನಿಕರ ಅರ್ಜಿಗಳ ವಿಚಾರಣೆ, ಡಿಜಿಟಲ್ ದಾಖಲೆಗಳ ನಿರ್ವಹಣೆ ಸೇರಿದಂತೆ ವಿವಿಧ ಮಾನದಂಡಗಳನ್ನು ಆಧರಿಸಿ ಈ ಆಯ್ಕೆ ಮಾಡಲಾಗಿದೆ.

ಸೀಮಿತ ಸಿಬ್ಬಂದಿ ಬಲದ ನಡುವೆಯೂ ಅತ್ಯುತ್ತಮ ಸಾಧನೆ ಮಾಡಿರುವುದು ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕರ್ತವ್ಯನಿಷ್ಠೆಗೆ ಸಾಕ್ಷಿಯಾಗಿದೆ. ಪೊಲೀಸ್ ಇನ್ಸ್‌ಪೆಕ್ಟರ್ ಎಸ್. ಆನಂದ್ ಅವರು 2025ರ ಅಕ್ಟೋಬರ್ 10ರಂದು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿ ಅಧಿಕಾರವಹಿಸಿಕೊಂಡಿದ್ದರು.

ಗ್ರಾಮಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ: ಶಾಸಕ ಗಣೇಶ್ ಪ್ರಸಾದ್

• **ಉದಯವಾಹಿನಿ, ಗುಂಡ್ಲುಪೇಟೆ**


ಉದಯವಾಹಿನಿ ಚಿತ್ರ

ತಾಲ್ಲೂಕಿನ ಪ್ರತಿ ಗ್ರಾಮದಲ್ಲೂ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಹಂತ ಹಂತವಾಗಿ ಮೂಲಸೌಕರ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ತಾಲ್ಲೂಕಿನ ಪಂಜನಹಳ್ಳಿ ಗ್ರಾಮದಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 20 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಸುಸಜ್ಜಿತ ರಸ್ತೆ ಚರಂಡಿ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಸಮುದಾಯ ಭವನ, ದೇವಸ್ಥಾನ, ಶಾಲಾ ಕೊಠಡಿ, ಕಾಂಪೌಂಡ್ ಸವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ. ಅನುದಾನ ಬಿಡುಗಡೆಯಾದ ಕೂಡಲೇ ಗ್ರಾ.ಪಂ.ತಿ ವ್ಯಾಪ್ತಿಯ ರಸ್ತೆ ಹಾಗೂ ಸಂಪರ್ಕ ರಸ್ತೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು. ಕಾಮಗಾರಿಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸಿ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಾಗುವುದು

ವಿವಿಧ ಕಾಮಗಾರಿಗಳಿಗೆ ಚಾಲನೆ: ತಾಲ್ಲೂಕಿನ ಹಳ್ಳದಮಾದಹಳ್ಳಿ ಗ್ರಾಮದಲ್ಲಿ 25 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿ, ಬಸವೇಶ್ವರ ದೇವಸ್ಥಾನದ ಚಾವಡಿಯಿಂದ ಮಹದೇವಪ್ಪ ಅವರ ಮನೆಯವರೆಗೆ 30 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ, ಮಳವಳ್ಳಿ-ಮಡಹಳ್ಳಿ ಸಂಪರ್ಕ ರಸ್ತೆಗೆ 30 ಲಕ್ಷ ರೂ. ಪಂಜನಹಳ್ಳಿಯಲ್ಲಿ 20 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ, ಭೀಮನಬೀಡು-ಕೂತನೂರು ಸಂಪರ್ಕ ರಸ್ತೆಗೆ 40 ಲಕ್ಷ ರೂ. ಕಂದೇಗಾಲ ಗ್ರಾಮದಲ್ಲಿ 40 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು. ತ್ರಿಯಂಭಕಪುರ ಗ್ರಾಮದ ಗೇಟ್ ಬಳಿ 10 ಲಕ್ಷ ರೂ. ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಗೂ ಚಾಲನೆ ನೀಡಿದರು. ಎಪಿಎಂಸಿ ಅಧ್ಯಕ್ಷ ವಿರೂಪಾಕ್ಷ, ಮುಖಂಡಸತೀಶ್ ಚಂದ್ರ, ಜಿ.ರಾಮು, ಮಂಜುನಾಥ್, ಆನಂದ್, ಗ್ರಾಪಂ ಮಾಜಿ ಅಧ್ಯಕ್ಷ ನಾಗೇಂದ್ರ, ಸುನೀಲ್, ರಾಮಶೆಟ್ಟಿ, ರಾಜೇಂದ್ರ, ಪುಟ್ಟರಾಜು, ದೇವರಾಜು, ಗುರು, ಎಇಇ ಅರ್ಚನಾ, ಪ್ರಶಾಂತ್ ಉಪಸ್ಥಿತರಿದ್ದರು.

ಲಂಚಕ್ಕೆ ಬೇಡಿಕೆ ಮಹಿಳಾ ನೌಕರಳಿಗೆ ಕಿರುಕುಳ ಆರೋಪ

ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯರ ಬಳಿಯೇ ಲಂಚ ಪಡೆದಿದ್ದಕ್ಕಾಗಿ ಈತನನ್ನು ಅಮಾನತು ಮಾಡುವಂತೆ ಪ್ರತಿಭಟನೆ ನಡೆಸಲಾಗಿತ್ತು

• **ಉದಯವಾಹಿನಿ**, ಹನೂರು

1 ಕಛೇರಿಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ

2 ನಾವೇ ಅವನಿಗೆ ಬುದ್ಧಿವಾದ ಹೇಳಿದ್ದೆವು

3 ಮಹಿಳಾ ಸಿಬ್ಬಂದಿಗೆ ಕಿರುಕುಳ ನೀಡುವುದು

ತಾಲ್ಲೂಕು ತಹಶೀಲ್ದಾರ್ ಕಚೇರಿಯ ನಿಯೋಜನೆ ಶಾಖೆಯ ಸಿಬ್ಬಂದಿ ಶ್ರೀಧರ್ ಎಂಬುವರು ಸಾರ್ವಜನಿಕರ ಕೆಲಸ ಕಾರ್ಯಗಳನ್ನು ನಿಗದಿತ ಸಮಯದಲ್ಲಿ ಮಾಡಿಕೊಡುತ್ತಿಲ್ಲ.

ಪ್ರತಿಯೊಬ್ಬರ ಬಳಿ ಲಂಚ ಕೇಳುವುದಲ್ಲದೆ, ಮಹಿಳಾ ಸಹೋದ್ಯೋಗಿಗಳಿಗೆ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ಛಲವಾದಿ ಮಹಾಸಭಾ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ಆರೋಪಿಸಿದ್ದಾರೆ.

ಹನೂರು ತಾಲ್ಲೂಕು ಕಚೇರಿಯ ಈ ಹಿಂದೆ ರೆಕಾರ್ಡ್ ರೂಂನ ದ್ವಿತೀಯ ದರ್ಜೆ ಸಹಾಯಕ ಕೆ.ಪಿ. ಶ್ರೀಧರ್ ಅವರು ಈ ಹಿಂದೆ ಕೊಳ್ಳೇಗಾಲ ತಾಲ್ಲೂಕು ಕಛೇರಿಯಲ್ಲಿ ಕರ್ತವ್ಯ ನಿರ್ವಹಣೆ ವೇಳೆ ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯರ ಬಳಿಯೇ ಲಂಚ ಪಡೆದಿದ್ದಕ್ಕಾಗಿ ಈತನನ್ನು ಅಮಾನತು ಮಾಡುವಂತೆ ಪ್ರತಿಭಟನೆ ನಡೆಸಲಾಗಿತ್ತು.

ಆ ವೇಳೆ ವರ್ತನೆ ಬದಲಾಯಿಸಿಕೊಳ್ಳುವಂತೆ ನಾವೇ ಅವನಿಗೆ ಬುದ್ಧಿವಾದ ಹೇಳಿದ್ದೆವು. ಆದರೆ ಈತ ಇನ್ನೂ ವರ್ತನೆ ಬದಲಾಯಿಸಿಕೊಂಡಿಲ್ಲ. ಮಹಿಳಾ ಸಿಬ್ಬಂದಿಗೆ ಕಿರುಕುಳ ನೀಡುವುದು ಇವನ ಹಳೆಯ ಚಾಳಿಯಾಗಿದ್ದು, ಇತ್ತೀಚೆಗೆ ಹನೂರು ತಾಲ್ಲೂಕು ಕಚೇರಿಯಲ್ಲಿ ಓರ್ವ ಯುವತಿಯ ಕೈ ಹಿಡಿದು ಅಸಭ್ಯವಾಗಿ ವರ್ತಿಸಿರುವುದಕ್ಕೆ ಆಕೆ ಲಿಖಿತ ದೂರು ನೀಡಿದ್ದಾಳೆ ಎಂದು ಆರೋಪ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

ಶ್ರೀಧರ್ ಕಛೇರಿಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಹಾಗೂ ಇತನದ್ದು ಲಂಚ ಹಗರಣ ಜಾಸ್ತಿಯಾಗಿದೆ ಎಂದು ಡಿಸಿಗೆ ನಾವು ದೂರು ಕೊಟ್ಟಿದ್ದೆವು. ಅದಕ್ಕೆ ಅವರನ್ನು ನಮ್ಮ ಮನವಿಯ ಮೇರೆಗೆ ಬೇರೆ ಶಾಖೆಗೆ ವರ್ಗಾವಣೆ ಮಾಡಿದ್ದಕ್ಕೆ ಈಗ ತಹಶೀಲ್ದಾರ್ ಕೆ.ಎನ್ ಚೈತ್ರಾ ಅವರ ಮೇಲೆ ಜಾತಿ ನಿಂದನೆ ಮಾಡಿದ್ದಾರೆ ಎಂದು ಎಸ್ಪಿ ಅವರಿಗೆ ದೂರು ನೀಡಿರುವುದು ಸರಿಯಲ್ಲ ಎಂದು ತಿಳಿಸಿದರು.

ತಹಶೀಲ್ದಾರರು ಈತನ ಅಕ್ರಮ ಕೆಲಸ ಮಾಡಿಕೊಡದಿದ್ದಾಗ ಜಾತಿ ನಿಂದನೆ ಕೇಸ್ ಹಾಕುವುದು ಕಾನೂನಿನ ದುರುಪಯೋಗ. ಇದು ಒಬ್ಬರ ತಲೆಗೆ ಹೋಗಲ್ಲ, ಇಡೀ ಚಾಮರಾಜನಗರ, ಇಡೀ ರಾಜ್ಯದ ನಮ್ಮ ಜನಾಂಗಕ್ಕೆ ಅವಮಾನ. ಇದರಿಂದ ನಿಜವಾದ ದಲಿತ ಜನಾಂಗಕ್ಕೆ ಬಹಳ ನೋವಾಗುತ್ತೆ. ಸುಮ್ಮನೆ ಸುಳ್ಳು ಕೇಸ್ ಹಾಕಿದರೆ ಇಂತಹ ಸೂಕ್ಷ್ಮ ಪ್ರದೇಶದಲ್ಲಿ ಅಧಿಕಾರಿಗಳು ಕೆಲಸ ಮಾಡಲು ಹೆದರುತ್ತಾರೆ. ಸರ್ಕಾರ ತನಿಖೆ ಮಾಡಿ ಕಾನೂನು ಕ್ರಮ ತೆಗೆದುಕೊಳ್ಳಲಿ ಎಂದು ಆಗ್ರಹಿಸಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಟ್ಟಿರುವ ಎಸ್‌ಸಿ/ಎಸ್‌ಟಿ ಕಾನೂನನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಒಬ್ಬ ಕೆ.ಎ.ಎಸ್ ಅಧಿಕಾರಿಯ ಮೇಲೆ ಈ ರೀತಿ ಜಾತಿನಿಂದನೆ ಕೇಸ್ ಹಾಕಲು ಸಾಧ್ಯವೇ ಎಂದು ಪ್ರಶ್ನಿಸಿದರು.


ಗೋಪಿನಾಥಂ, ಒಡೆಯರಪಾಳ್ಯ, ಬೈಲೂರು, ಹೂಗ್ಯಂನಂತಹ ಗಡಿ ಗ್ರಾಮಗಳಿಂದ ಬರುವ ಜನರು ಒಂದು ಆರ್.ಟಿ.ಸಿ ಗೆ ಆಧಾರ್ ನಂಬರ್ ಸೇರಿಸಲು, ತಿದ್ದುಪಡಿಗೂ ಒಂದು ದಿನ ಕಾಯಬೇಕು , ಸಣ್ಣಪುಟ್ಟ ಕೆಲಸಕ್ಕೂ 20 ರಿಂದ 30 ಸಾವಿರ ರೂಗಳು ಕೊಡಬೇಕು ಎಂದು ಪೀಡಿಸುತ್ತಾರೆ. ಕಛೇರಿಯಲ್ಲಿ ಕರ್ತವ್ಯ ನಿರ್ವಹಣೆ ಮಾಡುವ ಒಬ್ಬೊಬ್ಬರು ಇಲ್ಲೇ 20-30 ಎಕರೆ ಮಾಡಿಕೊಂಡಿದ್ದಾರೆ ಎಂದು ರೈತರು ನೇರವಾಗಿ ಆರೋಪ ಮಾಡಿದ್ದಾರೆ, ಆದರೂ ಯಾವುದೇ ಕ್ರಮವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹನೂರು ಪಟ್ಟಣದ ಲೋಕೋಪಯೋಗಿ ಇಲಾಖೆಯ ವಸತಿ ಗೃಹದ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ಅವರು ತಹಶೀಲ್ದಾರ್ ಕಚೇರಿಯ ನಿಯೋಜನೆ ಶಾಖೆಯ ಸಿಬ್ಬಂದಿ ಶ್ರೀಧರ್ ನೌಕರನನ್ನು ಅಮಾನತು ಮಾಡಿ ಬೇರೆ ಜಿಲ್ಲೆಗೆ ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದೆ.-ಛಲವಾದಿ ಮಹಾಸಭಾ

ಸರ್ಕಾರಿ ಜಮೀನನ್ನು ಯಾರೋ ಬಂದು ಖಾತೆ ಮಾಡಿ ಎಂದ ತಕ್ಷಣ ಮಾಡಲು ಆಗುವುದಿಲ್ಲ. ಕಚೇರಿ ಕೆಲಸದಲ್ಲಿ ಜಾತಿಯನ್ನು ತರುವುದು ತಪ್ಪು. ವೈಯಕ್ತಿಕ ಸಮಸ್ಯೆಗಳಿದ್ದರೆ ಮೇಲಾಧಿಕಾರಿಗಳ ಮೂಲಕ ಬಗೆಹರಿಸಿಕೊಳ್ಳುವುದು ಬಿಟ್ಟು ಜಾತಿ ನಿಂದನೆ, ಬೆದರಿಕೆ ಎಂದು ಹೇಳುವುದು ಸರಿಯಲ್ಲ ಎಂದು ತಿಳಿಸಿದರು.
-ಮಾಜಿ ಸದಸ್ಯ ಮಹೇಶ್

ಜ್ಯೋತಿಷ್ಯಶಾಸ್ತ್ರಕ್ಕೆ ಮನ್ನಣೆ : ಸರ್ಕಾರದ ನಿರ್ಧಾರಕ್ಕೆ ಸ್ವಾಗತ


ಉದಯವಾಹಿನಿ ಚಿತ್ರ



• **ಉದಯವಾಹಿನಿ, ರಾಮನಗರ**

ಕರ್ನಾಟಕ ರಾಜ್ಯದ 71ನೇ ರಾಜ್ಯೋತ್ಸವದ ಅಂಗವಾಗಿ ರಾಜ್ಯ ಸರ್ಕಾರವು ಇತಿಹಾಸದಲ್ಲೇ ಮೊದಲ ಬಾರಿಗೆ ಜ್ಯೋತಿಷ ಶಾಸ್ತ್ರ ಮತ್ತು ವಾಸ್ತು ವಿಜ್ಞಾನ ಕ್ಷೇತ್ರಗಳ ಗಣನೀಯ ಸಾಧನೆಯನ್ನು ಗುರುತಿಸಿ ಇಬ್ಬರು ಹಿರಿಯ ವಿದ್ವಾಂಸರಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿರುವುದನ್ನು ಕರ್ನಾಟಕ ರಾಜ್ಯ ಜ್ಯೋತಿಷರ ಹಾಗೂ ಜ್ಯೋತಿಷ್ಯ ಬೋಧನ ಸಂಸ್ಥೆಗಳ ಒಕ್ಕೂಟ ಸ್ವಾಗತಿಸಿದೆ.

ಜ್ಯೋತಿಷ್ಯ ವಿದ್ವಾಂಸರಾದ ರಾಜಗುರು ದ್ವಾರಕನಾಥ್ ಹಾಗೂ ವಾಸ್ತು ವಿಜ್ಞಾನ ವಿದ್ವಾಂಸ ಬಿ. ಪಿ. ಆರಾಧ್ಯ ಅವರು ಈ ಬಾರಿಯ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಇಬ್ಬರೂ ಹಿರಿಯ ವಿದ್ವಾಂಸರು ಕಳೆದ 35 ರಿಂದ 40 ವರ್ಷಗಳಿಗೂ ಹೆಚ್ಚು ಕಾಲದಿಂದ ಜ್ಯೋತಿಷ್ಯ ಮತ್ತು ವಾಸ್ತು ಕ್ಷೇತ್ರಗಳಲ್ಲಿ ನಿರಂತರ ಸೇವೆ ಸಲ್ಲಿಸುತ್ತಾ, ತಮ್ಮ ಪಾಂಡಿತ್ಯ ಹಾಗೂ ಮಾರ್ಗದರ್ಶನದ ಮೂಲಕ ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

ಜ್ಯೋತಿಷ್ಯ ಹಾಗೂ ವಾಸ್ತು ಶಾಸ್ತ್ರ ಕ್ಷೇತ್ರಗಳಲ್ಲೂ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕೆಂದು ಕಳೆದ ಮೂರು ವರ್ಷಗಳಿಂದ ಒಕ್ಕೂಟ ಸರ್ಕಾರಕ್ಕೆ ಸತತವಾಗಿ ಮನವಿ ಮಾಡುತ್ತಾ ಬಂದಿತ್ತು. ನಮ್ಮ ಬಹುದಿನಗಳ ಮನವಿಯನ್ನು ಪುರಸ್ಕರಿಸಿ ಈ ಐತಿಹಾಸಿಕ ತೀರ್ಮಾನ ಕೈಗೊಂಡಿರುವ ರಾಜ್ಯ ಸರ್ಕಾರಕ್ಕೆ ಸಮಸ್ತ ಜ್ಯೋತಿಷಿಗಳು ಹಾಗೂ ವಾಸ್ತು ತಜ್ಞರ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಗಜೇಂದ್ರ ಬಾಬು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿವೃದ್ಧಿ ಕಾರ್ಯಕ್ಕೆ ಶೀಘ್ರ 50 ಕೋಟಿ ಬಿಡುಗಡೆ

• **ಉದಯವಾಹಿನಿ, ರಾಮನಗರ**

ತಾಲ್ಲೂಕಿನ ಸುಗ್ಗನಹಳ್ಳಿ ಮತ್ತು ಮಾಯಗಾನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 35 ಕೋಟಿ ರುಪಾಯಿ ವೆಚ್ಚದಲ್ಲಿ ಮೌಲಸೌಕಾರ್ಯ ಕಲ್ಪಿಸುವ ಕಾರ್ಯ ನಡೆಯುತ್ತಿದ್ದು, ಉಳಿದ ಅಭಿವೃದ್ಧಿ ಕಾರ್ಯಗಳಿಗಾಗಿ ಶೀಘ್ರದಲ್ಲಿಯೇ 50 ಕೋಟಿ ರುಪಾಯಿ ಬಿಡುಗಡೆ ಆಗಲಿದೆ ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದರು.

ತಾಲ್ಲೂಕಿನ ಸುಗ್ಗನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮ ಉದ್ಘಾಟಿಸಿದ ಅವರು, ಸುಗ್ಗನಹಳ್ಳಿ ಗ್ರಾಮದಲ್ಲಿ ರೇಷ್ಮೆ ಇಲಾಖೆ ಜಾಗವನ್ನು ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿ ಸುಮಾರು 15 ಕೋಟಿ ರುಪಾಯಿ ವೆಚ್ಚದಲ್ಲಿ ಕೆಪಿಎಸ್ ಶಾಲೆ ನಿರ್ಮಾಣ ಮಾಡಲಾಗುವುದು. ಈ ಭಾಗದಲ್ಲಿ 120 ಎಕರೆ ಸರ್ಕಾರಿ ಜಾಗ ಗುರುತಿಸಿ ಬಡವರಿಗೆ ನಿವೇಶನ ವಿತರಿಸಲು ಕ್ರಮ ವಹಿಸಲಾಗಿದೆ. ನಿವೇಶನಗಳ ಅಭಿವೃದ್ಧಿಗಾಗಿ ಸರ್ಕಾರಕ್ಕೆ 27 ಕೋಟಿ ರುಪಾಯಿಗಳ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ಹೇಳಿದರು. ಅರ್ಕಾವತಿ ನದಿಗೆ ಅಡ್ಡಲಾಗಿ ಸುಗ್ಗನಹಳ್ಳಿ ಮತ್ತು ಗದಗಯ್ಯನದೊಡ್ಡಿ ಬಳಿ ಸೇತುವೆ ನಿರ್ಮಾಣ ಮಾಡುತ್ತಿದ್ದೇವೆ. ಕುಂಬಾರದೊಡ್ಡಿ ಬಳಿ ವಸತಿ ನಿಲಯ ನಿರ್ಮಾಣ , ರಾಂಪುರ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ರಾಂಪುರ, ಸುಗ್ಗನಹಳ್ಳಿ, ಹಾಗಲಹಳ್ಳಿಯಲ್ಲಿ ಹೈ ಮಾಸ್ ದೀಪ ಅಳವಡಿಕೆ, ಗ್ರಾಮಗಳ ಸೌಂದರೀಕರಣ ವೃದ್ಧಿಗೆ ಒತ್ತು ನೀಡಿದ್ದೇವೆ ಎಂದು ತಿಳಿಸಿದರು. ಮಂಚನಬೆಲೆ


ಉದಯವಾಹಿನಿ ಚಿತ್ರ

ಎಡ ಮತ್ತು ಬಲದಂಡೆ ನಾಲೆಗಳನ್ನು ಸ್ವಚ್ಛತೆ ಮಾಡಿ ನೀರು ಹರಿಸಿ ರೈತರ ಕನಸನ್ನು ನನಸು ಮಾಡುತ್ತಿದ್ದೇವೆ. ಮಂಚನಬೆಲೆ ಬಹು ಉದ್ದೇಶಿತ ಕುಡಿಯುವ ನೀರಿನ ಯೋಜನೆ ಮೂಲಕ ಕಸಬಾ ಹೋಬಳಿಯ ಗ್ರಾಮಗಳಿಗೆ ನೀರು ಪೂರೈಸುವ ಕೆಲಸ ಪ್ರಗತಿಯಲ್ಲಿದೆ ಎಂದರು.

ಬಗರ್ ಹುಕ್ಕುಂ ಸಾಗುವಳಿ ಸ್ಥಳ ಪರಿಶೀಲನೆ ಜೊತೆಗೆ ರಸ್ತೆ, ಚರಂಡಿ, ಅಂಗನವಾಡಿ, ಶಾಲಾ ಕಟ್ಟಡಗಳ ನಿರ್ಮಾಣ ಸೇರಿದಂತೆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಎಲ್ಲ ಗ್ರಾಮಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿರುವ ತೃಪ್ತಿ ನನಗಿದೆ ಎಂದು ಹೇಳಿದರು.

ಸಭೆಯಲ್ಲಿ ತಹಶೀಲ್ದಾರ್ ತೇಜಸ್ವಿನಿ, ತಾಲ್ಲೂಕು ವೈದ್ಯಾಧಿಕಾರಿ ಡಾ.ಉಮಾ, ಪಿಆರ್ ಇಡಿ ಎಇಇ ಲಾವಣ್ಯ, ಇಂಜಿನಿಯರ್‌ಗಳಾದ ಸತ್ಯಪ್ರಕಾಶ್, ನೂತನ್, ಪಶು ವೈದ್ಯಾಧಿಕಾರಿ ಡಾ.ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಹೆಚ್.ರಾಜು, ಮುಖಂಡರಾದ ಆರ್.ದೊಡ್ಡವೀರಯ್ಯ, ಆಂಜನಪ್ಪ, ವಾಸು, ರವಿ, ರಾಮಯ್ಯ, ಉಮಾಶಂಕರ್, ರಂಜಿತ್, ಬೈರೇಗೌಡ, ಗುರುಪ್ರಸಾದ್, ಮುಕುಂದ,

ಸ್ವಚ್ಛತೆ, ಸುರಕ್ಷತೆಗೆ ಆದ್ಯತೆ ನೀಡಿ

• **ಉದಯವಾಹಿನಿ, ಬೆಟ್ಟದಪುರ**

ಗ್ರಾಮದ ಮಧ್ಯಭಾಗದಲ್ಲಿರುವ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆವರಣದಲ್ಲಿ ನ. 9ಮತ್ತು 10ರಂದು ನಡೆಯಲಿರುವ ದೀಪಾವಳಿ ದೀವಟಿಗೆ ಉತ್ಸವದ ಪೂರ್ವಭಾವಿ ಸಭೆ ತಹಶೀಲ್ದಾರ್ ನಿಸರ್ಗಪ್ರಿಯ ನೇತೃತ್ವದಲ್ಲಿ ನಡೆಯಿತು.

ಉತ್ಸವಕ್ಕೆ ಆಗಮಿಸುವ ಭಕ್ತರಿಗೆ ಯಾವುದೇ ಅನಾನುಕೂಲವಾಗದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಅಧಿಕಾರಿಗಳಿಗೆ ತಹಶೀಲ್ದಾರ್ ಸೂಚಿಸಿದರ ಬೆಟ್ಟ ಸುತ್ತಮುತ್ತಲಿನ ಪ್ರದೇಶ ಬೆಟ್ಟಕ್ಕೆ ತೆರಳುವ ರಸ್ತೆಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಬೆಟ್ಟದ ಮೇಲೆ ವ್ಯಾಪಾರ ನಡೆಸುವವರು ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆಯಬೇಕು.

ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಿ, ವ್ಯಾಪಾರಿಗಳು ತಾವು ತಂದ ವಸ್ತುಗಳನ್ನು ವಾಪಸ್ ತೆಗೆದುಕೊಂಡು ಹೋಗುವಂತೆ ಸೂಚಿಸಬೇಕು.

ಮೆಟ್ಟಿಲುಗಳ ಬಳಿ ಕಸದ ಬುಟ್ಟಿಗಳನ್ನು ಅಳವಡಿಸಬೇಕು ಎಂದರು. ಬೆಟ್ಟದ ಮೇಲಿನ ಹಾಗೂ ಗ್ರಾಮದ ದೇವಾಲಯಗಳಿಗೆ ವಿದ್ಯುತ್ ದೀಪಾಲಂಕಾರ, ರಾತ್ರಿ ವೇಳೆ ಅಗತ್ಯವಿರುವ ಸ್ಥಳಗಳಲ್ಲಿ ಫೋಕಸ್ ಲೈಟ್ ಅಳವಡಿಸುವಂತೆ ವಿದ್ಯುತ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಬೆಟ್ಟದ ತಳಭಾಗದಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ, ದೇವಾಲಯದ ಒಳಭಾಗದಲ್ಲಿ ಸಿಬ್ಬಂದಿ ನಿಯೋಜನೆ ಹಾಗೂ ದೀವಟಿಗೆ ಉತ್ಸವದ ಸಂದರ್ಭದಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಗ್ರಾಮದ ಮುಖಂಡ ದೇವರಾಜು ಮಾತನಾಡಿ, ಬೆಟ್ಟದ ಮೇಲಿರುವ ದೇವರ ಕೊಳವನ್ನು ಸ್ವಚ್ಛತೆ ಮಾಡಿ ಪ್ರತಿವರ್ಷ ಗಂಗೆ ಪೂಜೆ ನಡೆಸುವ ಸಂಪ್ರದಾಯ ಬೆಳೆಸಿಕೊಳ್ಳಬೇಕು. ಬರಗಾಲದಲ್ಲಿಯೂ ಕೊಳದಲ್ಲಿ ನೀರು ಕಡಿಮೆಯಾಗುವುದಿಲ್ಲ.

ಅಂಬಾರಿ ಸರ್ಕಾರದ್ದಾಗಿದ್ರೂ ಕಟ್ಟೋ ಹಗ್ಗ ರಾಜಮನೆತನದ್ದು

• **ಉದಯವಾಹಿನಿ, ಮೈಸೂರು**

ದಸರಾ ಸಂದರ್ಭದಲ್ಲಿ ಎಷ್ಟೇ ಅನ್ಯಾಯ ಆಗುತ್ತಿದ್ದರೂ ಮೌನ ತಾಳಿದ್ದೆ. ಏನನ್ನೂ ಮಾತನಾಡಿರಲಿಲ್ಲ, ಮುಂದೆಯೂ ಸಹಿಸುವುದಿಲ್ಲ, ಮೈಸೂರು ರಾಜಮನೆತನ ಗೌರವ ಸ್ಥಾನದಲ್ಲಿ ಇರುವಂಥದ್ದು. ಆ ಬಗ್ಗೆ ಮಾತನಾಡುವಾಗ, ರೀತಿ,ನೀತಿ ಮೀರಬಾರದು ಎಂದು ಶಾಸಕ ತನ್ವೀರ್ ಸೇಠ್ ಅವರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಅವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಮಾತನಾಡಿದ ಅವರು, ಅಂಬಾರಿ ರಾಜ್ಯ ಸರ್ಕಾರದ ಅಧೀನದಲ್ಲಿದ್ದರೂ, ಅದರ ಜೋಡಣೆಗೆ ಬೇಕಾದ ಹಗ್ಗ ರಾಜಮನೆತನದ ಬಳಿ ಇರುವುದು ಸಂಬಂಧಗಳ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ ಎಂದಿದ್ದಾರೆ. ಜಿಲ್ಲಾಡಳಿತ, ರಾಜಮನೆತನ


ಉದಯವಾಹಿನಿ ಚಿತ್ರ



ಮತ್ತು ಸಂಬಂಧ ಪಟ್ಟ ಇಲಾಖೆಗಳನ್ನು ಒಳಗೊಂಡಂತೆ ಪ್ರತ್ಯೇಕ ಸಭೆ ನಡೆಸುವಂತೆ ಆಗ್ರಹಿಸಿದ ಅವರು, ಅಂಬಾರಿ ಸರ್ಕಾರದ ಬಳಿಯಿದ್ದರೂ ಅದರ ಜೋಡಣೆಗೆ ಬೇಕಾಗ ಹಗ್ಗ ರಾಜಮನೆತನದ ಬಳಿ ಇರುವುದು ಸಂಬಂಧಗಳ ಪ್ರಾಮುಖ್ಯತೆ ಎತ್ತಿ ತೋರಿಸುತ್ತದೆ ಎಂದರು.

ಮೈಸೂರು ಮಹಾರಾಜರ ಕೊಡುಗೆ ಅಪಾರವಾಗಿದ್ದು, ಆ ಗೌರವವನ್ನು ಕಾಪಾಡಿಕೊಳ್ಳಬೇಕು, ಅಂಬಾರಿ ನಮ್ಮದು ಎಂಬ ರಾಜಮನೆತನದ ಹೇಳಿಕೆ, ಅರಮನೆ ,ಸರ್ಕಾರದ ಆಸ್ತಿ ಎಂಬ ಚರ್ಚೆಗಳ ಬಗ್ಗೆ ಸ್ಪಷ್ಟತೆಗಾಗಿ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ರಾಜಮನೆತನದ ವಿರುದ್ಧ ಹೇಳಿಕೆ: ಮೈಸೂರಿನಲ್ಲಿ ಸಚಿವ ಯತೀಂದ್ರ ಸಿದ್ದರಾಮಯ್ಯ ವಿರುದ್ಧ ತೀವ್ರ ಪ್ರತಿಭಟನೆ ಮಾಡಿ ಎಲ್ಲರ ಹೇಳಿಕೆಗಳನ್ನೂ ಗಮನಿಸಿದ್ದೇನೆ. ವ್ಯತ್ಯಾಸಗಳಿದ್ದರೆ ಸರಿಪಡಿಸಿಕೊಳ್ಳಲು ಎಲ್ಲಾ ಸಂದರ್ಭದಲ್ಲೂ ಅವಕಾಶಗಳಿವೆ. ಇದು ನಾಲ್ಕು ಜನರ ಹಬ್ಬವಲ್ಲ, ನಾಡಹಬ್ಬ. ರಾಜ್ಯದ ಎಲ್ಲರಿಗೂ ಸೇರಿದ್ದಾಗಿದೆ. ಯಾರು ಯಾರ ಮೇಲೂ ದೂರುತ್ತಾ ಕೂರುವುದು ಬೇಡ. ಲೋಪಗಳಾಗಿದ್ದಲ್ಲಿ ಮುಂದೆ ಸರಿಪಡಿಸಿಕೊಂಡು ಹೋಗಬೇಕು ಎಂದರು.

ಸೂಕ್ತ ವೇದಿಕೆಯಲ್ಲಿ ಚರ್ಚಿಸಿ

ಆಗಿರುವುದರಲ್ಲಿ ಎಲ್ಲವೂ ಸರಿ ಎಂದು ನಾನು ಒಪ್ಪಲ್ಲ. ಎಲ್ಲವೂ ಸರಿ ಇಲ್ಲವೆಂದು ಹೇಳುವ ಮೂರ್ಖತನವೂ ನನ್ನಲ್ಲಿಲ್ಲ. ಎಲ್ಲವನ್ನೂ ಸೂಕ್ತ ವೇದಿಕೆಯಲ್ಲಿ ಚರ್ಚಿಸಿ ಸರಿಪಡಿಸಿಕೊಳ್ಳಬೇಕು. ಬೀದಿಯಲ್ಲಿ ನಿಂತು ಮಾತನಾಡುವುದು ಸರಿಯಲ್ಲ ಎಂದು ಹೇಳಿದರು.

ಅನ್ನದಾತನಿಗೆ ಬರಸಿಡಿಲು; ಕೃಷಿ ಕೈಬಿಟ್ಟು ದಿನಗೂಲಿಗೆ ಕೆಲಸದತ್ತ ಮುಖ

ಹಿಂದೆ ಕೃಷಿಯಿಂದ ಉತ್ತಮ ಆದಾಯ ಗಳಿಸುತ್ತಿದ್ದೆ. ಆಗ ಕೃಷಿ ಕಾರ್ಮಿಕರ ಕೂಲಿಯೂ ಕಡಿಮೆ ಇತ್ತು. ದಿನಕ್ಕೆ 150ರಿಂದ 175 ರೂ. ನೀಡಿದರೆ ಕಾರ್ಮಿಕರು ಸಿಗುತ್ತಿದ್ದರು.

• **ಉದಯವಾಹಿನಿ, ಚಾಮರಹಳ್ಳಿ**

1 ಕೃಷಿ ಕಾರ್ಮಿಕರ ಕೂಲಿಯೂ ಕಡಿಮೆ ಇತ್ತು

2 500 ರೂ. ಕೊಟ್ಟರೂ ಕೆಲಸಕ್ಕೆ ಜನ ಸಿಗುತ್ತಿಲ್ಲ

3 ಆದರೆ, ಬರ ಪರಿಸ್ಥಿತಿ ಎಲ್ಲವನ್ನೂ ಬದಲಿಸಿದೆ

ಸತತ ಮಳೆ ಕೊರತೆ ಮತ್ತು ತೀವ್ರ ಬರಗಾಲದ ಹಿನ್ನೆಲೆಯಲ್ಲಿ ಕೋಲಾರ ಹಾಗೂ ಕೆ.ಜಿ.ಎಫ್. ತಾಲ್ಲೂಕುಗಳ ರೈತರ ಬದುಕು ದುಸ್ತರವಾಗಿದೆ. ಎಂದೂ ಪರಾವಲಂಬಿಯಾಗದ, ಹತ್ತಾರು ಜನರಿಗೆ ಅನ್ನ ನೀಡುತ್ತಿದ್ದ ಸ್ವಾವಲಂಬಿ ಭೂಮಾಲೀಕರು, ಇಂದು ಕೃಷಿ ಕೈಬಿಟ್ಟು ಜೀವನೋಪಾಯಕ್ಕಾಗಿ ದಿನಗೂಲಿ ಮತ್ತು ಹೈನುಗಾರಿಕೆಯತ್ತ ಮುಖ ಮಾಡುವಂತಾಗಿದೆ.

ಕಳೆದ ವರ್ಷ ರಾಗಿ ಬೆಳೆ ನಷ್ಟ ಅನುಭವಿಸಿದ್ದ ಕೋಲಾರ ತಾಲ್ಲೂಕಿನ ಚಾಮರಹಳ್ಳಿಯ 56 ವರ್ಷದ ನಾಗೇಶಪ್ಪ ಅವರು, ಈ ಬಾರಿ ತಮ್ಮ ಮೂರು ಎಕರೆ ಜಮೀನಿನಲ್ಲಿ ಹಸಿಮೆಣಸಿನಕಾಯಿ ಬೆಳೆದು ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.

ಪತ್ನಿ ಹಾಗೂ ಇಬ್ಬರು ಪುತ್ರರಾದ ದಿನೇಶ್ ಮತ್ತು ನಂಜುಂಡ ಅವರ ಜವಾಬ್ದಾರಿ ಹೊತ್ತಿರುವ ಅವರು, ಬೆಳೆಯ ಜೊತೆಗೆ ಕೂಲಿ ಕೆಲಸವನ್ನೂ ಮಾಡುತ್ತಿದ್ದಾರೆ. ಹಸಿಮೆಣಸಿನಕಾಯಿ ಬೆಳೆ ಐದರಿಂದ ಆರು ತಿಂಗಳ ಅಲ್ಪಾವಧಿಯ ಬೆಳೆಯಾಗಿರುವುದರಿಂದ ಹೆಚ್ಚು


ಉದಯವಾಹಿನಿ ಚಿತ್ರ

ಆತಂಕವಿಲ್ಲ ಎಂಬುದು ಅವರ ಲೆಕ್ಕಾಚಾರ. ಪ್ರತಿದಿನ ಬೆಳಿಗ್ಗೆ ತಮ್ಮ ಜಮೀನಿನಲ್ಲಿ ಬೆಳೆ ನೋಡಿಕೊಂಡು, ಬಳಿಕ ಇತರರ ಹೊಲಗಳಲ್ಲಿ ಕೂಲಿ ಕೆಲಸಕ್ಕೆ ತೆರಳುತ್ತಾರೆ.

ಹಿಂದೆ ಕೃಷಿಯಿಂದ ಉತ್ತಮ ಆದಾಯ ಗಳಿಸುತ್ತಿದ್ದೆ. ಆಗ ಕೃಷಿ ಕಾರ್ಮಿಕರ ಕೂಲಿಯೂ ಕಡಿಮೆ ಇತ್ತು. ದಿನಕ್ಕೆ 150ರಿಂದ 175 ರೂ. ನೀಡಿದರೆ ಕಾರ್ಮಿಕರು ಸಿಗುತ್ತಿದ್ದರು. ಈಗ 500 ರೂ. ಕೊಟ್ಟರೂ ಕೆಲಸಕ್ಕೆ ಜನ ಸಿಗುತ್ತಿಲ್ಲ ಎಂದು ನಾಗೇಶಪ್ಪ ಬೇಸರ ವ್ಯಕ್ತಪಡಿಸಿದ್ದಾರೆ. ಇದೀಗ ತಾವೇ ದಿನಗೂಲಿ ಕೆಲಸಕ್ಕೆ ಹೋಗುತ್ತಿರುವುದರಿಂದ ಈ ಪರಿಸ್ಥಿತಿಯ ಇನ್ನೊಂದು ಮುಖವನ್ನೂ ಅವರು ನೋಡುತ್ತಿದ್ದಾರೆ.

ಆಗಿನ ದಿನಗಳಲ್ಲಿ ಕೃಷಿಯಿಂದ ಬರುತ್ತಿದ್ದ ಆದಾಯದಲ್ಲಿ ಸರಳ ಜೀವನ ನಡೆಸಲು ಸಾಧ್ಯವಿತ್ತು. ಹಾಗಾಗಿ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲಿಲ್ಲ. ಬರ ಪರಿಸ್ಥಿತಿ ಎಲ್ಲವನ್ನೂ ಬದಲಿಸಿದೆ ಎಂದು ನಾಗೇಶಪ್ಪ ಬೇಸರ ವ್ಯಕ್ತಪಡಿಸಿದ್ದಾರೆ. ನಾಗೇಶಪ್ಪ ಅವರ ಸ್ನೇಹಿತ ವೆಂಕಟಸ್ವಾಮಿ ಕೂಡ ಜಮೀನು ಹೊಂದಿದ್ದರೂ ಕೃಷಿ ಮಾಡುವುದನ್ನು ನಿಲ್ಲಿಸಿದ್ದಾರೆ. ಜಾನುವಾರು ಸಾಕಣೆಯನ್ನೇ ಜೀವನಾಧಾರವಾಗಿಸಿಕೊಂಡಿರುವ ಅವರು, ಹಾಲು ಮಾರಾಟದಿಂದ ಬರುವ ಆದಾಯದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಮಳೆಯ ಪರಿಸ್ಥಿತಿ ಸುಧಾರಿಸಿದರೆ ಮತ್ತೆ ತಮ್ಮ ಜಮೀನಿನಲ್ಲಿ ಕೃಷಿ ಆರಂಭಿಸುವುದಾಗಿ ತಿಳಿಸಿದ್ದಾರೆ.

ಈ ಋತುವಿನಲ್ಲಿ ತಮ್ಮ ಮೂರೂವರೆ ಎಕರೆ ಜಮೀನಿನಲ್ಲಿ ಟೊಮೆಟೊ ಬೆಳೆಯಲು ಸುಮಾರು 5 ಲಕ್ಷ ರೂ. ಖರ್ಚು ಮಾಡಿದ್ದರು. ಮಹಿಳಾ ಕಾರ್ಮಿಕರಿಗೆ ದಿನಕ್ಕೆ 500ರೂ. ಹಾಗೂ ಪುರುಷ ಕಾರ್ಮಿಕರಿಗೆ 700ರೂ. ಕೂಲಿ ನೀಡಿದ್ದರು. ಗಿಡಗಳು ಎರಡೂವರೆ ಅಡಿ ಎತ್ತರಕ್ಕೆ ಬೆಳೆದಿದ್ದರೂ ಮಳೆಯ ಅಭಾವದಿಂದ ಬೆಳೆ ನಷ್ಟವಾಗಿದೆ. ತಮ್ಮ ಹಿರಿಯ ಮಗ ಶ್ರೀಕಾಂತ್ ಪದವೀಧರನಾಗಿದ್ದು, ಕೃಷಿಯಲ್ಲಿ ಆಸಕ್ತಿ ತೋರದೆ ಮರದ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದಾನೆ. ಎರಡನೇ ಮಗ ಶ್ರೀಧರ್ ಪಿಯುಸಿ ಓದುತ್ತಿದ್ದು, ಹೊಲದ ಕೆಲಸದಲ್ಲಿ ತಂದೆಗೆ ನೆರವಾಗುತ್ತಾನೆ. ಟೊಮೆಟೊ ಕೃಷಿಯಲ್ಲಿ ಕಾರ್ಮಿಕರ ಕೂಲಿ ವೆಚ್ಚ ಹೆಚ್ಚಾಗಿರುವುದರಿಂದಲೇ ಸೌತೆಕಾಯಿ ಬೆಳೆಯಲು ಮುಂದಾಗಿದ್ದೇನೆ ಎಂದು ನಾರಾಯಣಸ್ವಾಮಿ ತಿಳಿಸಿದ್ದಾರೆ.

ಹೀಗಾಗಿ, ಹೆಚ್ಚು ಬಂಡವಾಳ ಹೂಡಿಕೆ ಮಾಡದೆ ಮತ್ತು ಕಡಿಮೆ ಕಾರ್ಮಿಕರ ಅಗತ್ಯವಿರುವ ಸೌತೆಕಾಯಿ ಬೆಳೆಯಲು ಅವರು ನಿರ್ಧರಿಸಿದ್ದಾರೆ. ಕೊಳವೆಬಾವಿ ಕೊರೆಸಿರುವ ರೈತರೂ ಭಾರೀ ನಷ್ಟ ಅನುಭವಿಸಿದ್ದಾರೆ. ನಮಗೆ ಈಗ ಮಳೆಯೊಂದೇ ಆಸರೆ ಎಂದು ಹೇಳಿದ್ದಾರೆ.-ನಾರಾಯಣಸ್ವಾಮಿ

ಟೊಮೆಟೊ ಇಳುವರಿ ಪಡೆಯಲು ಸಾಕಷ್ಟು ಮಳೆಯ

ಕೊಳವೆಬಾವಿ ಹೊಂದಿರುವ ರೈತರಿಗೂ ಉತ್ತಮ ಟೊಮೆಟೊ ಇಳುವರಿ ಪಡೆಯಲು ಸಾಕಷ್ಟು ಮಳೆಯ ಅಗತ್ಯವಿದೆ. ಅವರ ಕುಟುಂಬದ ಕೆಲವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, ಕೃಷಿ ನೋಡಿಕೊಳ್ಳಲು ನಾರಾಯಣಸ್ವಾಮಿ ಮಾತ್ರ ಊರಿನಲ್ಲಿ ಉಳಿದಿದ್ದಾರೆ.

ಮಿನಿ ನ್ಯೂಸ್

ಸಿಎಂಗೆ ಕಪ್ಪು ಬಾವುಟ ಪ್ರದರ್ಶಿಸಲು ಸಜ್ಜು: ರೈತರು ಪೊಲೀಸ್ ವಶಕ್ಕೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮಂಡ್ಯ**

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಡ್ಯಕ್ಕೆ ಆಗಮಿಸುವುದಕ್ಕೂ ಮುನ್ನವೇ ನಗರದಲ್ಲಿ ರೈತರ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿತು. ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಪ್ಪು ಬಾವುಟ ಪ್ರದರ್ಶಿಸಲು ಮುಂದಾದ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ನಗರದ ವಿಶ್ವೇಶ್ವರಯ್ಯ ಪ್ರತಿಮೆ ಬಳಿ ರೈತರು ಪ್ರತಿಭಟನೆ ನಡೆಸಿದರು.

ಸರ್ಕಾರಿ ಶಾಲೆಗಳನ್ನು ಉಳಿಸಬೇಕು, ಎಲ್ಲಾ ಮಕ್ಕಳಿಗೂ ಏಕರೂಪದ ಸಮಾನ ಶಿಕ್ಷಣ ಒದಗಿಸಬೇಕು ಹಾಗೂ ಕಬ್ಬಿಗೆ ಸೂಕ್ತ ಬೆಲೆ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಡ್ಯಕ್ಕೆ ಆಗಮಿಸುವ ಸಂದರ್ಭದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಲು ರೈತರು ನಿರ್ಧರಿಸಿದ್ದರು.ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ.ಜೆ. ಶೋಭಾರಾಣಿ ಅವರು ಪ್ರತಿಭಟನಕಾರರ ಮನವೊಲಿಸಲು ಪ್ರಯತ್ನಿಸಿದರು.ಆದರೆ, ಪೊಲೀಸರ ಮನವೊಲಿಕೆ ಪ್ರಯತ್ನ ವಿಫಲವಾದ ಹಿನ್ನೆಲೆಯಲ್ಲಿ ಪ್ರತಿಭಟನೆ ಮುಂದುವರಿಸಿದ ರೈತರನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಅವರನ್ನು ಬಸ್‌ನಲ್ಲಿ ಕರೆದೊಯ್ದರು.

ಕುಡಿಯುವ ನೀರಿನ ಟ್ಯಾಂಕ್‌ಗೆ ವಿಷ ಬೆರೆಸಿರುವ ಶಂಕೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬಂಗಾರಪೇಟೆ**

ತಾಲ್ಲೂಕಿನ ನೆರಳೇಕೆರೆ ಗ್ರಾಮದಲ್ಲಿ ಮನೆಯ ಕುಡಿಯುವ ನೀರಿನ ಟ್ಯಾಂಕ್‌ಗೆ ವಿಷ ಬೆರೆಸಿರುವ ಶಂಕೆ ವ್ಯಕ್ತವಾಗಿದ್ದು, ಈ ಕುರಿತು ಪೊಲೀಸರು ತನಿಖೆ ಆರಂಭಿಸಿದ್ದಾರೆ. ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿ ನಾರಾಯಣಪ್ಪ ಅವರ ಮನೆಯಲ್ಲಿ ಈ ಘಟನೆ ನಡೆದಿದೆ. ಎಂದಿನಂತೆ ರಾತ್ರಿ ಕುಟುಂಬದವರೆಲ್ಲರೂ ಮಲಗಿದ್ದು, ಬೆಳಿಗ್ಗೆ ಎದ್ದು ಮುಖ ತೊಳೆಯಲು ಹೋದಾಗ ದುರ್ವಾಸನೆ ಬಂದ ಹಿನ್ನೆಲೆಯಲ್ಲಿ ಮನೆಯ ಮೇಲಿದ್ದ ನೀರಿನ ಟ್ಯಾಂಕ್ ಪರಿಶೀಲಿಸಿದಾಗ ಅನುಮಾನಾಸ್ಪದ ಅಂಶಗಳು ಕಂಡುಬಂದಿವೆ. ತಕ್ಷಣ ಎಚ್ಚೆತ್ತುಕೊಂಡ ಕುಟುಂಬದವರು ನೀರನ್ನು ಬಳಸದಂತೆ ತಡೆದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದ ಕೂಡಲೇ ಪೊಲೀಸ್ ನಿರೀಕ್ಷಕ ಸಿ.ರವಿಕುಮಾರ್ ಅವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ನೀರಿನ ಮಾದರಿಯನ್ನು ಸಂಗ್ರಹಿಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ. ನಾರಾಯಣಪ್ಪ ಹಾಗೂ ಅವರ ಸಹೋದರ ಅಮರೇಶ್ ನಡುವೆ ಈ ಹಿಂದೆ ವೈಮನಸ್ಸು ಹಾಗೂ ಜಗಳಗಳು ನಡೆದಿರುವುದಾಗಿ ತಿಳಿದುಬಂದಿದೆ. ನೀರಿನ ಮಾದರಿಯ ಪರೀಕ್ಷಾ ವರದಿ ಹಾಗೂ ಪೊಲೀಸ್ ತನಿಖೆಯ ನಂತರವೇ ಘಟನೆಯ ನಿಜವಾದ ಸಂಗತಿ ಹೊರಬರಬೇಕಿದ್ದು, ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ನಾರಾಯಣಪ್ಪ ಒತ್ತಾಯಿಸಿದ್ದಾರೆ.

ಮದ್ಯಪಾನದ ದುಷ್ಪರಿಣಾಮಗಳ ಜಾಗೃತಿಗೆ ನಾಟಕ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ವಿಜಯಪುರ**


ಮದ್ಯವ್ಯಸನದಿಂದ ವ್ಯಕ್ತಿಯ ಆರೋಗ್ಯ ಹಾಳಾಗುವುದರ ಜೊತೆಗೆ ಕುಟುಂಬದಲ್ಲಿ ಕಲಹ, ಆರ್ಥಿಕ ಸಂಕಷ್ಟ, ಮಕ್ಕಳ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಗಡ್ಡದನಾಯಕಹಳ್ಳಿ ದುರ್ಗಾ ಮಹೇಶ್ವರಿ ದೇವಾಲಯದ ಧರ್ಮಾಕಾರಿ ನಾಗರಾಜಪ್ಪ ಸ್ವಾಮಿಜೀ ಹೇಳಿದರು. ಹೋಬಳಿಯ ಗಡ್ಡದನಾಯಕನಹಳ್ಳಿ ದುರ್ಗಾ ಮಹೇಶ್ವರಿ ದೇವಾಲಯದಲ್ಲಿ ಆಯೋಜಿಸಿದ್ದ ಕುಡಿತದಿಂದ ಆಗುವಂತಹ ದುಷ್ಪರಿಣಾಮಗಳ ಕುರಿತು ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕುಟುಂಬಗಳಲ್ಲಿ ಸಮಸ್ಯೆಗಳನ್ನು ಮನಸ್ಸಿಗೆ ಹಚ್ಚಿಕೊಂಡು, ಮದ್ಯಪಾನ ಮಾಡಿದರೆ ಎಲ್ಲವನ್ನೂ ಮರೆತುಹೋಗಬಹುದೆನ್ನುವ ಅಪನಂಬಿಕೆಯನ್ನು ಬಿಟ್ಟು, ಸಮಸ್ಯೆಗಳಿಗೆ ಕುಡಿತವೊಂದೇ ಪರಿಹಾರವಲ್ಲ.

ಕುಟುಂಬವೆಲ್ಲಾ ಅನ್ಯೋನ್ಯತೆಯಿಂದ ಪರಸ್ಪರ ನಂಬಿಕೆಯಿಂದ ಬದುಕಿದರೆ, ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಿಗಲಿದೆ. ಇಲ್ಲವಾದರೆ ಮಾನಸಿಕವಾಗಿ ನೆಮ್ಮದಿಯನ್ನು ಕಳೆದುಕೊಂಡು, ಜೀವಿಸಬೇಕಾಗುತ್ತದೆ. ಆದ್ದರಿಂದ ಕುಡಿತದ ಚಟದಿಂದ ಎಲ್ಲರೂ ದೂರವಿರಬೇಕು. ಧಾರ್ಮಿಕ ಕಾರ್ಯಗಳು, ಧ್ಯಾನ, ಯೋಗದಂತಹ ಕಾರ್ಯಕ್ರಮಗಳಿಂದ ಕುಡಿತದಿಂದ ಮುಕ್ತಿ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಪರಿವರ್ತನಾ ಕಲಾ ಸಂಸ್ಥೆಯ ಸಂಸ್ಥಾಪಕ ದೇವನಹಳ್ಳಿ ದೇವರಾಜ್ ಮಾತನಾಡಿ, ಸಮಾಜದಲ್ಲಿ ಮದ್ಯವ್ಯಸನ ದಿನೇ ದಿನೇ ಹೆಚ್ಚುತ್ತಿದ್ದು, ಇದರಿಂದ ಅನೇಕ ಕುಟುಂಬಗಳು ಬೀದಿಗೆ ಬೀಳುತ್ತಿವೆ. ಕಲೆಯ ಮೂಲಕ ಜನರಲ್ಲಿ ಅರಿವು ಮೂಡಿಸುವುದು ನಮ್ಮ ಸಂಸ್ಥೆಯ ಉದ್ದೇಶವಾಗಿದೆ ಎಂದರು.

ವಿಜಯಪುರದ ಕೆನರಾ ಬ್ಯಾಂಕ್ ರಸ್ತೆಯಲ್ಲಿ ಟ್ರಾಫಿಕ್ ಸಮಸ್ಯೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ವಿಜಯಪುರ**

ಪಟ್ಟಣದ ಹೃದಯ ಭಾಗದಲ್ಲಿರುವ ಕೆನರಾ ಬ್ಯಾಂಕ್ ಮುಂಭಾಗದ ರಸ್ತೆ ಹಾಗೂ ರೇಷ್ಮೆಗೂಡು ಮಾರುಕಟ್ಟೆ ರಸ್ತೆಯನ್ನು ದ್ವಿಚಕ್ರ ವಾಹನಗಳ ಅಕ್ರಮ ಪಾರ್ಕಿಂಗ್ ಸ್ಥಳವನ್ನಾಗಿ ಬಳಸಿಕೊಳ್ಳುತ್ತಿರುವುದರಿಂದ ಟ್ರಾಫಿಕ್ ಸಮಸ್ಯೆ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದೆ. ಬ್ಯಾಂಕ್ ಕೆಲಸಕ್ಕೆ ಹಾಗೂ ಮಾರುಕಟ್ಟೆಗೆ ಬರುವ ಜನರು ತಮ್ಮ ದ್ವಿಚಕ್ರ ವಾಹನಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸುತ್ತಿದ್ದಾರೆ. ಕೆಲವರು ಏರ್ ಪೋರ್ಟ್ ಗೆ, ಕಂಪನಿಗಳಿಗೆ ಕೆಲಸಗಳಿಗೆ ಹೋಗುವವರೂ ಕೂಡಾ ತಮ್ಮ ದ್ವಿಚಕ್ರ ವಾಹನಗಳನ್ನೂ ಇಲ್ಲೆ ಬಿಟ್ಟು ಹೋಗುತ್ತಾರೆ. ಇದರಿಂದ ವಾಹನ ಸಂಚಾರಕ್ಕೆ ಕೇವಲ ಕಿರಿದಾದ ಜಾಗ ಮಾತ್ರ ಉಳಿಯುತ್ತಿದೆ.

ಈ ರಸ್ತೆಯ ಮೂಲಕ ಸತ್ಯಮ್ಮ ಕಾಲೋನಿಗೆ ತೆರಳುವ ನೂರಾರು ನಾಗರಿಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ವೃದ್ಧರು ಪ್ರತಿನಿತ್ಯ ಪರದಾಡುವಂತಾಗಿದೆ. ಅತ್ಯಂತ ಗಂಭೀರ ವಿಷಯವೆಂದರೆ, ತುರ್ತು ಸಂದರ್ಭದಲ್ಲಿ ಆಂಬುಲೆನ್ಸ್ ಕೂಡಾ ಈ ರಸ್ತೆಯ ಮೂಲಕ ಸಂಚರಿಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅನಾರೋಗ್ಯ ಪೀಡಿತರನ್ನು ಆಸ್ಪತ್ರೆಗೆ ಸಾಗಿಸಲು ವಿಳಂಬವಾದರೆ ಪ್ರಾಣಹಾನಿಯೂ ಸಂಭವಿಸಬಹುದು ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಾರ್ವಜನಿಕರು ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದ್ದಾರೆ. ಪೊಲೀಸ್ ಇಲಾಖೆ ಈ ರಸ್ತೆಯಲ್ಲಿ ನೋ ಪಾರ್ಕಿಂಗ್ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಅಕ್ರಮ ಪಾರ್ಕಿಂಗ್ ಮಾಡುವ ವಾಹನಗಳ ವಿರುದ್ಧ ದಂಡ ವಿಧಿಸಬೇಕು. ಜೊತೆಗೆ ಪುರಸಭೆಯು ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು ಎಂಬುದು ನಾಗರಿಕರ ಒತ್ತಾಯವಾಗಿದೆ.

ಅಂತರಾಳದಿಂದ.. EDITORIAL

ಕೋಚಿಂಗ್ ಸೆಂಟರ್‌ಗಳಿಗೆ ಕಡಿವಾಣ ನಿಯಮಾವಳಿ ಶೀಘ್ರ ಜಾರಿಯಾಗಲಿ



ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಮಾತ್ರವಲ್ಲದೆ ಅವರ ಬದುಕಿಗೇ ಕೊಳ್ಳಿ ಇಡುವಂತಹ ಅಮಾನವೀಯ ವರ್ತನೆ ತೋರುತ್ತಿವೆ.

ಖಾಸಗಿ ಕೋಚಿಂಗ್ ಸೆಂಟರ್‌ಗಳ ಕಾರ್ಯವೈಖರಿ, ವಿದ್ಯಾರ್ಥಿಗಳ ಮೇಲೆ ಹೇರುತ್ತಿರುವ ಅತಿಯಾದ ಒತ್ತಡಗಳ ಕುರಿತಂತೆ ಸಾರ್ವಜನಿಕ ವಲಯದಿಂದ ಪದೇಪದೆ ದೂರುಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಖಾಸಗಿ ಕೋಚಿಂಗ್ ಸೆಂಟರ್‌ಗಳಿಗೆ ಕಡಿವಾಣ ಹಾಕಲು ಮುಂದಾಗಿದೆ. ಕೋಚಿಂಗ್ ಸೆಂಟರ್‌ಗಳ ಎಲ್ಲಾ ಶೈಕ್ಷಣಿಕ ಅಕ್ರಮಗಳಿಗೆ ಕಡಿವಾಣ ಹಾಕಿ ಅವುಗಳ ಸುವ್ಯವಸ್ಥಿತ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಉನ್ನತ ಶಿಕ್ಷಣ ಇಲಾಖೆ ಕಠಿನ ನಿಯಮಾವಳಿಯ ಕರಡನ್ನು ರೂಪಿಸಿ ಬಿಡುಗಡೆ ಮಾಡಿದೆ.

ಕಳೆದೊಂದು ದಶಕದಿಂದೀಚೆಗೆ ದೇಶಾದ್ಯಂತ ಈ ಖಾಸಗಿ ಕೋಚಿಂಗ್ ಸೆಂಟರ್‌ಗಳ ಹಾವಳಿ ಮಿತಿಮೀರಿದ್ದು ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಮಾತ್ರವಲ್ಲದೆ ಅವರ ಬದುಕಿಗೇ ಕೊಳ್ಳಿ ಇಡುವಂತಹ ಅಮಾನವೀಯ ವರ್ತನೆ ತೋರುತ್ತಿವೆ. ನೀಟ್, ಜೆಇಇ ಸಹಿತ ವಿವಿಧ ಶೈಕ್ಷಣಿಕ ಕೋರ್ಸ್‌ಗಳ ಪ್ರವೇಶಾತಿ ಪರೀಕ್ಷೆ ಸಹಿತ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿ - ಯುವ ಸಮುದಾಯಕ್ಕೆ ಕೋಚಿಂಗ್ ನೀಡುವ ನೆಪದಲ್ಲಿ ಇನ್ನಿಲ್ಲದ ಒತ್ತಡವನ್ನು ಹೇರುತ್ತಿವೆ. ಕೋಚಿಂಗ್ ಸೆಂಟರ್‌ಗಳ ಒತ್ತಡ ತಾಳಲಾರದೆ ಅದೆಷ್ಟೋ ವಿದ್ಯಾರ್ಥಿಗಳು ಮಾನಸಿಕವಾಗಿ ಜರ್ಝರಿತಗೊಂಡು ಆತ್ಮಹತ್ಯೆಗೆ ಶರಣಾಗುತ್ತಿರುವ ಘಟನೆಗಳು ದೇಶದೆಲ್ಲೆಡೆ ಆಗಾಗ್ಗೆ ನಡೆಯುತ್ತಲೇ ಇವೆ. ಅಷ್ಟು ಮಾತ್ರವಲ್ಲದೆ ಈ ಕೋಚಿಂಗ್ ಸೆಂಟರ್‌ಗಳು ವಿಪರೀತ ಶುಲ್ಕ ವಿಧಿಸುವುದು, ಬಲವಂತದಿಂದ ಶುಲ್ಕ ವಸೂಲಿ, ಕೋಚಿಂಗ್ ನೆಪದಲ್ಲಿ ವಿದ್ಯಾರ್ಥಿಗಳನ್ನು 8, 10 ತಾಸುಗಳ ಕಾಲ ಕೊಠಡಿಯಲ್ಲಿ ಕೂಡಿ ಹಾಕಿ, ಒತ್ತಡ ಹೇರುವುದು, ವಿವಿಧ ಶೈಕ್ಷಣಿಕ ಅಕ್ರಮಗಳಲ್ಲಿ ಶಾಮೀಲಾಗಿರುವುದು ಮತ್ತಿತರ ಎಲ್ಲಾ ತೆರನಾದ ದಬ್ಬಾಳಿಕೆ, ಕಿರುಕುಳ, ಅಕ್ರಮಗಳಿಗೆ ಕಡಿವಾಣ ಹಾಕುವ ಸದುದ್ದೇಶದಿಂದ ಈ ಬಿಗಿ ನಿಯಮಗಳನ್ನು ಇಲಾಖೆ ರೂಪಿಸಿದೆ. ಇನ್ನು ಎಲ್ಲಾ ತೆರನಾದ ಕೋಚಿಂಗ್ ಸೆಂಟರ್‌ಗಳ ನೋಂದಣಿಯನ್ನು ಕಡ್ಡಾಯಗೊಳಿಸಲು ಹಾಗೂ ನಿಯಮಾವಳಿಗಳನ್ನು ಉಲ್ಲಂಘಿಸುವ ಸಂಸ್ಥೆಗಳಿಗೆ ಗರಿಷ್ಠ 5 ಲಕ್ಷ ರೂ.ಗಳವರೆಗೆ ದಂಡ ವಿಧಿಸುವ ಇಲ್ಲವೇ ನೋಂದಣಿಯನ್ನು ರದ್ದುಗೊಳಿಸುವ ಕಠಿನ ನಿಯಮಗಳನ್ನು ಈ ಕರಡು ನಿಯಮಾವಳಿ ಒಳಗೊಂಡಿದೆ. ಈ ನಿಯಮಾವಳಿಯ ಜಾರಿಗೂ ಮೊದಲಿನ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಆದಷ್ಟು ಶೀಘ್ರವೇ ಜಾರಿಗೆ ತರಬೇಕು. ಕೋಚಿಂಗ್ ಸೆಂಟರ್‌ಗಳ ವ್ಯವಸ್ಥಿತ ಕಾರ್ಯನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಮತ್ತು ಮಾನಸಿಕ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಇಂದಿನ ಸ್ಪರ್ಧಾತ್ಮಕ ಮತ್ತು ಅಂಕಾಧಾರಿತ ಶಿಕ್ಷಣ ವ್ಯವಸ್ಥೆಯಲ್ಲಿ ಪೈಪೋಟಿ ಹೆಚ್ಚುತ್ತಿರುವಂತೆಯೇ ಅಣಬೆಗಳಂತೆ ತಲೆ ಎತ್ತುತ್ತಿರುವ ಖಾಸಗಿ ಕೋಚಿಂಗ್ ಸೆಂಟರ್‌ಗಳ ಮೇಲೆ ನಿಯಂತ್ರಣ ಹೊಂದಲು ಸರಕಾರ ತನ್ನ ಉದ್ದೇಶಿತ ನಿಯಮಾವಳಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಅಗತ್ಯವಿದೆ.

5 ವರ್ಷದ ಕೆಳಗಿನ ಅಥವಾ ಎಸೆಸೆಲ್ಸಿ ಪೂರ್ಣಗೊಳಿಸದ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳಬಾರದು ಎಂದು ಕೋಚಿಂಗ್. ಸೆಂಟರ್‌ಪ್ರವೇಶಕ್ಕೆ ವಯೋ ನಿರ್ಬಂಧ ವಿಧಿಸಲಾಗಿದೆ. ಮಕ್ಕಳ ಮಾನಸಿಕ ಆರೋಗ್ಯದ ದೃಷ್ಟಿಯಿಂದ ಕೋಚಿಂಗ್ ತರಗತಿಗಳ ಅವಧಿ ಗರಿಷ್ಠ 5 ತಾಸುಗಳನ್ನು ಮೀರಬಾರದು ಹಾಗೂ ಕಾಲೇಜು ತರಗತಿ ಅವಧಿಯಲ್ಲಿ ತರಬೇತಿಯನ್ನು ನೀಡದಿರುವುದು, ಕೋಚಿಂಗ್ ಸೆಂಟರ್‌ಗಳಲ್ಲಿ ಮಾನಸಿಕ ಆರೋಗ್ಯ ಸಲಹೆಗಾರರ ನೇಮಕವನ್ನು ಕಡ್ಡಾಯ, ಪೂರ್ಣ ಕೋಚಿಂಗ್ ಶುಲ್ಕವನ್ನು ಏಕಕಾಲದಲ್ಲಿ ವಸೂಲು ಮಾಡುವ ಬದಲಾಗಿ 4 ಕಂತುಗಳಲ್ಲಿ ವಸೂಲು ಮಾಡುವುದು, ಒಂದು ವೇಳೆ ವಿದ್ಯಾರ್ಥಿ ಕೋಚಿಂಗ್ ಪೂರ್ಣಗೊಳ್ಳುವ ಮುನ್ನವೇ ಸಂಸ್ಥೆಯನ್ನು ತೊರೆದರೆ ವಾರ್ಷಿಕ ಶುಲ್ಕವನ್ನು ಪೂರ್ಣವಾಗಿ ಭರಿಸಲು 10 ದಿನಗಳ ಕಾಲಾವಕಾಶ ನೀಡುವ ಪ್ರಸ್ತಾವಗಳನ್ನು ಇದು ಒಳಗೊಂಡಿದೆ.



ಪರೀಕ್ಷಾ ಸಂಭ್ರಮ


ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

25

ಅತಿಯಾಗಿ ಬೆವರುವುದನ್ನು ತಡೆಯುವ ಕಲೆ

ಮನಸ್ಸಿನ ಆತಂಕವೇ ಬೆವರಿಗೆ ಮೂಲ. ಆದ್ದರಿಂದ ಉಸಿರಾಟದ ಮೇಲೆ ಗಮನ ಕೊಡಿ. ಮೂಗಿನಿಂದ ನಿಧಾನವಾಗಿ ಉಸಿರು ತೆಗೆದುಕೊಂಡು ಬಾಯಿಂದ ಬಿಡಿ. ನೀರು ಕಡಿಮೆ ಕುಡಿದರೂ ಬೆವರು ಹೆಚ್ಚಾಗುತ್ತದೆ, ಹಾಗಾಗಿ ಸ್ವಲ್ಪ ಸ್ವಲ್ಪ ನೀರು ಕುಡಿಯಿರಿ. ಪರೀಕ್ಷೆಗಿಂತ ಒಂದು ಗಂಟೆ ಮೊದಲು ಚಹಾ, ಕಾಫಿ, ಖಾರದ ತಿಂಡಿ ಬೇಡ, ಅವು ದೇಹದ ಬಿಸಿಯನ್ನು ಹೆಚ್ಚಿಸುತ್ತವೆ.

ಪರೀಕ್ಷಾ ಹಾಲ್ ಒಳಗೆ ಕಾಲಿಡುತ್ತಿದ್ದಂತೆ ಹಲವರ ಕೈ ಬೆವರುತ್ತದೆ, ಹಣೆಯಿಂದ ಬೆವರು ಇಳಿಯುತ್ತದೆ, ಬೆನ್ನು ತಣ್ಣಗಾಗುತ್ತದೆ. ಪೆನ್ನು ಹಿಡಿದರೂ ಕೈ ಜಾರಿದಂತಾಗುತ್ತದೆ. ಎಲ್ಲರೂ ನನ್ನನ್ನೇ ನೋಡುತ್ತಿದ್ದಾರೇ ಎಂಬ ಭಯ ಇನ್ನಷ್ಟು ಬೆವರು ಬರಿಸುತ್ತದೆ. ಇದು ನಿಮ್ಮ ತಪ್ಪಲ್ಲ, ಆತಂಕ ಬಂದಾಗ ದೇಹ ತಣ್ಣಗಾಗಲು ಬೆವರು ಬಿಡುವುದು ಸಹಜ ಪ್ರಕ್ರಿಯೆ.



ಬೆವರು ಹೆಚ್ಚಾದರೆ ಬರವಣಿಗೆಗೆ ತೊಂದರೆಯಾಗುತ್ತದೆ, ಉತ್ತರ ಪತ್ರಿಕೆ ಒದ್ದೆಯಾಗುತ್ತದೆ, ಗಮನ ಚದುರುತ್ತದೆ. ಇದನ್ನು ಮೊದಲೇ ನಿಭಾಯಿಸಲು ಕಲಿಯಬೇಕು. ಪರೀಕ್ಷೆಯ ದಿನ ತೆಳುವಾದ ಹತ್ತಿ ಬಟ್ಟೆ ಧರಿಸಿ, ಬಿಗಿಯಾದ ಬಟ್ಟೆ ಬೇಡ. ಅಂಗೈಗೆ ಸ್ವಲ್ಪ ಟಾಲ್ಕಂ ಪೌಡರ್ ಹಚ್ಚಿಕೊಳ್ಳಿ. ಜೊತೆಯಲ್ಲಿ ಒಂದು ಚಿಕ್ಕ ಕರವಸ್ತ್ರ ಇಟ್ಟುಕೊಳ್ಳಿ. ಅರ್ಧ ಗಂಟೆಗೊಮ್ಮೆ ಮುಖ ಮತ್ತು ಕೈಯನ್ನು ನಿಧಾನವಾಗಿ ಒರೆಸಿಕೊಳ್ಳಿ. ನೆನಪಿಡಿ,ಬೆವರುವುದು ಸಹಜ. ಅದನ್ನು ಬಲವಂತದಿಂದ ತಡೆಯುವುದಕ್ಕಿಂತ ನಿಭಾಯಿಸುವುದನ್ನು ಕಲಿಯಬೇಕು.

ಮನಸ್ಸು ಶಾಂತವಾದರೆ ದೇಹವೂ ಶಾಂತವಾಗುತ್ತದೆ. ಸಣ್ಣ ತಯಾರಿಯಿಂದಲೇ ದೊಡ್ಡ ಸಮಸ್ಯೆಯನ್ನು ಮೆಟ್ಟಿನಿಲ್ಲಬಹುದು. ಒಣಗಿದ ಕೈಯಿಂದ ಬರೆದ ಅಕ್ಷರವೇ ಹೆಚ್ಚು ಸ್ಪಷ್ಟವಾಗಿ ಮೂಡುತ್ತದೆ.

ಹಬ್ಬದಲ್ಲಿ ಆಹಾರ ಕ್ರಮ, ಜೀವನಶೈಲಿಯಿಂದ ಹೃದಯದ ಆರೋಗ್ಯದ ಮೇಲೆ ಪರಿಣಾಮವಾಗುತ್ತದೆಯೇ?: ಈ ಲಕ್ಷಣಗಳನ್ನು ನಿರ್ಲಕ್ಷಿಸಬೇಡಿ

ಹಬ್ಬದ ಸಮಯ ಎಂದರೆ ಕುಟುಂಬದೊಂದಿಗೆ ಸೇರುವುದು, ಹೊರಗೆ ಹೋಗುವುದು ಹಾಗೂ ತಮಗೆ ಇಷ್ಟವಾದ ಖಾದ್ಯಗಳನ್ನು ಸವಿಯುವ ಸಮಯವಾಗಿದೆ. ಈ ಅವಧಿಯಲ್ಲಿ ನಿಮ್ಮ ಆಹಾರ ಕ್ರಮ ಹಾಗೂ ದೈನಂದಿನ ದಿನಚರಿಯಲ್ಲಿ ಉಂಟಾಗುವ ಬದಲಾವಣೆಗಳು ನಿಮ್ಮ ಹೃದಯದ ಆರೋಗ್ಯದ ಮೇಲೆ ತುಂಬಾ ಪರಿಣಾಮ ಬೀರಬಹುದು. ಕರಿದ ತಿಂಡಿಗಳು, ಸಿಹಿತಿಂಡಿಗಳು ಹಾಗೂ ಜಂಕ್ ಫುಡ್‌ಗಳನ್ನು ಅತಿಯಾಗಿ ಸೇವಿಸುವುದರಿಂದ ರಕ್ತದೊತ್ತಡ, ರಕ್ತದಲ್ಲಿನ ಸಕ್ಕರೆ ಮಟ್ಟ ಹಾಗೂ ಕೊಲೆಸ್ಟ್ರಾಲ್ ಮಟ್ಟದ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ಇವುಗಳಲ್ಲಿ ಉಪ್ಪು, ಸಕ್ಕರೆ ಮತ್ತು ಅನಾರೋಗ್ಯಕರ ಕೊಬ್ಬಿನಂಶ ಹೆಚ್ಚಾಗಿರುತ್ತದೆ. ಇಂತಹ ಭಾರವಾದ ಹಾಗೂ ಹೆಚ್ಚು ಕ್ಯಾಲೋರಿ ಇರುವ ಆಹಾರಗಳನ್ನು ಸೇವನೆ ಮಾಡುವುದರಿಂದ ಹೃದಯದ ಮೇಲಿನ ಕೆಲಸದ ಹೊರೆಯನ್ನು ಹೆಚ್ಚಿಸಬಹುದು. ವಿಶೇಷವಾಗಿ ಈಗಾಗಲೇ ಬೇರೆ ಆರೋಗ್ಯ ಸಮಸ್ಯೆಗಳನ್ನು ಹೊಂದಿರುವವರ ಮೇಲೆ ಹೆಚ್ಚು ಪರಿಣಾಮ ಬೀರಬಹುದು. ಆಕಾಶ್ ಹೆಲ್ತ್‌ಕೇರ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾರ್ಡಿಯಾಲಜಿ ವಿಭಾಗದ ನಿರ್ದೇಶಕ, ಯುನಿಟ್ ಮುಖ್ಯಸ್ಥ ಡಾ.ಅಜಯ್ ದುವಾ ಮಾತನಾಡಿ, ಸಾಂದರ್ಭಿಕವಾಗಿ ಒಮ್ಮೆ ಹೆಚ್ಚು ತಿನ್ನುವುದೇ ಮುಖ್ಯ ಸಮಸ್ಯೆಯಲ್ಲ. ಇದರ ಬದಲಾಗಿ ಎಷ್ಟು ಬಾರಿ ಸಂಭವಿಸುತ್ತದೆ ಹಾಗೂ ಇಂತಹ ಅನಾರೋಗ್ಯಕರ ಅಭ್ಯಾಸಗಳು ಎಷ್ಟು ಕಾಲ ಮುಂದುವರಿಯುತ್ತವೆ ಎಂಬುದು ಮುಖ್ಯವಾಗುತ್ತದೆ.

ಹಬ್ಬದ ಆಚರಣೆಗಾಗಿ ತಡರಾತ್ರಿಯವರೆಗೂ ಎಚ್ಚರವಾಗಿರುವುದು, ಸಾಕಷ್ಟು ನಿದ್ದೆ ಮಾಡದಿರುವುದು, ಒತ್ತಡಕ್ಕೆ ಒಳಗಾಗುವುದು ಹಾಗೂ ದೈಹಿಕ ಚಟುವಟಿಕೆಯ ಕೊರತೆ ಇವೆಲ್ಲವೂ ದೇಹದ ಸಹಜ ಕಾರ್ಯನಿರ್ವಹಣೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು.

ಸಾಕಷ್ಟು ನೀರು ಕುಡಿಯದೇ ಇರುವುದು, ವಿಶ್ರಾಂತಿ ಪಡೆಯದೆ ಗಂಟೆಗಟ್ಟಲೆ ಶಾಪಿಂಗ್ ಮಾಡುವುದು, ಪ್ರಯಾಣಿಸುವುದು ನಿರ್ಜಲೀಕರಣ, ಆಯಾಸಕ್ಕೆ ಕಾರಣವಾಗಬಹುದು. ಇವೆರಡೂ ಹೃದಯದ ಮೇಲೆ ನೇರ ಹಾಗೂ ಗಂಭೀರ ಪರಿಣಾಮ ಬೀರುತ್ತವೆ. ಹಬ್ಬದ ಸಮಯದಲ್ಲಿ ನೀವು ಏನು ತಿನ್ನಬೇಕು ಅಥವಾ ಎಷ್ಟು ತಿನ್ನಬೇಕು ಎಂಬುದಕ್ಕೆ ಯಾವುದೇ ನಿಗದಿತ ಮಿತಿಯಿಲ್ಲ, ಇದು ಅಂತಿಮವಾಗಿ ನೀವು ಸೇವಿಸುವ ಪ್ರಮಾಣ, ನಿಮ್ಮ ಒಟ್ಟಾರೆ ಆಹಾರ ಪದ್ಧತಿ, ಪ್ರಸ್ತುತ ಆರೋಗ್ಯ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಅತ್ಯುತ್ತಮ ವಿಧಾನವೆಂದರೆ, ನಿಮಗೆ ಇಷ್ಟವಾದ ಖಾದ್ಯಗಳನ್ನು ಮಿತವಾಗಿ ಸವಿಯುವುದು, ಹೊಟ್ಟೆ ತುಂಬಿದ ತಕ್ಷಣ ತಿನ್ನುವುದನ್ನು ನಿಲ್ಲಿಸುವುದು, ಭಾರವಾದ ಊಟದ ಜೊತೆಗೆ ತರಕಾರಿಗಳು, ಹಣ್ಣುಗಳು, ಇತರ ಪೌಷ್ಟಿಕಾಂಶಯುಕ್ತ ಆಹಾರಗಳನ್ನು ಸೇರಿಸಿಕೊಳ್ಳುವ ಮೂಲಕ ಸಮತೋಲನವನ್ನು ಕಾಪಾಡಿಕೊಳ್ಳುವುದು. ಸಾಕಷ್ಟು ನೀರು ಕುಡಿಯಿರಿ, 6 ರಿಂದ 7 ಗಂಟೆಗಳ ನಿದ್ರೆ ಪಡೆಯುವುದನ್ನು ಖಚಿತಪಡಿಸಿಕೊಳ್ಳಿ, ನಿಮ್ಮ ದೈನಂದಿನ ದಿನಚರಿಯಲ್ಲಿ ನಿಯಮಿತ ದೈಹಿಕ ಚಟುವಟಿಕೆಯನ್ನು ಅಳವಡಿಸಿಕೊಳ್ಳಿ. ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ಹೈಬಿಪಿ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳನ್ನು ಹೊಂದಿರುವ ವ್ಯಕ್ತಿಗಳು ಈ ಅವಧಿಯಲ್ಲಿ ವಿಶೇಷ ಎಚ್ಚರಿಕೆ ವಹಿಸಬೇಕು.

ಅವರು ತಮಗೆ ಸೂಚಿಸಲಾದ ಔಷಧಗಳನ್ನು ನಿಯಮಿತವಾಗಿ ತೆಗೆದುಕೊಳ್ಳುವುದನ್ನು ಮುಂದುವರಿಸಬೇಕು. ತಮ್ಮ ಆರೋಗ್ಯದ ಮೇಲೆ ನಿಗಾ ಇಡಲು ವೈದ್ಯರ ಸಲಹೆಗಳನ್ನು ಪಾಲಿಸಬೇಕು.

ಎದೆ ನೋವು, ಉಸಿರಾಟದಲ್ಲಿ ಅಸಾಮಾನ್ಯ ತೊಂದರೆ, ಮೈಯಿಂದ ತಣ್ಣನೆಯ ಬೆವರು ಬರುವುದು ಇದ್ದಕ್ಕಿದ್ದಂತೆ ತಲೆ ಸುತ್ತುವಂತಹ ಕೆಲವು ಎಚ್ಚರಿಕೆಯ ಲಕ್ಷಣಗಳನ್ನು ಗುರುತಿಸುವುದು ಬಹಳ ಮುಖ್ಯವಾಗುತ್ತದೆ.

ಈ ಲಕ್ಷಣಗಳನ್ನು ಕೇವಲ ಅತಿಯಾದ ಊಟದಿಂದ ಉಂಟಾದ ಅಜೀರ್ಣ ಹಾಗೂ ದಿನದ ಚಟುವಟಿಕೆಗಳಿಂದಾದ ಆಯಾಸ ಎಂದು ಭಾವಿಸಿ ನಿರ್ಲಕ್ಷಿಸಬಾರದು. ನೀವು ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು.

ಹಬ್ಬದ ಸಂಭ್ರಮವನ್ನು ಆನಂದಿಸಲು ಹೃದಯದ ಆರೋಗ್ಯವನ್ನು ಪಣಕ್ಕಿಡಬೇಕಾದ ಅಗತ್ಯವಿಲ್ಲ. ಆಹಾರದ ಆಯ್ಕೆಗಳಲ್ಲಿ ಜಾಣತನ ತೋರುವ ಮೂಲಕ ಸಮತೋಲಿತ ದಿನಚರಿಯನ್ನು ಅಳವಡಿಸಿಕೊಂಡು ಹಬ್ಬವನ್ನು ಆನಂದಿಸಬಹುದು.



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

''ಭಾಷೆ ಕೇವಲ ಸಂವಹನದ ಸಾಧನವಲ್ಲ; ಅದು ಒಂದು ಜನಾಂಗದ ಅಸ್ಮಿತೆ, ಸಂಸ್ಕೃತಿ, ಪರಂಪರೆ ಮತ್ತು ಸ್ವಾಭಿಮಾನದ ಪ್ರತೀಕ.'' ಕನ್ನಡ ನಾಡು, ನುಡಿ, ನೆಲ, ಜಲ ಮತ್ತು ಸಂಸ್ಕೃತಿಯ ವೈಭವವನ್ನು ಸ್ಮರಿಸುವ ಪವಿತ್ರ ದಿನವೇ ನವೆಂಬರ್ 1ರ ಕನ್ನಡ ರಾಜ್ಯೋತ್ಸವ. ಕನ್ನಡಿಗರ ಪಾಲಿಗೆ ಇದು ಕೇವಲ ಸಂಭ್ರಮಾಚರಣೆಯ ದಿನವಲ್ಲ; ನಾಡಿನ ಇತಿಹಾಸ, ಭಾಷಾ ಹೋರಾಟ, ಕನ್ನಡಿಗರ ಏಕತೆ ಹಾಗೂ ಸ್ವಾಭಿಮಾನದ ಸಂಕೇತವಾಗಿದೆ. ಕರ್ನಾಟಕದ ಮೂಲೆಮೂಲೆಗಳಲ್ಲಿ ಕೆಂಪು-ಹಳದಿ ಬಾವುಟಗಳು ಹಾರಾಡುವಾಗ ಪ್ರತಿಯೊಬ್ಬ ಕನ್ನಡಿಗನ ಮನದಲ್ಲೂ ನಾಡು-ನುಡಿಯ ಅಭಿಮಾನ ಚಿಗುರೊಡೆಯುತ್ತದೆ.

ಕನ್ನಡದ ಕಂಪು, ಕನ್ನಡಿಗರ ಹೆಮ್ಮೆ: ಏಕತೆಯ ಸಂಕೇತ ಕರ್ನಾಟಕ ರಾಜ್ಯೋತ್ಸವ!

ಕನ್ನಡದ ಶ್ರೀಮಂತ ಸಾಹಿತ್ಯ ಪರಂಪರೆ : ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪಂಪ, ರನ್ನ, ಪೊನ್ನ, ಬಸವಣ್ಣ, ಅಕ್ಕಮಹಾದೇವಿ, ಸರ್ವಜ್ಞ, ಕನಕದಾಸರು, ಕುವೆಂಪು, ಬೇಂದ್ರೆ, ಮಾಸ್ತಿ, ಶಿವರಾಮ ಕಾರಂತ, ಗೋಪಾಲಕೃಷ್ಣ ಅಡಿಗ ಸೇರಿದಂತೆ ಅನೇಕ ಮಹಾನ್ ಸಾಹಿತಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.ಕನ್ನಡ ಭಾಷೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿರುವುದು ನಮ್ಮ ಸಾಹಿತ್ಯ ಲೋಕದ ಹೆಮ್ಮೆಯ ಸಾಧನೆ. ವಚನ ಸಾಹಿತ್ಯ, ದಾಸ ಸಾಹಿತ್ಯ, ಜನಪದ ಸಾಹಿತ್ಯ, ಕಾವ್ಯ, ಕಾದಂಬರಿ, ನಾಟಕ ಮತ್ತು ವಿಮರ್ಶಾ ಕ್ಷೇತ್ರಗಳಲ್ಲಿ ಕನ್ನಡ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿದೆ. ಕನ್ನಡ ಕೇವಲ ಒಂದು ಭಾಷೆಯಲ್ಲ, ಅದು ಬದುಕಿನ ಭಾವನೆಗಳನ್ನು ಅಭಿವ್ಯಕ್ತಿಸುವ ಜೀವಂತ ಸಂಸ್ಕೃತಿಯಾಗಿದೆ.

ವೈವಿಧ್ಯತೆಯಲ್ಲಿ ಏಕತೆಯ ಕರ್ನಾಟಕ : ಕರ್ನಾಟಕವು ಪ್ರಕೃತಿ ಸೌಂದರ್ಯ, ಐತಿಹಾಸಿಕ ಸ್ಮಾರಕಗಳು, ಧಾರ್ಮಿಕ ಕ್ಷೇತ್ರಗಳು ಮತ್ತು ಸಾಂಸ್ಕೃತಿಕ ಪರಂಪರೆಯ ಅಪೂರ್ವ ಸಂಗಮವಾಗಿದೆ. ಹಂಪಿಯ ವಿಜಯನಗರ ಸಾಮ್ರಾಜ್ಯದ ಗತವೈಭವ, ಬೇಲೂರು-ಹಳೇಬೀಡಿನ ಹೊಯ್ಸಳರ ಶಿಲ್ಪಕಲೆ, ಮೈಸೂರಿನ ಅರಮನೆಯ ವೈಭವ, ಕೊಡಗಿನ ಹಸಿರು ಸೌಂದರ್ಯ, ಮಲೆನಾಡಿನ ಮಳೆಗಾಲದ ರಮಣೀಯತೆ, ಕರಾವಳಿಯ ಸಂಸ್ಕೃತಿ ಹಾಗೂ ಉತ್ತರ ಕರ್ನಾಟಕದ ಐತಿಹಾಸಿಕ ಪರಂಪರೆ ನಾಡಿನ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತವೆ.ಕೃಷಿ, ಶಿಕ್ಷಣ, ಕೈಗಾರಿಕೆ, ವಿಜ್ಞಾನ, ತಂತ್ರಜ್ಞಾನ, ಕಲೆ, ಕ್ರೀಡೆ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ಕರ್ನಾಟಕ ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ಬೆಂಗಳೂರಿನ ಜಾಗತಿಕ ತಂತ್ರಜ್ಞಾನ ಖ್ಯಾತಿಯ ಜೊತೆಗೆ ರಾಜ್ಯದ ಗ್ರಾಮೀಣ ಭಾಗಗಳ ಕೃಷಿ ಮತ್ತು ಸಣ್ಣ ಉದ್ಯಮಗಳೂ ಕರ್ನಾಟಕದ ಆರ್ಥಿಕತೆಯ ಬೆನ್ನೆಲುಬಾಗಿವೆ. ಕನ್ನಡ ಉಳಿಸಿ, **ಬೆಳೆಸುವುದು ನಮ್ಮೆಲ್ಲರ ಕರ್ತವ್ಯ :** ಇಂದಿನ ಆಧುನಿಕ ಜಗತ್ತಿನಲ್ಲಿ ಇಂಗ್ಲಿಷ್ ಸೇರಿದಂತೆ ವಿವಿಧ ಭಾಷೆಗಳ ಕಲಿಕೆ ಅನಿವಾರ್ಯವಾಗಿರಬಹುದು. ಆದರೆ ಅದಕ್ಕಾಗಿ ನಮ್ಮ ಮಾತೃಭಾಷೆಯನ್ನು ಕಡೆಗಣಿಸಬಾರದು. ಅನ್ಯ ಭಾಷೆಗಳನ್ನು ಗೌರವಿಸುವುದರ ಜೊತೆಗೆ ಕನ್ನಡವನ್ನು ಪ್ರೀತಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಮನೆಯಲ್ಲಿ, ಶಾಲೆಯಲ್ಲಿ, ಕಚೇರಿಯಲ್ಲಿ, ವ್ಯಾಪಾರ ವಹಿವಾಟಿನಲ್ಲಿ ಹಾಗೂ ಸಾರ್ವಜನಿಕ ಜೀವನದಲ್ಲಿ ಕನ್ನಡಕ್ಕೆ ಆದ್ಯತೆ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು.

ಮಕ್ಕಳಿಗೆ ಕನ್ನಡದ ಸಾಹಿತ್ಯ, ಇತಿಹಾಸ, ಸಂಸ್ಕೃತಿ ಮತ್ತು ಮಹನೀಯರ ಜೀವನದ ಪರಿಚಯ ಮಾಡಿಸಬೇಕು. ಕನ್ನಡ ಪುಸ್ತಕಗಳನ್ನು ಓದುವ ಅಭ್ಯಾಸ ಬೆಳೆಸಬೇಕು. ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸಮಾಜ ಮತ್ತು ಸರ್ಕಾರ ಒಟ್ಟಾಗಿ ಕಾರ್ಯನಿರ್ವಹಿಸಬೇಕು. ಸಾಮಾಜಿಕ ಜಾಲತಾಣಗಳಲ್ಲಿಯೂ ಕನ್ನಡದ ಬಳಕೆ ಹೆಚ್ಚಿಸುವ ಮೂಲಕ ತಂತ್ರಜ್ಞಾನದ ಯುಗದಲ್ಲಿ ಕನ್ನಡದ ಕಂಪನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬೇಕು.

ರಾಜ್ಯೋತ್ಸವದ ಸಂಭ್ರಮದೊಂದಿಗೆ ಸಂಕಲ್ಪವೂ ಇರಲಿ : ರಾಜ್ಯೋತ್ಸವದ ದಿನದಂದು ಕನ್ನಡ ಬಾವುಟ ಹಾರಿಸಿ, ಸಿಹಿ ಹಂಚಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು ಸಂಭ್ರಮದ ಭಾಗವಾಗಿದೆ. ಆದರೆ ನಮ್ಮ ಕನ್ನಡಾಭಿಮಾನ ಕೇವಲ ನವೆಂಬರ್ ತಿಂಗಳಿಗೆ ಸೀಮಿತವಾಗಬಾರದು. ವರ್ಷವಿಡೀ ಕನ್ನಡವನ್ನು ಮಾತನಾಡುವ, ಓದುವ, ಬರೆಯುವ ಮತ್ತು ಬೆಳೆಸುವ ಕಾರ್ಯದಲ್ಲಿ ಪ್ರತಿಯೊಬ್ಬರೂ ತೊಡಗಿಸಿಕೊಳ್ಳಬೇಕು.

ಜಾತಿ, ಧರ್ಮ, ಪ್ರಾಂತ್ಯ ಮತ್ತು ಭಾಷೆಯ ಭೇದಗಳನ್ನು ಮರೆತು ಕನ್ನಡಿಗರೆಲ್ಲರೂ ಒಂದಾಗಿ ನಾಡಿನ ಅಭಿವೃದ್ಧಿಗೆ ಶ್ರಮಿಸಬೇಕು.


ಕನ್ನಡಿಗರ ಹಕ್ಕುಗಳ ರಕ್ಷಣೆಯ ಜೊತೆಗೆ ನಾಡಿನ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ಸಂರಕ್ಷಣೆಗೆ ಬದ್ಧರಾಗಬೇಕು.

ಕರ್ನಾಟಕ ರಾಜ್ಯೋತ್ಸವವು ನಮ್ಮ ಗತವೈಭವವನ್ನು ನೆನಪಿಸುವುದರ ಜೊತೆಗೆ ಭವಿಷ್ಯದ ಹೊಣೆಗಾರಿಕೆಯನ್ನು ತಿಳಿಸುವ ದಿನವೂ ಹೌದು. ಕನ್ನಡದ ಅಸ್ಮಿತೆಯನ್ನು ಉಳಿಸುವುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ. ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ.

ಕನ್ನಡ ನಮ್ಮ ಉಸಿರಾಗಲಿ, ಕರ್ನಾಟಕ ನಮ್ಮ ಹೆಮ್ಮೆಯಾಗಲಿ, ಕನ್ನಡಿಗರ ಏಕತೆ ನಮ್ಮ ಶಕ್ತಿಯಾಗಲಿ. ನಾಡು-ನುಡಿಯ ಅಭಿಮಾನ ಪ್ರತಿಯೊಬ್ಬರ ಹೃದಯದಲ್ಲಿ ಸದಾ ಜೀವಂತವಾಗಿರಲಿ.


ಸರ್ವರಿಗೂ 70ನೇ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು! ಜೈ ಕರ್ನಾಟಕ ಮಾತೆ! ಜೈ ಕನ್ನಡಾಂಬೆ!

ಏಕೀಕರಣದ ಕನಸಿಗೆ ಸಾಕಾರ ರೂಪ



ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ ಮಾತನಾಡುವ ಜನರು ಮೈಸೂರು ಸಂಸ್ಥಾನ, ಬಾಂಬೆ ಪ್ರಾಂತ್ಯ, ಮದ್ರಾಸ್ ಪ್ರಾಂತ್ಯ, ಹೈದರಾಬಾದ್ ನಿಜಾಮರ ಆಡಳಿತ ಹಾಗೂ ಕೊಡಗು ಸೇರಿದಂತೆ ವಿವಿಧ ಆಡಳಿತ ಪ್ರದೇಶಗಳಲ್ಲಿ ಹಂಚಿಹೋಗಿದ್ದರು. ಭಾಷೆ ಒಂದೇ ಆಗಿದ್ದರೂ ಆಡಳಿತ ವ್ಯವಸ್ಥೆಗಳು ಬೇರೆಬೇರೆಯಾಗಿ ದ್ದವು. ಕನ್ನಡಿಗರನ್ನು ಒಂದೇ ಆಡಳಿತ ಘಟಕದಡಿ ತರಬೇಕೆಂಬ ಆಶಯದಿಂದ ಅನೇಕ ಹೋರಾಟಗಾರರು, ಸಾಹಿತಿಗಳು, ಚಿಂತಕರು ಹಾಗೂ ಕನ್ನಡಪರ ಸಂಘಟನೆಗಳು ನಿರಂತರ ಹೋರಾಟ ನಡೆಸಿದವು.ಆಲೂರು ವೆಂಕಟರಾಯರು ಸೇರಿದಂತೆ ಅನೇಕ ಮಹನೀಯರ ಪರಿಶ್ರಮ ಮತ್ತು ಕನ್ನಡಿಗರ ಒಗ್ಗಟ್ಟಿನ ಫಲವಾಗಿ 1956ರ ನವೆಂಬರ್ 1ರಂದು ಕನ್ನಡ ಮಾತನಾಡುವ ಪ್ರದೇಶಗಳನ್ನು ಒಗ್ಗೂಡಿಸಿ ವಿಶಾಲ ಮೈಸೂರು ರಾಜ್ಯವನ್ನು ರಚಿಸಲಾಯಿತು. ನಂತರ 1973ರ ನವೆಂಬರ್ 1ರಂದು ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರ ಆಡಳಿತಾವಧಿಯಲ್ಲಿ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು. ಈ ಐತಿಹಾಸಿಕ ದಿನವೇ ಇಂದು ಕರ್ನಾಟಕ ರಾಜ್ಯೋತ್ಸವವಾಗಿ ಆಚರಿಸಲ್ಪಡುತ್ತಿದೆ.

ರಾಮಾಯಣ



23. ರಾವಣನೇ ಯುದ್ಧರಂಗಕ್ಕೆ ನಡೆತಂದುದು; ಅವನನ್ನು ಲಕ್ಷ್ಮಣನು ಎದುರಿಸುವು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಕಡುಗಲಿಯ ಬಾಣಹತಿಯಿಂದ ರಣಮಂಡಲದಲ್ಲಿ ಬಹುಜನರು ನೆಲಕ್ಕುರುಳಿರಲು, ರಾವಣನನ್ನು ಎದುರಿಸುವವರಿಲ್ಲದೆ ಕಂಗೆಟ್ಟು ಕಪಿನಾಯಕರು ರಘುವೀರನೆಡೆಗೆ ಓಡಿ ಹೋಗಿ ತಮ್ಮ ಮೇಲಾದ ಆಕ್ರಮಣವನ್ನು ವಿವರಿಸಿದರು. ಆಗ ರಾಘವನು ಕೆಂಡಾಮಂಡಲನಾಗಿ ಕೈಯಲ್ಲಿ ಬಿಲ್ಲುಬಾಣಗಳನ್ನು ಹಿಡಿದು ಹೊರಟ ಅಣ್ಣನನ್ನು ಕಂಡ ಸೌಮಿತ್ರಿಯು ಅವನ ಕಾಲುಗಳಿಗೆರಗಿ, ''ಯುದ್ಧಕ್ಕೆಂದು ಅಸುರಭಟರು ಬಂದಿರುವ ಈ ಭೀಕರ ಸಮಯದಲ್ಲಿ ನೀನೇ ಮೊದಲಿಗೆ ಯುದ್ಧಕ್ಕೆ ಹೋಗುವುದು ಸಲ್ಲದು. ನಮ್ಮ ಸೈನ್ಯಕ್ಕೆ ಧೈರ್ಯ ಹೇಳಿ ದೈತೇಯರನ್ನು ಕೊಲ್ಲುತ್ತೇನೆ, ಅಪ್ಪಣೆ ಕೊಡು'' ಎಂದು ರಿಪುಗಜಸಿಂಹನು ಹೇಳಿದ. ಆಗು ರಘುರಾಮನು ನಗುತ್ತ, ''ನೀನು ಸಂಗರಾಂಗಣಭೀಮನೆಂಬುದು ನಿಜವೇ, ಆದರೆ ನೀನು ಎದುರಿಸುವವನು ತಿಲೋಕವೀರ, ಎಂತೆಂತಹ ಮಹಾವೀರರನ್ನೂ ಸೋಲಿಸಿದ ಮಾಯಾವಿ, ಅವನೇನು ಸಾಮಾನ್ಯ ದಾನವನಲ್ಲ, ಆದ್ದರಿಂದ ನೀನು ಅವನ ದೋಷಗಳನ್ನು ಗಮನಿಸಿ, ನಿನ್ನನ್ನು ಕಾಪಾಡಿಕೊಂಡು ಎಚ್ಚರಿಕೆಯಿಂದ ಯುದ್ಧಮಾಡು'' ಎಂದು ಸೂಚನೆಯಿತ್ತು ತಮ್ಮನನ್ನು ಬೀಳ್ಕೊಟ್ಟ. ರಾಘವನಿಗೆ ಪೊಡಮಟ್ಟ ಲಕ್ಷ್ಮಣನು ಕಾಲಾನಲನಂತೆ ಕುದಿಯುತ್ತ ಬಿಲ್ಲುಬಾಣಗಳನ್ನು ತೆಗೆದುಕೊಂಡು ಹೊರಟ. ಅವನು ಬಂದುದನ್ನು ಕಂಡು ಕಪಿಸೈನ್ಯಕ್ಕೆ ಹೊಸ ಹುರುಪು ಉಂಟಾಯಿತು. ಘುಡಿಘುಡಿಸುತ್ತ ಸಿಡಿಲ ಆರ್ಭಟೆಯಿಂದ ಬರುತ್ತಿರುವ ವೀರನನ್ನು ನಿಟ್ಟಿಸಿ ನೋಡಿದ ದಶಾಸ್ಯನು ಕಡುಕೋಪದಿಂದ ತನ್ನ ಬತ್ತಳಿಕೆಗೆ ಹೊಸ ಬಾಣಗಳನ್ನು ಸೇರಿಸಿಕೊಂಡ. ರಾವಣನ ಶರಜಾಲವು ಬಲಿಮುಖ ಸೈನ್ಯವನ್ನು ಮುಚ್ಚಿಬಿಟ್ಟತು, । ಕಪಿಸೈನಿಕರನ್ನು ಕೊಚ್ಚಿದುವು, ಗಿರಿಗಳನ್ನು ಕೊರೆದುವು. ಅವನ ಶೌರ್ಯೋನ್ನತಿಯನ್ನು : ಅಚ್ಚರಿಯಿಂದ ನೋಡಿದ ಸೌಮಿತ್ರಿಯು ಮಹೋರಗನಂತೆ ಬುಸುಗುಡುತ್ತ ತನ್ನ ತೇರನ್ನೇರಿ । ಬಂದ ಲಕ್ಷ್ಮಣನು ಅಸುರರಾಜನನ್ನು ಕ್ರೂರತರ ನುಡಿಗಳಿಂದ ಮೂದಲಿಸತೊಡಗಿದಬಹಳ ದಿನಗಳಿಂದ ನಾವು ನಿನಗಾಗಿ ಹುಡುಕಾಡಿದೆವು. ಆದರೆ ನೀನು ಇಷ್ಟು ದಿನ ' ಭಯದಿಂದ ಅಡಗಿಕೊಂಡಿದ್ದೆ. ವಿಧಿಯ ಕೃಪೆಯಿಂದ ನಿನ್ನನ್ನು ಈ ಸಮರಾಂಗಣದಲ್ಲಿ ನೋಡುವಂತಾಯಿತು. ಯಕ್ಷರಾಕ್ಷಸರಿಂದ ಸಾವು ಬರದಂತೆ ನೀನೇನೋ ವರವನ್ನು । ಪಡೆದಿರಬಹುದು, ಆದರೆ ನರವಾನರರಿಂದ ನಿನಗೆ ಸಾವು ಸಮನಿಸಬಹುದಲ್ಲನಮ್ಮನ್ನು ಕಂಡ ಬಳಿಕ ನಿನ್ನನ್ನು ಮರಣಭಯವು ಕಾಡತೊಡಗಿದೆ, ಅಲ್ಲವೇ?'' ಎಂದು ಗರ್ಜನೆ ಮಾಡಿದ. ಅದನ್ನು ಕೇಳಿದ ಅಸುರೋತ್ತಮನು, ''ದೇವಾಸುರೋತ್ತಮರನ್ನು ಯುದ್ಧದಲ್ಲಿ ಗೆದ್ದ ನನಗೆ ನೀವು ಯಾವ ಮಹಾ! ಖಳಬುದ್ದಿಯಿಂದ ನೀನು ಕೋಡಗಗಳ ಜೊತೆಗೆ ಬಂದು ಯುದ್ಧಮಾಡಿ ಜಯಿಸುವ ಆಸೆಯಿಂದ ಕೂಡಿದ್ದೀಯೆ. ನಿನ್ನ ಆಸೆಯು ಬಯಲದೊರೆ, ನಿನಗೆಲ್ಲಿ ಸಿಕ್ಕೀತು ಜಯ, ಪ್ರಾಣವುಳಿಸಿಕೊಂಡರೆ ಸಾಕಾಗಿದೆ. ನಿನ್ನ ಹುಚ್ಚುತನವನ್ನು ಬಿಟ್ಟು ವಾಪಸಾಗಿ ಬದುಕಿಕೋ!'' ಎಂದು ಕ್ರೂರವಾಗಿ ಅವಹೇಳನವನ್ನು ಮಾಡಿದ. ಆ ನುಡಿಗಳನ್ನು ಕೇಳಿದ ಸೌಮಿತ್ರಿಯು ನಸುನಗುತ್ತ, ''ರಾಕ್ಷಸಾಧಮನೇ, ನಿನ್ನ ಪ್ರತಾಪವನ್ನು, ಕೀರ್ತಿಯನ್ನು, ರಣೋದ್ಭತಿಯನ್ನು ನಾನು ಬಲ್ಲೆ, ಬಾಯಿಂದ ಹೇಳಿಕೊಂಡರೇನು ಫಲ, ನಿನ್ನ ಶಕ್ತಿಸಾಹಸಗಳನ್ನು ಯುದ್ಧದಲ್ಲಿ ತೋರಿಸು. ಹೊಸಮಸೆದ ಕಣಗಳನ್ನು ಬಿಡುವ ನನ್ನನ್ನೆದುರಿಸಿ ಗೆದ್ದರೆ ಆಗ ನೀನು ವೀರನೆನ್ನಿಸಿಕೊಳ್ಳುವೆ, ಸುರಾಸುರರು ನಿನ್ನನ್ನು ಹೊಗಳುತ್ತಾರೆ'' ಎಂದು ಜರೆದ. ಆ ನಿಷ್ಠುರ ನುಡಿಗಳನ್ನು ಕೇಳಿದ ಖಳಶಿರೋಮಣಿಯು ರೋಷದಿಂದ ಹಲ್ಲುಕಡಿಯುತ್ತ ತನ್ನ ಬಿಲ್ಲಿನ ಕೊಪ್ಪಿಗೆ ಬಾಣವನ್ನು ಹೂಡಿ ಹೆದೆಯನ್ನು ಕಿವಿಯವರೆಗೆ ಎಳೆದು ಬಿಟ್ಟ ಈ ನಡುವೆ, ರಾವಣನ ಬಾಣಗಳು ವನಚರರನ್ನು ವ್ಯಥೆಗೊಳಿಸುತ್ತಿರುವುದನ್ನು ಕಂಡ ಹನುಮಂತನು ಅತಿ ಕೋಪದಿಂದ ಬಂದು ದಾನವನನ್ನು ಲೆಕ್ಕಿಸದೆ ಬಲ್ಮೆಯಿಂದ ಗರ್ಜಿಸುತ್ತ, ''ನಮ್ಮನ್ನು ಹುಲುಕಪಿಗಳೆಂದು ಬಗೆದು ನಮ್ಮೆದುರು ನಿನ್ನ ಬಾಹುಬಲವನ್ನು ತೋರಿಸಿ ಜಯವನ್ನು ಗಳಿಸಿ ಹೋಗೋಣವೆಂದು ಬಂದೆಯಾ, ಮೂಢ! ನನ್ನ ಬಾಹುಬಲವನ್ನು ಎದುರಿಸಿ ಯುದ್ದದಲ್ಲಿ ಗೆದ್ದರೆ ನಿನ್ನನ್ನು ಮೂರುಲೋಕದ ಜನರೂ ಹೊಗಳುತ್ತಾರೆ'' ಎಂದು ಶ್ರೀರಾಮಪುರನಿಲಯನ ನೆಚ್ಚಿನ ಸೇವಕನಾದ ಮರುತ್ತನಯನು ನುಡಿಯಲು, ಅವನ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಅಲಘುಬಲನಾದ ರಕ್ಕಸೇಂದ್ರನು ಬಾಣಗಳ ಮಳೆ ಕರೆಯತೊಡಗಿದ.

ಮುಂದುವರೆಯುವುದು



ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ ಹಾಸನ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

ಕನ್ನಡದ ಕಂಪು

ಕನ್ನಡಕೆ ಕೈಯೆತ್ತು ಗೌರಿ ಶಿಖರದ ಹಾಗೆ
ಕನ್ನಡಕೆ ಕೊರಳೆತ್ತು ಪಾಂಚಜನ್ಯ
ಕನ್ನಡವ ನೆನೆಯುತ್ತ ಕನ್ನಡಾಂಬೆಗೆ ನಮಿಸು
ಕನ್ನಡವೆ ಚೆನ್ನುಡಿಯು ಲಕ್ಷ್ಮಿದೇವಿ.

ಬೇರೆ ಭಾಷೆಗಳಿಗೆ ಹೋಲಿಸಿದರೆ ಕನ್ನಡವೇ ನಮಗೆ ಅಂಟು. ನಮಗೆ ಬಲುವಳಿಯಾಗಿ ನೀಡುತ್ತಿದೆ ಈ ಸಂಸ್ಕೃತದ ಗಂಟು. ಯಾರು ಯಾವಾಗಲೂ ಸಹ ಗೊಂದಲಮಯವಾಗಿ ಗೊಂದಲಕ್ಕೆ ಒಳಗಾಗದೆ. ನಮ್ಮ ಜ್ಞಾನಪೀಠ ಎಂಟು ಎಂಬುದನ್ನು ನೆನೆಯಬೇಕಿದೆ. ಕಳಸ ಹಿಡಿದರೆ ಬಹಳಷ್ಟು ಹತ್ತಿರದ ನಂಟಾಗುತ್ತದೆ. ಅದಕ್ಕೆ ನಮ್ಮ ಕನ್ನಡಿಗರ ಹೊಂದಾಣಿಕೆ ಬೇಕಾಗಿದೆ.

ಈ ಮೇಲಿನ ಮುಕ್ತಕದಂತೆ ನಮ್ಮ ಕನ್ನಡವನ್ನು ನಾವೇ ಉಳಿಸುವ ಕಾರ್ಯ ಮಾಡಬೇಕಿದೆ. ಕನ್ನಡಕ್ಕೆ ಕೈ ಎತ್ತು ಗೌರಿ ಶಿಖರದ ಹಾಗೆ ಕನ್ನಡಕ್ಕೆ ಕೊರಳೆತು ಪಾಂಚಜನ್ಯ ನಮ್ಮ ಕನ್ನಡವನ್ನು ನೆನೆಯುತ್ತಾ ಕನ್ನಡದ ಬಗ್ಗೆ ಕೈ ಮುಗಿದು ನಮಿಸಬೇಕಿದೆ. ಕನ್ನಡವೇ ಚೆನ್ನುಡಿಯು ಎಂದು ದೇವರಿಗೆ ಕೈ ಮುಗಿಯುವುದು ಮುಖ್ಯ. ಪ್ರತಿಯೊಬ್ಬರೂ ಕನ್ನಡವನ್ನು ಉಳಿಸುತ, ಬೆಳೆಸುತ ಕಾರ್ಯವನ್ನು ಮಾಡಬೇಕಿದೆ. ಜನಸಾಮಾನ್ಯರ ಜೀವನದಲ್ಲಿ ಕೆಲಸ ಎಂಬುದು ಬಹಳ ಮುಖ್ಯ. ಇಂತಹ ಕೆಲಸವನ್ನು ಪಡೆಯಬೇಕಾದರೆ ಅನ್ಯ ಭಾಷೆಗಳಲ್ಲಿ ಇಂಗ್ಲಿಷ್ ಭಾಷೆ ಕಡ್ಡಾಯವಾಗಿ ಕಲಿತಿರಬೇಕು. ಇಲ್ಲದಿದ್ದರೆ ಕೆಲಸವೇ ಸಿಗದಿರುವ ಪರಿಸ್ಥಿತಿ ಇದೆ. ನಮ್ಮ ಮಾತೃಭಾಷೆ ಕನ್ನಡವನ್ನು ಪ್ರಾಮುಖ್ಯತೆ ನೀಡದಿರುವುದು ಈ ವಿಷಯದಲ್ಲಿ ನಾವು ನೋಡಬಹುದು. ದಯಮಾಡಿ ಕನ್ನಡಕ್ಕೆ ಪ್ರಾಮುಖ್ಯತೆಯನ್ನು ನೀಡಿ. ನಮ್ಮ ಸರ್ಕಾರ ಕನ್ನಡ ಮಾಧ್ಯಮದಲ್ಲಿ ಓದಿದಂತಹ ಮಕ್ಕಳಿಗೆ ಹಲವಾರು ವ್ಯವಸ್ಥೆಯನ್ನು ಮಾಡುತ್ತಿದೆ. ಅಂತಹದ್ದನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿದೆ. ದಿನನಿತ್ಯ ನಮ್ಮ ಸರ್ಕಾರದ ಕೆಲಸಗಳನ್ನು ಗಮನಿಸಿದರೆ ಸರ್ಕಾರವಂತು ಸವಲತ್ತುಗಳನ್ನು ನೀಡುತ್ತಿದೆ. ಅದನ್ನು ಉಪಯೋಗ ಮಾಡಿಕೊಳ್ಳುವವರು ಕಡಿಮೆ ಇದ್ದಾರೆ. ಜನರ ಜೀವನದಲ್ಲಿ ಭಾಷೆಯು ಒಂದು ಪ್ರಕಾರವೇ. ಅಂತಹ ಭಾಷೆಯನ್ನು ಪ್ರಮುಖವಾಗಿ ಕಾಣಬೇಕಿದೆ. ತಾಯಿನುಡಿಯಾದಂತಹ ಕನ್ನಡವನ್ನು ಗೌರವಿಸಬೇಕು. ಮೊದಲು ನಾವು ಕಲಿಯಬೇಕು. ನಾವು ಇತರರಿಗೆ ಕಲಿಸುವ ಕೆಲಸ ಮಾಡಬೇಕು. ಅದನ್ನು ಬರೆಯುವುದು. ಓದುವುದರಲ್ಲಿ ಪ್ರಮುಖರಾಗಬೇಕಿದೆ. ಹೊರದೇಶದಿಂದ, ಅವರ ರಾಜ್ಯದಿಂದ ಬಂದಂತಹ ಜನಗಳಿಗೆ ಕನ್ನಡ ಕಲಿಯುವುದು ಕಷ್ಟವೇ ಎನಿಸುತ್ತಿಲ್ಲ, ಅಂತಹದರಲ್ಲಿ ನಮ್ಮ ತಾಯಿನುಡಿಯಾದಂತಹ ಕನ್ನಡವನ್ನು ನಮ್ಮವರೇ ಯಾಕೆ ಜರಿಯಬೇಕು . ಪ್ರತಿಯೊಬ್ಬರ ಮನಸ್ಸಿನಿಂದ ಕನ್ನಡಾಂಬೆಯ ಸೇವೆಯನ್ನು ಮಾಡಬೇಕೆಂಬ ಆಸೆಯನ್ನು ಹೊಂದಿದ್ದು. ಜೀವಿಸಿದರೆ ಪ್ರತಿ ಮನೆ ಮನೆಗಳಲ್ಲೂ ಕನ್ನಡಾಂಬೆಯ ಪ್ರಾಮುಖ್ಯತೆಯನ್ನು ಅರಿತರೆ . ಎಲ್ಲರಿಗೂ ಕನ್ನಡದ ಅರಿವನ್ನು ಮೂಡಿಸುತ್ತ. ಕನ್ನಡದ ಉಳಿವಿಗಾಗಿ ಕಾರ್ಯಗಳನ್ನು ಮಾಡಿದರೆ. ಪ್ರಸ್ತುತ ದಿನಮಾನಗಳಲ್ಲಿ ಕನ್ನಡವನ್ನು ಉಳಿಸಬಹುದು. ಇಂದು ಕನ್ನಡದ ಪರವಾಗಿ ಎಷ್ಟು ಸಂಘ-ಸಂಸ್ಥೆಗಳು ಕಾರ್ಯವನ್ನು ನಿರ್ವಹಿಸುತ್ತಿವೆ. ಕನ್ನಡ ರಾಜ್ಯೋತ್ಸವದಂದು ಲೆಕ್ಕವಿಲ್ಲದಷ್ಟು ಕಾರ್ಯಕ್ರಮಗಳನ್ನು ಆಯೋಜಿಸಿಕೊಳ್ಳುತ್ತಿದ್ದಾರೆ. ಅದು ಅಂದಿಗೆ ಸೀಮಿತವಾಗದೆ. ನಮ್ಮ ಮುಂದಿನ ಪೀಳಿಗೆಯ ಮಕ್ಕಳಿಗೆ ಕನ್ನಡದ ಅರಿವು, ಉಳಿವಿನ ಬಗ್ಗೆ ತಿಳಿಸುತ್ತಾ ಮುಂದಿನ ಭವಿಷ್ಯದ ಉತ್ತಮ ಪ್ರಜೆಯನ್ನಾಗಿ ಮಾಡಲು ಅವಕಾಶವಾಗುತ್ತದೆ. ಕನ್ನಡಕ್ಕೆ ಕೈ ಎತ್ತುತ್ತ ಪ್ರತಿಯೊಬ್ಬರೂ ಕನ್ನಡಕ್ಕಾಗಿಯೇ ಸೇವೆ ಸಲ್ಲಿಸುವ ಮನೋಭಾವ ಒಳಗೊಂಡಿದ್ದು. ಕನ್ನಡವೇ ಉಸಿರಿ ಎಂದು ಜೀವಿಸುತ್ತಿರುವ ಕನ್ನಡದ ಅಭಿಮಾನಿಗಳೇ ಈ ಕಾರ್ಯಗಳನ್ನು ಮಾಡಬೇಕಿದೆ. ಕನ್ನಡದ ಕಂಪನ್ನು ಬೀರುವ ಪ್ರತಿಯೊಬ್ಬರು ಕನ್ನಡಮ್ಮನ ಮಕ್ಕಳೇ, ಕನ್ನಡದ ಕಸ್ತೂರಿ ಕರುನಾಡ ಕುವರರು ನಮ್ಮ ಕನ್ನಡವನ್ನು ಉಳಿಸುವಂತಹ ಕಾರ್ಯವನ್ನು ಮಾಡಬೇಕಿದೆ. ಮಾತೃಭಾಷೆ ಕನ್ನಡ, ನಾವು ಆಡುವ ಮಾತು ಕನ್ನಡ, ನಾವಿರುವುದು ಕನ್ನಡ ನಾಡಿನಲ್ಲಿ ಅಂದಮೇಲೆ ಜೀವನವನ್ನು ಸಾಗಿಸುವುದು ತಾಯಿ ಕನ್ನಡಾಂಬೆಯ ಆಶೀರ್ವಾದದಿಂದ ತಾನೇ ನನ್ನೊಲವ ಕನ್ನಡವನ್ನು ಮರೆತರೆ ನನಗೆ ಒಳಿತಾಗುವುದೇನು. ಕನ್ನಡದ ಕಂಪನ್ನು ಬೀಸುವ ಕೆಲಸವನ್ನು ಕನ್ನಡ ಕಲಿಸುವುದರ ಮುಖಾಂತರ, ಕನ್ನಡವನ್ನು ಬರೆಯಲು ತಿಳಿಸುವ ಮುಖಾಂತರ ಕನ್ನಡದ ಫಲಕಗಳನ್ನು ಹಾಕುವುದರ ಮುಖಾಂತರ, ನಮ್ಮ ಮನಸ್ಸು ಒಳ್ಳೆಯ ಕಾರ್ಯ ಮಾಡಲು ದಾರಿ ತೋರುತ್ತದೋ ಹಾಗೆ ಕನ್ನಡವನ್ನು ಉಳಿಸುವ ಕಾರ್ಯವನ್ನು ಮಾಡಬೇಕಿದೆ. ಪ್ರತಿಯೊಬ್ಬರಿಗೂ, ಪ್ರತಿಯೊಂದು ಮಗುವಿಗೂ ಕನ್ನಡವನ್ನು ಕಲಿಸುವಂತಹ ಕೆಲಸ ಮಾಡಬೇಕು. ಕನ್ನಡವನ್ನು ಎಲ್ಲರೂ ತಿಳಿದಂತೆ ದಕ್ಷಿಣ ಭಾರತದ ಪ್ರತಿಯೊಂದು ಕಡೆಯೂ ಕನ್ನಡ ಭಾಷೆಯನ್ನು ಮಾತನಾಡಿಸುವ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವನ್ನು ಘೋಷಣೆ ಮಾಡಬೇಕೆಂದು ಅರಿತು ಘೋಷಣೆ ಮಾಡಿದ ದಿನವನ್ನು ಕರ್ನಾಟಕದಲ್ಲಿ ಕನ್ನಡ ರಾಜ್ಯೋತ್ಸವ ದಿನವೆಂದು ಆಚರಿಸುತ್ತೇವೆ. ಆ ದಿನವನ್ನು ಕನ್ನಡ ರಾಜ್ಯೋತ್ಸವಕ್ಕಾಗಿ ಸರ್ಕಾರಿ ರಜೆಯನ್ನು ನೀಡುವಂತೆ ತಿಳಿಸಿದ್ದಾರೆ. ಕನ್ನಡಿಗರು ಇದನ್ನು ಬಹಳ ವಿಜೃಂಭಣೆಯಿಂದ ವಿಶ್ವದಾದ್ಯಂತ ಆಚರಿಸುವ ದಿನವಾಗಿದೆ . ನಾವು ಎಂದೆಂದಿಗೂ ನವೆಂಬರ್ 1 ದಿನದಂದು ಕನ್ನಡವನ್ನು ನೆನೆದು ತೋರಿಕೆಗೆ ಕನ್ನಡ ರಾಜ್ಯೋತ್ಸವ ಆಚರಿಸದೆ. ನಮಗೆ 1956 ರಲ್ಲಿ ದಕ್ಷಿಣ ಭಾರತದ ಎಲ್ಲಾ ಕನ್ನಡ ಭಾಷೆಯ ಮಾತನಾಡುವ ಪ್ರದೇಶಗಳನ್ನು ಒಂದುಗೂಡಿಸಿ ಕರ್ನಾಟಕ ರಾಜ್ಯದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುವ ಪದ್ಧತಿ ಬಂದಿತು ಎಂಬುದು ಪ್ರತಿಯೊಬ್ಬರಿಗೂ ತಿಳಿದಂತಹ ವಿಷಯವಾಗಿದೆ. ನಾವು ಎಂದಿಗೂ ನಂಬರ್ 1 ಕನ್ನಡಿಗರಾಗಬೇಕೆ ಹೊರತು. ಕನ್ನಡ ರಾಜ್ಯೋತ್ಸವ ದಿನದಂದು ಮಾತ್ರ ನವೆಂಬರ್ ಒಂದರ ದಿನದಂದು ಆಚರಣೆ ಮಾಡಿ, ಕನ್ನಡಿಗರೆಂದು ಹೇಳಿಕೊಳ್ಳುವುದು ಸರಿಯಲ್ಲ, ಪ್ರತಿಯೊಂದು ದಿನವು ನಮ್ಮ ಕನ್ನಡಕ್ಕೆ ನಾವು ಸೇವೆಯನ್ನು ಸಲ್ಲಿಸುವಂತಹ ಮನೋಭಾವವನ್ನು ಒಳಗೊಂಡಿರಬೇಕು. ನಮ್ಮ ಕರ್ನಾಟಕದ ಏಕೀಕರಣಕ್ಕೆ ಮನ್ನಣೆಯನ್ನು ನೀಡಿ ಹಲವಾರು ಸಾಹಿತಿಗಳು ತಮ್ಮದೇ ಆದಂತಹ ಸೇವೆಗಳನ್ನು ಸಲ್ಲಿಸಿದ್ದಾರೆ. ಶಿವರಾಂ ಕಾರಂತ್, ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಇನ್ನು ಹಲವಾರು ಸಾಹಿತಿಗಳು ತಮ್ಮದೇ ಆದಂತಹ ಸೇವೆಯನ್ನು ಸಲ್ಲಿಸಿರುವುದು ಶ್ಲಾಘನೀಯ. ಕನ್ನಡಿಗರಾಗಲು ಜಾತಿ ಇಲ್ಲ, ಭೇದವಿಲ್ಲ, ಪಕ್ಷ ವಿಲ್ಲ, ನಾವೆಲ್ಲರೂ ಒಂದೇ ಎನ್ನುವ ಮನೋಭಾವವನ್ನು ಒಳಗೊಂಡಂತೆ ಕನ್ನಡ ತಾಯಿಯ ಸೇವೆಯನ್ನು ಮಾಡುವುದು ಬಹಳ ಮುಖ್ಯ. ನಮ್ಮ ಕನ್ನಡವನ್ನು ಉಳಿಸಲು ಹಲವಾರು ಜನರು ಹಲವಾರು ರೀತಿಯಲ್ಲಿ ತನ್ನದೇ ಆದಂತಹ ಸೇವೆಯನ್ನು ಸಂಘಟನೆಗಳ ಮುಖಾಂತರ ಸಂಸ್ಥೆಗಳ ಮುಖಾಂತರ ಸಾಹಿತಿಗಳಾಗಿ ಹಲವಾರು ರೀತಿಯ ಪಾತ್ರಗಳನ್ನು ಒಳಗೊಂಡಂತೆ ಕನ್ನಡಕ್ಕಾಗಿ ಹೋರಾಟ ಮಾಡುತ್ತಿರುವುದು ಕನ್ನಡವನ್ನು ಉಳಿಸಲು ಪ್ರಯತ್ನವನ್ನು ಮಾಡುತ್ತಿರುವುದನ್ನು ದಿನನಿತ್ಯ ನಾವು ನೋಡುತ್ತಿದ್ದೇವೆ. ಇಂದು ನಮ್ಮ ಕನ್ನಡವನ್ನು ಕನ್ನಡಿಗರೇ ಮಾತನಾಡಲು ಹಿಂಜರಿಯದೆ ಕನ್ನಡವನ್ನು ಹೆಮ್ಮೆಯಿಂದ ಮಾತನಾಡಲು ಮುಂದಾಗಬೇಕು . ನಮ್ಮ ಮನೆಯಲ್ಲಿ ಹುಟ್ಟಿದಂತಹ ಮಗುವಿಗೆ ಮೊದಲಿನಿಂದಲೂ ಕನ್ನಡದ ಅಭ್ಯಾಸ ಮಾಡಿಸಿ ಕನ್ನಡ ಕಲಿಸುವ ಕಾರ್ಯ ಪ್ರತಿಯೊಂದು ಮನೆಯಿಂದ ಪ್ರಾರಂಭ ಮಾಡಿದರೆ ಕನ್ನಡವನ್ನು ಉಳಿಸಿ,ಬೆಳೆಸಿ ಎಂದು ಹೇಳುವ ಪ್ರಮೇಯವೆ ಬರುವುದಿಲ್ಲ.

ಉಳಿದೆಲ್ಲ ಭಾಷೆಗಿಂತಲು ಕನ್ನಡವೆ ಅಂಟು
ಬಲುವಳಿಯ ನೀಡೆ ಸಂಸ್ಕೃತದ ಗಂಟು
ಕಳವಳವ ಪಡಬೇಡ ಜ್ಞಾನ ಪೀಠವು ಎಂಟು
ಕಳಸ ಹಿಡಿದರೆ ನಂಟು ಲಕ್ಷ್ಮಿ ದೇವಿ.......

ಕನ್ನಡವನ್ನು ಕಲಿಸುವುದರಲ್ಲಿ ನಾವು ಸೋಲುವುದಿಲ್ಲ.ಹೊರ ರಾಜ್ಯಗಳಿಂದ ಬಂದಂತಹ ಜನರೆಲ್ಲ ಕನ್ನಡವನ್ನು ಕಲಿತು ಕನ್ನಡವನ್ನು ಬಳಸಿಕೊಂಡು ತನ್ನ ಜೀವನವನ್ನು ಸಾಗಿಸುವಂತಹ ದಿನಗಳು ಇಲ್ಲಿ ಇರುವಾಗ. ನಮ್ಮವರು ಏಕೆ ಕನ್ನಡವನ್ನು ಬಿಟ್ಟು ಪರಭಾಷೆಯ ವ್ಯಾಮೋಹಕ್ಕೆ ಹೋಗುತ್ತಿದ್ದಾರೆ. ಕನ್ನಡವನ್ನು ಮಾತನಾಡಲು ಹಿಂಜರಿಯುತ್ತಿದ್ದಾರೆ. ನಮ್ಮ ಕನ್ನಡವನ್ನು ಉಳಿಸುವ ಕೆಲಸದಲ್ಲಿ ಹಲವಾರು ಮಹನೀಯರು ತಮ್ಮದೇ ಆದಂತಹ ಸೇವೆಗಳನ್ನು ಸಲ್ಲಿಸುತ್ತಿದ್ದಾರೆ. ಜೀವನವನ್ನು ಕನ್ನಡ ಸೇವೆಯಲ್ಲಿ ಕಳೆಯುತ್ತಿದ್ದಾರೆ. ಕನ್ನಡಮ್ಮನ ಹೆಮ್ಮೆಯ ಪುತ್ರರಾಗಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ಕೆರೆ ಉಳಿಸಲು 15 ವರ್ಷಗಳಿಂದ ಹೋರಾಟ ನಡೆಸಿದರೂ ಸಿಗದ ನ್ಯಾಯ


ಸತ್ಯಾಗ್ರಹ ಆರಂಭಿಸಿದ ಗ್ರಾಮಸ್ಥರು ನಲ್ಕುದುರೆ ಗ್ರಾಮದಲ್ಲಿರುವ ಐತಿಹಾಸಿಕ ಕೆರೆ ಉಳಿಸಲು ಗ್ರಾಮಸ್ಥರು ಸತ್ಯಾಗ್ರಹ ಮಾಡಿ ಜಿಲ್ಲಾಡಳಿತಕ್ಕೆ ಬಿಸಿ ಮುಟ್ಟಿಸಿದ್ದಾರೆ.

• **ಉದಯವಾಹಿನಿ, ದಾವಣಗೆರೆ:**

ಅದು ಒಂದಲ್ಲ, ಎರಡಲ್ಲ, ಬರೋಬ್ಬರಿ 15 ವರ್ಷಗಳಿಂದ ನಿರಂತರ ಹೋರಾಟ. ದುರಂತ ಎಂದರೇ ನ್ಯಾಯ ಸಿಕ್ಕಿಲ್ಲ. ಗ್ರಾಮದಲ್ಲಿರುವ ಕೆರೆಯನ್ನು ಉಳಿಸಲು ರೈತರು ಟೊಂಕಕಟ್ಟಿ ನಿಂತಿದ್ದಾರೆ. ಕೆರೆ ಒತ್ತುವರಿ ಮಾಡಿದವರ ವಿರುದ್ಧ ಹೋರಾಟದ ಅಸ್ತ್ರಹೂಡಿದ್ದಾರೆ. ಬಲಾಢ್ಯರ ಕೆರೆ ಕಬಳಿಕೆಯಿಂದ ಕಂಗಾಲಾದ ಗ್ರಾಮಸ್ಥರು ಇದೀಗ ಜಿಲ್ಲಾಡಳಿತದ ವಿರುದ್ಧ ತೀವ್ರ ಆಕ್ರೋಶ

1 : ಬರೋಬ್ಬರಿ 62.27 ಎಕರೆ ವಿಸ್ತೀರ್ಣ
2 : ಕೆರೆ ಜಾಗದ ಒತ್ತುವರಿ ತೆರವು ಮಾಡಿಲ್ಲ
3 : ನೀರು ಕುಡಿಸಲು ಪರದಾಡುವ ಪರಿಸ್ಥಿತಿ

ವ್ಯಕ್ತಪಡಿಸ್ತಿದ್ದಾರೆ. ಸತ್ಯಾಗ್ರಹ ಮಾಡಿ ಜಿಲ್ಲಾಡಳಿತಕ್ಕೆ ಬಿಸಿ ಮುಟ್ಟಿಸಿದ್ದಾರೆ. ಜಮೀನುಗಳಿಗೆ ನೀರುಣಿಸುವ ಕೆರೆ ಉಳಿಸಲು ರೈತರು ಪಣತೊಟ್ಟಿದ್ದಾರೆ. ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ನಲ್ಕುದುರೆ ಗ್ರಾಮದಲ್ಲಿರುವ ಐತಿಹಾಸಿಕ ಕೆರೆಗೆ ಕಂಟಕ ಎದುರಾಗಿದೆ. ಸರ್ವೆ ನಂಬರ್ 56ರಲ್ಲಿ ಬರುವ ಕೆರೆಯನ್ನು ಒತ್ತುವರಿ ಮಾಡಿರುವ ಆರೋಪ ಕೇಳಿಬಂದಿದೆ. ಬರೋಬ್ಬರಿ 62.27 ಎಕರೆ ವಿಸ್ತೀರ್ಣದ ಇದೆ. 1977-78ರಲ್ಲೇ ಕೆರೆಗಾಗಿ ಭೂಸ್ವಾಧೀನ ಮಾಡಿಕೊಂಡು ಪರಿಹಾರವನ್ನೂ ನೀಡಲಾಗಿದೆ ಎನ್ನಲಾಗಿದೆ. ಆದರೆ ಭೂಸ್ವಾಧೀನ ಪ್ರಕ್ರಿಯೆ ನಡೆದಿದ್ದರೂ ಕೆರೆ ಜಾಗದ



ಉದಯವಾಹಿನಿ ಚಿತ್ರ

ನಾಲೆ ಮಾಡಲು ಎಲ್ಲೆಲ್ಲಿ ಭೂಸ್ವಾಧೀನ ಆಗಿತ್ತಲ್ಲ, ಅಲ್ಲಿ ಪಹಣಿ ಇಂಡಿಕರಣ ಮಾಡಲು ಧಾರವಾಡ ಹೈಕೋರ್ಟ್ ಪೀಠದಲ್ಲಿ ಎಲ್ಲಾವನ್ನೂ ಮಾಡಲು ಹೇಳಲಾಗಿತ್ತು. ನಾವು ಮಾಡ್ತಿದ್ದೇವೆ. ಎಲ್ಲಿಯಾದರು ಕಾಣದೇ ಇರೋದು ಕೈತಪ್ಪಿ ಹೋಗಿದ್ದರೆ ಸರಿ ಮಾಡುತ್ತೇವೆ ಎಂದು ಹೇಳಿದ್ದಾರೆ. -ಡಾ. ಜಿ.ಎಂ. ಗಂಗಾಧರಸ್ವಾಮಿ

ಒತ್ತುವರಿ ತೆರವು ಮಾಡದೆ ಅಧಿಕಾರಿಗಳು ಬರೋದು ಸರ್ವೆ ಮಾಡೋದು ಹೋಗೋದು ಮಾಡ್ತಿದ್ದರು. ಇದೀಗ ಹೆಚ್ಚು ಒತ್ತುವರಿ ಮಾಡಿದ್ದಾರೆ. ಆ ಕಾರಣ ಜಿಲ್ಲಾಧಿಕಾರಿಗಳಿಗೆ ಕ್ರಮಕ್ಕೆ ಗೊಳ್ಳುವಂತೆ ಮನವಿ ಮಾಡಿದ್ದೇವೆ. ಒತ್ತುವರಿ ತೆರವು ಆಗುವ ತನಕ ನಿರಂತರ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದೇವೆ. ನನ್ನ ಬೆಂಬಲಕ್ಕೆ ರೈತರು ಬಂದಿದ್ದಾರೆ ಎಂದು ತಿಳಿಸಿದ್ದಾರೆ. -ರೈತ ಚನ್ನಬಸಪ್ಪ

ಒತ್ತುವರಿ ತೆರವು ಮಾಡಿಲ್ಲ ಎಂಬುದು ಗ್ರಾಮಸ್ಥರ ಆರೋಪವಾಗಿದೆ. ಗ್ರಾಮಸ್ಥರ ಪ್ರಕಾರ ಕೆರೆಯ ಸುಮಾರು 20 ರಿಂದ 30 ಎಕರೆ ಪ್ರದೇಶ ಒತ್ತುವರಿಯಾಗಿದೆ. ಇದರಿಂದ ಕೆರೆ ಪ್ರದೇಶಕ್ಕೆ ತೆರಳಲು ಕೂಡ ಸಮಸ್ಯೆಯಾಗಿದ್ದು, ಜಾನುವಾರುಗಳಿಗೆ ನೀರು ಕುಡಿಸಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗ್ರಾಮಸ್ಥರು ಹೇಳ್ತಿದ್ದಾರೆ. ಇತ್ತ ಕೆರೆಯ ಅಭಿವೃದ್ಧಿ ಕುಂಠಿತವಾಗಿದ್ದು, ದಿನದಿಂದ ದಿನಕ್ಕೆ ಅಂತರ್ಜಲ ಮಟ್ಟವೂ ಕುಸಿಯುತ್ತಿದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ. ಕೆರೆ ಒತ್ತುವರಿ ತೆರವು ಮಾಡುವಂತೆ ಕಳೆದ ಒಂದೂವರೆ ದಶಕದಿಂದ ಹೋರಾಟ ನಡೆಸುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂಬುದು ಗ್ರಾಮಸ್ಥರ ಅಳಲು. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಹೋಗುತ್ತಾರೆಯೇ ಹೊರತು, ಒತ್ತುವರಿ ತೆರವಿಗೆ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ ಎಂದು ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೂಡಲೇ ಕೆರೆಯನ್ನು ಸಮಗ್ರವಾಗಿ ಸರ್ವೆ ನಡೆಸಿ, ಗಡಿ ಗುರುತಿಸಿ ಹದ್ದುಬಸ್ತ್ ಮಾಡಬೇಕು. ಒತ್ತುವರಿ ತೆರವುಗೊಳಿಸಿ ಕೆರೆಯ ಹೂಳು ತೆಗೆದು ಅಭಿವೃದ್ಧಿಪಡಿಸಬೇಕು ಎಂಬುದು ಗ್ರಾಮಸ್ಥರ ಪ್ರಮುಖ ಬೇಡಿಕೆ.

ಹೋರಾಟಗಾರ ರೈತ ಚನ್ನಬಸಪ್ಪ ಮಾತನಾಡಿ, ನಲ್ಕುದುರೆ ಗ್ರಾಮದ ಸರ್ವೆ ನಂಬರ್ 56ರಲ್ಲಿ ಬರುವ ಕೆರೆ 62.27 ಎಕರೆ ಇದೆ. ಆ ಕೆರೆ ಭಾಗದಲ್ಲಿ ಭದ್ರಾ ಕಾಲುವೆ ಬಂದಿದ್ದರಿಂದ ಆ ಭೂಮಿ ಮೂಳುಗುತ್ತದೆ. ಅಲ್ಲಿ ಭೂಸ್ವಾಧಿನ ಮಾಡಿದ್ದರಿಂದ ಪರಿಹಾರ ಪಡೆದರು ಕೆಲ ರೈತರು ಆ ಭಾಗದಲ್ಲಿ ಒತ್ತುವರಿ ಮಾಡಿದ್ದಾರೆ.

ತದ ನಂತರ ಮೂಲ ಕೆರೆಯನ್ನು ಒತ್ತುವರಿ ಮಾಡಲಾಗಿದೆ. ಭದ್ರಾ ಕಾಲುವೆ ಬಳಿಯ ಕೆರೆಯ ಜಾಗವನ್ನು ಒತ್ತುವರಿ ತೆರವು ಮಾಡಿ ಎಂದು ಮನವಿ ಮಾಡಿದ್ದಾರೆ. ಈಗಾಗಲೇ ಗಮನಿಸಿ ಅದನ್ನು ತಹಶೀಲ್ದಾರ್ ಅವರಿಗೆ ಕಳಿಸಿದ್ದೇನೆ. ಅಲ್ಲದೆ ವಿಡಿಯೋ ಕಾನ್ಫರೆನ್ಸ್ ಮಾಡಿ ಎಲ್ಲಾ ತಹಶೀಲ್ದಾರ್ ಅವರಿಗೆ ಈ ರೀತಿ ಎಲ್ಲೆಲ್ಲಿ ಆಗಿದೆ ಸರಿ ಮಾಡಿ ಎಂದು ಸೂಚನೆ ನೀಡಿದ್ದೇನೆ.

ಕಬ್ಬು ಬೆಳೆಗಾರರ ಹೋರಾಟ ತೀವ್ರ, ರಾಜ್ಯಾದ್ಯಂತ ಬಂದ್‌ಗೆ ಕರೆ

• **ಉದಯವಾಹಿನಿ, ಬೆಳಗಾವಿ:**

ಕಬ್ಬಿಗೆ ಪ್ರತಿ ಟನ್‌ಗೆ 5,500 ರೂಪಾಯಿ ಬೆಲೆ ನೀಡುವಂತೆ ಆಗ್ರಹಿಸಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಪ್ರತಿಭಟನೆ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ, ಹೆದ್ದಾರಿ ತಡೆ ಪ್ರತಿಭಟನೆಗಳನ್ನು ತಡೆಯಲು ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು ಧಾರವಾಡ ಜಿಲ್ಲಾಧಿಕಾರಿ ಸ್ನೇಹಲ್ ಆರ್ ಜಿಲ್ಲೆಯ ನಾಲ್ಕು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ -2023ರ ಸೆಕ್ಷನ್ 163ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. ಪುಣೆ ಬೆಂಗಳೂರು, ಹುಬ್ಬಳ್ಳಿಅಂಕೋಲಾ, ನವಲಗುಂದ ಸೊಲ್ಲಾಪುರ ಮತ್ತು ಹುಬ್ಬಳ್ಳಿ ಬಳ್ಳಾರಿ ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಅವುಗಳ ಸುತ್ತಲಿನ ಐದು ಕಿಲೋಮೀಟರ್ ವ್ಯಾಪ್ತಿಯಲ್ಲಿ ನಿರ್ಬಂಧಗಳನ್ನು ವಿಧಿಸಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧ್ಯಕ್ಷರಿಂದ ಬಂದ



ಉದಯವಾಹಿನಿ ಚಿತ್ರ

ಪ್ರತಿ ಟನ್ ಕಬ್ಬಿಗೆ 5,500 ರೂಪಾಯಿ ನೀಡುವಂತೆ ರೈತ ಸಂಘಟನೆಗಳು ಒತ್ತಾಯಿಸುತ್ತಿದ್ದು, ಬೆಲೆ ನಿಗದಿ ವಿವಾದದ ಹಿನ್ನೆಲೆಯಲ್ಲಿ ಕರ್ನಾಟಕ ಬಂದ್‌ಗೂ ಕರೆ ನೀಡಿವೆ.

ವರದಿಗಳ ಆಧಾರದ ಮೇಲೆ ಈ ಆದೇಶ ಹೊರಡಿಸಲಾಗಿದೆ. ತಕ್ಷಣದಿಂದಲೇ ಜಾರಿಗೆ ಬಂದಿರುವ ನಿರ್ಬಂಧಗಳು ಮುಂದಿನ ಆದೇಶದವರೆಗೆ ಜಾರಿಯಲ್ಲಿರಲಿವೆ.

ಡಿ.ಕೆ ಶಿವಕುಮಾರ್ ಭರವಸೆಗೂ ಜಗ್ಗದ ಕಬ್ಬು ಬೆಳೆಗಾರರು; ಹೋರಾಟ ಮುಂದುವರಿಸಲು ನಿರ್ಧಾರ..! ಕಬ್ಬು ಬೆಳೆಗಾರರು ಹೆದ್ದಾರಿ ತಡೆ ಪ್ರತಿಭಟನೆಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಶಾಂತಿ ಕಾಪಾಡುವುದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದು, ತುರ್ತು ಸೇವೆಗಳಿಗೆ ಅಡ್ಡಿಯಾಗದಂತೆ ನೋಡಿಕೊಳ್ಳುವುದು ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಈ ನಿರ್ಬಂಧಗಳನ್ನು ವಿಧಿಸಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ. ಇದೇ ವೇಳೆ, ಬೆಳಗಾವಿ ಕೇಂದ್ರ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ಆರಂಭವಾಗಿದ್ದು, ರೈತ ಮುಖಂಡರೊಬ್ಬರು ಹೋರಾಟಕ್ಕೆ ಚಾಲನೆ ನೀಡಿದ್ದಾರೆ. ಪ್ರತಿಭಟನೆ ಮುಂದುವರಿದ ಹಿನ್ನೆಲೆಯಲ್ಲಿ ಬಸ್ ನಿಲ್ದಾಣದ ಸುತ್ತಮುತ್ತ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಗಾದಗಿ ಜಿ.ಪಂ. ಕ್ಷೇತ್ರಕ್ಕೆ ಎಸ್‌ಸಿ ಮೀಸಲಾತಿ ಕಲ್ಪಿಸಲು ಆಗ್ರಹ

• **ಉದಯವಾಹಿನಿ, ಬೀದರ್:**

ಹೊಸದಾಗಿ ರಚಿಸಲಾದ ಗಾದಗಿ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ಪರಿಶಿಷ್ಟ ಜಾತಿ (ಎಸ್‌ಸಿ) ಮೀಸಲಾತಿ ಕಲ್ಪಿಸದೆ ದಲಿತ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ. ಕೂಡಲೇ ಹಿಂದುಳಿದ ವರ್ಗ-ಅ (ಮಹಿಳೆ) ಮೀಸಲಾತಿ ರದ್ದುಪಡಿಸಿ, ಪರಿಶಿಷ್ಟ ಜಾತಿಗೆ ಮೀಸಲಿಡಬೇಕು. ಇಲ್ಲವಾದರೆ ಬೃಹತ್ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ದಲಿತ ಮುಖಂಡರಾದ ಪೀಟರ್ ಶ್ರೀಮಂಡಲ ಹಾಗೂ ಶಿವರಾಜ ಹಮಿಲಾಪುರ ಎಚ್ಚರಿಕೆ ನೀಡಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '1995ರಿಂದ ಈವರೆಗೂ ಮಳೆಗಾಂವ್ (ಪ್ರಸ್ತುತ ಗಾದಗಿ) ಜಿಲ್ಲಾ ಪಂಚಾಯಿತಿ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಗೆ ಒಮ್ಮೆಯೂ ಮೀಸಲಾತಿ ಕಲ್ಪಿಸಿಲ್ಲ. ಕ್ಷೇತ್ರದಲ್ಲಿ 15 ಸಾವಿರಕ್ಕೂ ಹೆಚ್ಚು ಪರಿಶಿಷ್ಟ ಜಾತಿಯ ಮತದಾರರಿದ್ದರೂ ರಾಜಕೀಯ ಪ್ರಾತಿನಿಧ್ಯದಿಂದ ವಂಚಿಸಲಾಗುತ್ತಿದೆ' ಎಂದು ಆರೋಪಿಸಿದರು.

'ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಪುನರ್ವಿಂಗಡಣೆ ಸಂದರ್ಭದಲ್ಲಿ ಗಾದಗಿ ಕ್ಷೇತ್ರವನ್ನು ಹೊಸದಾಗಿ ರಚಿಸಲಾಗಿದೆ. ಹೊಸ ಕ್ಷೇತ್ರಕ್ಕೆ ಮೊದಲ ಆದ್ಯತೆಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾತಿ ನೀಡಬೇಕೆಂಬುದು ನಮ್ಮ ಬೇಡಿಕೆ. ಆದರೆ, ಹಿಂದುಳಿದ ವರ್ಗ-ಅ (ಮಹಿಳೆ)



ಉದಯವಾಹಿನಿ ಚಿತ್ರ

ಮೀಸಲಾತಿ ನಿಗದಿಪಡಿಸಿರುವುದು ದಲಿತ ಸಮುದಾಯಕ್ಕೆ ಮಾಡಿದ ಅನ್ಯಾಯವಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಅಕ್ಟೋಬರ್ 9ರಂದು ಪ್ರಕಟಿಸಲಾದ ಕರಡು ಮೀಸಲಾತಿ ಪಟ್ಟಿಗೆ ಆಕ್ಷೇಪ ವ್ಯಕ್ತಪಡಿಸಿ, ಅಕ್ಟೋಬರ್ 15ರಂದು ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಮೂಲಕ ಮನವಿ ಸಲ್ಲಿಸಲಾಗಿತ್ತು. ಆದರೂ ಆಕ್ಷೇಪಣೆಗಳನ್ನು ಪರಿಗಣಿಸದೆ ಅಕ್ಟೋಬರ್ 19ರಂದು ಮೀಸಲಾತಿ ನಿಗದಿಪಡಿಸಲಾಗಿದೆ. ಸಮುದಾಯದ ಜನಸಂಖ್ಯೆ ಹಾಗೂ ಹಿಂದಿನ ಮೀಸಲಾತಿ ವ್ಯವಸ್ಥೆಯನ್ನು ಪರಿಗಣಿಸದೆ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ದೂರಿದರು.

ಸಂಭಾವ್ಯ ಕುಡಿಯುವ ನೀರಿನ ಸಮಸ್ಯೆ ಎದುರಿಸಲು ಅಗತ್ಯ ಸಿದ್ಧತೆ

• **ಉದಯವಾಹಿನಿ, ಮಂಗಳೂರು-**

ಕುಡಿಯುವ ನೀರು ಅಥವಾ ಜಾನುವಾರುಗಳಿಗೆ ಮೇವು ಪೂರೈಕೆಯಲ್ಲಿ ಸಮಸ್ಯೆ ಕಂಡುಬಂದಲ್ಲಿ ವಿಳಂಬ ಮಾಡದೆ ತಕ್ಷಣವೇ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು.

ಮುಂಬರುವ ದಿನಗಳಲ್ಲಿ ಎದುರಾಗಬಹುದಾದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಂಬಂಧಿಸಿದ ಇಲಾಖೆಗಳು ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ ಸೂಚಿಸಿದ್ದಾರೆ. ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಕುಡಿಯುವ ನೀರಿನ ಪೂರೈಕೆಗೆ ಸಂಬಂಧಿಸಿದಂತೆ ಮುಂಚಿತವಾಗಿಯೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಬೇಡಿಕೆ ಬಂದ ತಕ್ಷಣವೇ ನೀರು ಪೂರೈಸಲು ಅನುಕೂಲವಾಗುವಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ವಿಳಂಬವಿಲ್ಲದೆ ತಕ್ಷಣ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸಬೇಕು ಎಂದು ಅವರು ಸೂಚಿಸಿದರು. ಎಂದು ಅವರು ಹೇಳಿದರು.



ಉದಯವಾಹಿನಿ ಚಿತ್ರ


ಅಂಗನವಾಡಿ ಕೇಂದ್ರಗಳು ಹಾಗೂ ಶಾಲಾ ಕಟ್ಟಡಗಳನ್ನು ಪರಿಶೀಲಿಸಿ, ಅಗತ್ಯವಿರುವ ದುರಸ್ತಿ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳಬೇಕು. ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಿ ದುರಸ್ತಿ ಕಾರ್ಯಗಳನ್ನು ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಬೇಕು .

ತಾಲ್ಲೂಕು ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ಸಭೆಗಳನ್ನು ಪ್ರತಿ 15 ದಿನಗಳಿಗೊಮ್ಮೆ ಕಡ್ಡಾಯವಾಗಿ ನಡೆಸಬೇಕು. ಸಭೆಯಲ್ಲಿ ಕುಡಿಯುವ ನೀರಿನ ಸರಬರಾಜು ಪರಿಸ್ಥಿತಿ, ಜಾನುವಾರುಗಳಿಗೆ ಮೇವು ಲಭ್ಯತೆ ಹಾಗೂ ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು.

ತಾಲ್ಲೂಕು ಮಟ್ಟದಲ್ಲಿ ಕೈಗೊಂಡ ಕ್ರಮಗಳ ಕುರಿತು ವರದಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಸಭೆಯಲ್ಲಿ ಬರ ನಿರ್ವಹಣೆ, ಮುಂಗಾರು ಮಳೆಯಿಂದ ಉಂಟಾದ ಹಾನಿ ಹಾಗೂ ಎಂಆರ್‌ಪಿಎಲ್ ಅವಘಡದಿಂದ ಸಾರ್ವಜನಿಕ ಆಸ್ತಿ-ಪಾಸ್ತಿಗೆ ಉಂಟಾದ ಹಾನಿ ಕುರಿತು ಚರ್ಚಿಸಲಾಯಿತು.ಹೆಚ್ಚುವರಿ ಜಿಲ್ಲಾಧಿಕಾರಿ ರಾಜು ಕೆ, ಮಂಗಳೂರು ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಮತ್ತಿತರರು ಇದ್ದರು.

ಉದಯೋನ್ಮುಖ ಅವಕಾಶಗಳ ಅನ್ವೇಷಣೆ ಅಗತ್ಯ

• **ಉದಯವಾಹಿನಿ, ಕಲಬುರಗಿ,:**



ಉದಯವಾಹಿನಿ ಚಿತ್ರ

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ (ಸಿಯುಕೆ), ಕರ್ನಾಟಕ ಸರ್ಕಾರದ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆ.ಡಿ.ಇ.ಎಂ), ಇನ್‌ಕ್ಯುಬೇಷನ್ ಮತ್ತು ಕೌಶಲ್ಯ ಅಭಿವೃದ್ಧಿ ಕೇಂದ್ರ, ಹಾಗೂ ಕಂಪ್ಯೂಟರ್ ವಿಜ್ಞಾನ ಇಂಜನಿಯರಿಂಗ್ ನಿಕಾಯದ ಸಹಯೋಗದೊಂದಿಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ''ಕರ್ನಾಟಕದ ಉದಯೋನ್ಮುಖ ಡಿಜಿಟಲ್ ಆರ್ಥಿಕತೆ ಮತ್ತು ಡೇಟಾ ಸೆಂಟರ್ ಪರಿಸರ ವ್ಯವಸ್ಥೆಯಲ್ಲಿ ವೃತ್ತಿ ಅವಕಾಶಗಳು ಹಾಗೂ ನಾವೀನ್ಯತೆಯ ಸಾಧ್ಯತೆಗಳು'' ಎಂಬ ವಿಷಯದ ಕುರಿತು ತಜ್ಞರ ಅಧಿವೇಶನವನ್ನು ಆಯೋಜಿಸಿತ್ತು.

ಕಾರ್ಯಕ್ರಮವನ್ನು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವ ಹಾಗೂ ಕಾರ್ಯಕ್ರಮದ ಪೊಷಕ ಪ್ರೊ. ಆರ್. ಆರ್. ಬಿರಾದಾರ್ ಅವರು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ನವೀನ ಆಲೋಚನೆಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಡಿಜಿಟಲ್ ಆರ್ಥಿಕತೆಯಲ್ಲಿ ಉದಯೋನ್ಮುಖವಾಗುತ್ತಿರುವ ಅವಕಾಶಗಳನ್ನು ಅನ್ವೇಷಿಸಿ, ಬೆಳೆಯುತ್ತಿರುವ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ನಾವೀನ್ಯತೆಯನ್ನು ಉತ್ತೇಜಿಸುವುದು, ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ನೀಡುವುದು ಹಾಗೂ ರಾಷ್ಟ್ರೀಯ ಆರ್ಥಿಕತೆಯನ್ನು ಬಲಪಡಿಸುವಲ್ಲಿ ಯುವಜನರು ಪ್ರಮುಖ ಪಾತ್ರ ವಹಿಸುತ್ತಾರೆ. ನೈಜ ಜಗತ್ತಿನ ಸವಾಲುಗಳಿಗೆ ನವೀನ ಪರಿಹಾರಗಳನ್ನು ಕಂಡುಕೊಳ್ಳುವ ಮೂಲಕ 'ವಿಕಸಿತ ಭಾರತ 2047'ರ ಆಶಯವನ್ನು ಸಾಕಾರಗೊಳಿಸಲು ವಿದ್ಯಾರ್ಥಿಗಳು ತಮ್ಮ ಜ್ಞಾನ, ಕೌಶಲ್ಯ ಹಾಗೂ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ, ನಾಯಕತ್ವ ಗುಣ, ಸಂವಹನ ಕೌಶಲ್ಯ ಹಾಗೂ ಸೃಜನಶೀಲ ಚಿಂತನೆಯಂತಹ 21ನೇ ಶತಮಾನದ ಪ್ರಮುಖ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಡವರ ಲಾಯರ್ ಆಗಿದ್ದ ಸುಧೀರ್ ಸಾವು, ಗ್ರಾಮದಲ್ಲಿ ನೀರವ ಮೌನ

• **ಉದಯವಾಹಿನಿ, ದಾವಣಗೆರೆ:**

ಉತ್ತರಾಖಂಡದಲ್ಲಿ ಸಂಭವಿಸಿದ ಹೆಲಿಕ್ಯಾಪ್ಟರ್ ದುರಂತದಲ್ಲಿ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ತ್ಯಾವಣಿಗೆ ಗ್ರಾಮದ ಸುಧೀರ್ ಸಾವನ್ನಪ್ಪಿದ್ದಾರೆ. ಸುಧೀರ್ ಅವರನ್ನು ಕಳೆದುಕೊಂಡ ಗ್ರಾಮದಲ್ಲಿ ಇದೀಗ ನೀರವ ಮೌನ ಆವರಿಸಿದೆ.



ಉದಯವಾಹಿನಿ ಚಿತ್ರ

ಮದುವೆಗೆ ಊರಿಗೆ ಆಗಮಿಸಬೇಕಿದ್ದ ಸುಧೀರ್ ದುರಂತ ಅಂತ್ಯ : ಸುಧೀರ್ ಅವರು ಉತ್ತರಾಖಂಡ ಪ್ರವಾಸ ಮುಗಿಸಿ ಸ್ವಗ್ರಾಮ ತ್ಯಾವಣಿಗೆಗೆ ಚಿಕ್ಕಪ್ಪನ ಮಗನ ಮದುವೆಗೆ ಆಗಮಿಸಬೇಕಿತ್ತು. ಮದುವೆಗೆ ಸಜ್ಜಾಗಿದ್ದ ಕುಟುಂಬಸ್ಥರಿಗೆ ಸುಧೀರ್ ಅವರ ಸಾವಿನ ಸುದ್ದಿ ಬರಸಿಡಿಲು ಬಡಿದಂತಾಗಿದೆ. ಇಂದು ನಾಳೆ ಮದುವೆಗೆ ಎಲ್ಲಾ ರೀತಿಯಲ್ಲೂ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೀಗ ಕುಟುಂಬದಲ್ಲಿ ಶೋಕ ಮಡುಗಟ್ಟಿದೆ. ಮದುವೆಗೆ ಸಜ್ಜಾಗಿದ್ದ ಕುಟುಂಬಸ್ಥರು ಸುಧೀರ್ ಅವರ ಮೃತದೇಹ ತರಲು ಉತ್ತರಾಖಂಡದ ಡೆಹ್ರಾಡೂನ್‌ಗೆ ತೆರಳಿದ್ದಾರೆ. ಇನ್ನು ಸುಧೀರ್ ಅವರು ಇಬ್ಬರು ಮಕ್ಕಳು, ಪತ್ನಿಯನ್ನು ಅಗಲಿದ್ದಾರೆ. ಅಂತ್ಯ ಸಂಸ್ಕಾರ ತ್ಯಾವಣಿಗೆ ಗ್ರಾಮದಲ್ಲಾ ಅಥವಾ ಬೆಂಗಳೂರಿನಲ್ಲಿ ನಡೆಯುತ್ತಾ ಅನ್ನೋದರ ಮಾಹಿತಿ ತಿಳಿದುಬರಬೇಕಿದೆ.

ತಂದೆಯಂತೆ ಜಡ್ಜ್ ಆಗುವ ಕನಸು ಕಂಡವರು: ತ್ಯಾವಣಿಗೆ ಗ್ರಾಮದಲ್ಲೇ ಕಾಕನೂರು ಕುಟುಂಬ ಎಂದರೇ ಅದು ವಿದ್ಯಾವಂತರ ದೊಡ್ಡ ಕುಟುಂಬ ಎಂದು ಪರಿಚಿತವಾಗಿದೆ. ಕುಟುಂಬದಲ್ಲಿ ಡಾಕ್ಟರ್, ಲಾಯರ್, ಜಡ್ಜ್ ಹೀಗೆ ಉನ್ನತ ಹುದ್ದೆಗಳನ್ನು ಅಲಂಕರಿಸಿದವರೇ ಹೆಚ್ಚು. ಸುಧೀರ್ ಅವರ ತಂದೆ ಮಲ್ಲೇಶಪ್ಪ ಅವರು ಕೂಡ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದರು.

ಪ್ರವಾಸಕ್ಕೆಂದು ಹೋದವರು ವಾಪಸ್ ಬರಲೇ ಇಲ್ಲ: ಮೃತ ಸುಧೀರ್ ಅವರ ಚಿಕ್ಕಪ್ಪ ಕೃಷ್ಣಕುಮಾರ್ ಅವರು ಮಾತನಾಡಿ, ಸುಧೀರ್ ಅವರು ಕೇಸ್ ಸಂಬಂಧ ಸುಪ್ರೀಂ ಕೋರ್ಟ್‌ಗೆ ತೆರಳಿ ಉತ್ತರಾಖಂಡ್‌ನ ಕೇದಾರನಾಥ, ಬದ್ರಿನಾಥ್ ಪ್ರವಾಸಕ್ಕೆ ತೆರಳಿದ್ದರು. ಈ ವೇಳೆ ಅವಘಡ ಸಂಭವಿಸಿದೆ. ನಮಗೂ ರಾತ್ರಿ ಮೂರುವರೆಗೆ ಈ ವಿಚಾರ ತಿಳಿಯಿತು. ಹಬ್ಬ ಹರಿದಿನಗಳಲ್ಲಿ ತಪ್ಪದೇ ಊರಿಗೆ ಆಗಮಿಸುತ್ತಿದ್ದ ಅವರು, ನಮ್ಮನ್ನು ಆತ್ಮೀಯತೆ ಮತ್ತು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಅವರು ಅಗಲಿರುವುದು ದುಃಖ ತರಿಸಿದೆ ಎಂದರು.

ಉದಯವಾಹಿನಿ
ಪ್ರಾದೇಶಿಕ
ಭಾನುವಾರ
01 ನವೆಂಬರ್ 2026

ಮಿನಿ ನ್ಯೂಸ್

ಬೋಟ್‌ನಲ್ಲಿ ವಿಷಗಾಳಿ ಸೇವಿಸಿ ಇಬ್ಬರು ಮೀನುಗಾರರು ಸಾವು!

• **ಉದಯವಾಹಿನಿ, ಕಾರವಾರ:**

ಕಳೆದ ಮಂಗಳವಾರ ಉತ್ತರ ಕನ್ನಡ ಜಿಲ್ಲೆಯ ತದಡಿ ಬಂದರಿನಲ್ಲಿ ಬೋಟ್‌ನ ಟ್ಯಾಂಕ್ ಸ್ವಚ್ಛಗೊಳಿಸುತ್ತಿದ್ದ ವೇಳೆ ಮೂವರು ಮೀನುಗಾರರು ವಿಷಕಾರಿ ವಾಸನೆಯಿಂದ ಉಸಿರುಗಟ್ಟಿ ಮೃತಪಟ್ಟ ಬೆನ್ನಲ್ಲೇ ಶನಿವಾರ ಕಾರವಾರ ತಾಲ್ಲೂಕಿನ ಮುದಗಾ ಬಂದರಿನಲ್ಲಿ ಮತ್ತೊಂದು ದುರಂತ ಸಂಭವಿಸಿದೆ. ಇಂದು ಬೆಳಗ್ಗೆ ಮುದಗಾ ಬಂದರಿನಲ್ಲಿ, ಬೋಟ್ ಸ್ವಚ್ಛಗೊಳಿಸುತ್ತಿದ್ದ ವೇಳೆ ಕೊಳೆತ ಚಮನ್ ಮೀನಿನ ವಿಷ ಗಾಳಿ ಸೇವಿಸಿ ಇಬ್ಬರು ಮೀನುಗಾರರು ಮೃತಪಟ್ಟಿದ್ದು, ಮೂವರು ಅಸ್ವಸ್ಥರಾಗಿದ್ದಾರೆ.

ಮೃತ ಮೀನುಗಾರರನ್ನು ಒಡಿಶಾ ಮೂಲದ ಪುರಂಧರ್ ಬಿಸರ(21), ಆಕಾಶ್ ನಾಯ್ಕ (24) ಎಂದು ಗುರುತಿಸಲಾಗಿದೆ. ಲಾಲಿಂದರ್ ದೃವ (41) ಗಂಭೀರ ಸ್ಥಿತಿಯಲ್ಲಿದ್ದು, ರಾಬುಲ್ ಎಂಬ ಕಾರ್ಮಿಕ ಹಾಗೂ ಇನ್ನೋರ್ವ ಕಾರ್ಮಿಕರು ಅಸ್ವಸ್ಥಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗೋಕರ್ಣದ ತದಡಿ ಬಂದರಿನಲ್ಲಿ ಭೀಕರ ದುರಂತ; ಬೋಟ್‌ನಲ್ಲಿ ಉಸಿರುಗಟ್ಟಿ ಮೂವರು ಮೀನುಗಾರರು ಸಾವು! ಮಲ್ಪೆ ಮೂಲದ ಕೃಷ್ಣ ಎಂಬವರಿಗೆ ಸೇರಿದ ಬೋಟ್ ಮೀನನ್ನು ಅನ್‌ಲೋಡ್ ಮಾಡಲು ಮುದಗಾ ಬಂದರಿಗೆ ಬಂದಿತ್ತು. ಈ ವೇಳೆ ಮೀನುಗಳನ್ನ ಬಂದರಿನಲ್ಲಿ ಇಳಿಸಿ ಐದು ಜನ ಕಾರ್ಮಿಕರು ಬೋಟಿನ ಒಳಗೆ ಸ್ವಚ್ಛ ಮಾಡಲು ತೆರಳಿದ್ದರು. ಈ ವೇಳೆ ಚಮನ್ ಮೀನಿನ ವಿಷಗಾಳಿ ಸೇವಿಸಿ ಐವರು ಕಾರ್ಮಿಕರು ಕುಸಿದು ಬಿದ್ದರು. ತಕ್ಷಣ ಮೂರನ್ನು ರಕ್ಷಿಸಿದರೂ ಇಬ್ಬರು ಬೋಟಿನಲ್ಲಿಯೇ ಮೃತಪಟ್ಟಿದ್ದಾರೆ.

ವಿವರಣೆ ಕೋರಿ ಶಾಸಕರಿಗೆ ನೋಟಿಸ್ ಜಾರಿ ಮಾಡಿದ JDS

• **ಉದಯವಾಹಿನಿ, ಹಾಸನ :**

ಜೆಡಿ(ಎಸ್) ಶಾಸಕ ಸ್ವರೂಪ್ ಪ್ರಕಾಶ್ ಅವರ ವಿರುದ್ಧ ಖಾಸಗಿ ಟಿವಿ ವಾಹಿನಿಯೊಂದರ 'ಸ್ಟಿಂಗ್ ಆಪರೇಷನ್' (ರಹಸ್ಯ ಕಾರ್ಯಾಚರಣೆ) ವಿಡಿಯೋವೊಂದು ಹರಿದಾಡುತ್ತಿದ್ದು ಕಮಿಷನ್ ಆರೋಪಗಳಿಗೆ ಎಡೆಮಾಡಿ ಕೊಟ್ಟಿದೆ. ಸಾರ್ವಜನಿಕ ಕಾಮಗಾರಿ ಗುತ್ತಿಗೆಗೆ ಸಂಬಂಧಿಸಿದ ಈ ಆರೋಪದ ಹಿನ್ನೆಲೆಯಲ್ಲಿ, ಪಕ್ಷದ ನಾಯಕತ್ವವು ಶಾಸಕರಿಗೆ ನೋಟಿಸ್ ಜಾರಿ ಮಾಡಿದೆ. ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದ ಈ ವಿಡಿಯೋದಲ್ಲಿ, ಶಾಸಕರು ಮತ್ತು ಗುತ್ತಿಗೆದಾರರ ನಡುವೆ ಕಾಮಗಾರಿ ಗುತ್ತಿಗೆಗೆ ಸಂಬಂಧಿಸಿದ ಕಮಿಷನ್ ಕುರಿತು ಚರ್ಚೆ ನಡೆಯುತ್ತಿರುವುದು ಕಂಡುಬರುತ್ತದೆ. ಪತ್ರಿಕೆಯೊಂದರ ವರದಿಯ ಪ್ರಕಾರ, ಸ್ವರೂಪ್ ಪ್ರಕಾಶ್ ಎಂದು ಗುರುತಿಸಲಾದ ವ್ಯಕ್ತಿಯು ಶೇ. 8ರಷ್ಟು ಕಮಿಷನ್ ಕೇಳಿದರೆ, ಗುತ್ತಿಗೆದಾರರು ಶೇ. 5ರಷ್ಟು ನೀಡುವುದಾಗಿ ಹೇಳುತ್ತಾರೆ. ಇದಕ್ಕೆ ಶಾಸಕರು ಒಪ್ಪಿಗೆ ಸೂಚಿಸಿರುವುದು ವಿಡಿಯೋದಲ್ಲಿ ಕಾಣಿಸುತ್ತದೆ.

ಈ ಸ್ಟಿಂಗ್ ಆಪರೇಷನ್ ದೃಶ್ಯಾವಳಿಯಲ್ಲಿ, ಶಾಸಕರೆಂದು ಗುರುತಿಸಲಾದ ವ್ಯಕ್ತಿಯು ಹಣವನ್ನು ಸ್ವೀಕರಿಸುತ್ತಿರುವುದು ಕೂಡ ಸೆರೆಯಾಗಿದೆ ಎಂದು ಹೇಳಲಾಗಿದೆ. ಈ ವಿಡಿಯೋ ಸ್ವರೂಪ್ ಪ್ರಕಾಶ್ ಅವರಿಗೆ ಸಂಬಂಧಿಸಿದ್ದು ಎಂದು ವರದಿಯಾಗಿದ್ದರೂ, ದೃಶ್ಯಾವಳಿಯ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳಲಾಗಿಲ್ಲ. ಅಲ್ಲದೆ, ಈ ಕಾಮಗಾರಿ ಗುತ್ತಿಗೆಯ ಮೌಲ್ಯ, ಸಂಬಂಧಪಟ್ಟ ಇಲಾಖೆ ಅಥವಾ ಸ್ಥಳದ ಬಗ್ಗೆ ಯಾವುದೇ ವಿವರಗಳು ಲಭ್ಯವಿಲ್ಲ. ಈ ವಿಡಿಯೋ ಹರಿದಾಡುತ್ತಿರುವ ಹಿನ್ನೆಲೆಯಲ್ಲಿ ಜೆಡಿ(ಎಸ್) ಪಕ್ಷವು ಕ್ರಮಕ್ಕೆ ಮುಂದಾಗಿದೆ. ಜೆಡಿ(ಎಸ್) ನಾಯಕ ಹಾಗೂ ಕರ್ನಾಟಕ ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಅವರು, ಕಮಿಷನ್ ಆರೋಪಗಳಿಗೆ ಸಂಬಂಧಿಸಿದಂತೆ ಸ್ವರೂಪ್ ಪ್ರಕಾಶ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಪೋಕ್ಸೊ ಕಾಯ್ದೆ

• **ಉದಯವಾಹಿನಿ, ಬೀದರ್:**

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಯುವುದಕ್ಕಾಗಿಯೇ ಪೋಕ್ಸೊ ಕಾಯ್ದೆ ಜಾರಿಗೆ ತರಲಾಗಿದೆ ಎಂದು ಪ್ರಧಾನ ಮತ್ತು ಜೆಎಂಎಫ್‌ಸಿ 2 ನ್ಯಾಯಾಧೀಶ ದೇಶಭೂಷಣ ಕೌಜಲಗಿ ಹೇಳಿದರು.

ಚಿದಂಬರ ಶಿಕ್ಷಣ ಸಂಸ್ಥೆಯ ಸಂಚಾಲಿತ ನಗರದ ಶ್ರೀಮತಿ ಇಂದಿರಾಬಾಯಿ ಗುರುತಪ್ಪ ಶೆಟಕಾರ್ ಪ್ರೌಢಶಾಲೆಯಲ್ಲಿ ಸುರಕ್ಷಿತ ಬಾಲ್ಯ ಅಭಿಯಾನ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಕಾನೂನು ಅರಿವು- ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳು ತಮ್ಮ ಮೇಲೆ ಯಾವುದೇ ರೀತಿಯ ದೌರ್ಜನ್ಯ ನಡೆದಲ್ಲಿ ಕೂಡಲೇ ದೂರು ದಾಖಲಿಸಬೇಕು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡಲು ನೆರವಾಗಲಿದೆ ಎಂದು ತಿಳಿಸಿದರು. ಅನೇಕ ಸಂದರ್ಭಗಳಲ್ಲಿ ಅನ್ಯಾಯಕ್ಕೆ ಒಳಗಾದವರು ದೂರು ದಾಖಲಿಸಲು ಹಿಂದೇಟು ಹಾಕುವುದರಿಂದಲೇ ಅಪರಾಧಿಗಳು ನಿರ್ಭೀತಿಯಿಂದ ಓಡಾಡುತ್ತಾರೆ ಎಂದು ಹೇಳಿದರು.

ವಕೀಲ ಬಿ.ಎಸ್. ಪಾಟೀಲ ಮಾತನಾಡಿ, ವಿದ್ಯಾರ್ಥಿಗಳು ಧೈರ್ಯವಂತರಾಗಬೇಕು. ಜೀವನದಲ್ಲಿ ಶಿಸ್ತು ಸಮಯ ಪ್ರಜ್ಞೆ ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.ಶಾಲೆಯ ಮುಖ್ಯ ಶಿಕ್ಷಕ ಲಕ್ಷ್ಮಣ ಪೂಜಾರಿ ಮಾತನಾಡಿ, ಮಕ್ಕಳು ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಮಕ್ಕಳ ಸುರಕ್ಷತೆ ಪ್ರತಿಯೊಬ್ಬರ ಜವಾಬ್ದಾರಿ

• **ಉದಯವಾಹಿನಿ, ಬೀದರ್ :**

ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಸುರಕ್ಷಿತ ಬಾಲ್ಯ ನಿರ್ಮಾಣಕ್ಕೆ ಸಮಾಜದ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಮಕ್ಕಳು ಯಾವುದೇ ರೀತಿಯ ದೌರ್ಜನ್ಯ, ಶೋಷಣೆ ಅಥವಾ ಅನ್ಯಾಯಕ್ಕೆ ಒಳಗಾದಾಗ ಭಯಪಡದೆ ಸಂಬಂಧಪಟ್ಟವರಿಗೆ ಮಾಹಿತಿ ನೀಡಬೇಕು ಎಂದು ಜೆಎಂಎಫ್‌ಸಿ ಎರಡನೇ ನ್ಯಾಯಾಲಯದ ನ್ಯಾಯಾಧೀಶ ದೇಶಭೂಷಣ ಕೌಜಲಗಿ ಹೇಳಿದರು.ನಗರದ ವಿದ್ಯಾಶ್ರೀ ಮಾದರಿ ಪ್ರಾಥಮಿಕ ಶಾಲೆ ಮತ್ತು ವಿದ್ಯಾನಿಧಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಆಯೋಜಿಸಿದ್ದ ಸುರಕ್ಷಿತ ಬಾಲ್ಯ ಅಭಿಯಾನದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಜಾರಿಯಲ್ಲಿರುವ ಪೋಕ್ಸೊ ಕಾಯ್ದೆಯ ಕುರಿತು ಪ್ರತಿಯೊಬ್ಬರೂ ಅರಿವು ಹೊಂದಿರಬೇಕು. ಮಕ್ಕಳಿಗೆ ತಮ್ಮ ಹಕ್ಕುಗಳು, ಸುರಕ್ಷತೆ ಹಾಗೂ ಕಾನೂನು ರಕ್ಷಣೆಯ ಕುರಿತು ತಿಳಿವಳಿಕೆ ನೀಡುವುದು ಅಗತ್ಯ. ಮಕ್ಕಳು ತಮಗೆ ಎದುರಾಗುವ ಸಮಸ್ಯೆಗಳನ್ನು ಮುಕ್ತವಾಗಿ ಪೋಷಕರು ಮತ್ತು ಶಿಕ್ಷಕರೊಂದಿಗೆ ಹಂಚಿಕೊಳ್ಳಬೇಕು. ಮಕ್ಕಳಿಗೆ ನ್ಯಾಯ ದೊರಕಿಸಲು ಕಾನೂನು ಸೇವಾ ಪ್ರಾಧಿಕಾರದಿಂದ ಲಭ್ಯವಿರುವ ನೆರವಿನ ಬಗ್ಗೆಯೂ ಅರಿವು ಮೂಡಿಸಬೇಕು ಎಂದರು.

ನೀರು ನಿರ್ವಹಣೆ ಮೇವು ಕುರಿತು ಅಧಿಕಾರಿಗಳು ಕುಂಟ್ಟುನೇಪ ಹೇಳದೆ ಜನರಿಗೆ ಅನುಕೂಲ ಕಲ್ಪಿಸಿ

ಪಟ್ಟಣದ ಪ್ರಜಾಸೌಧ ಕಾರ್ಯಾಲಯಲ್ಲಿ ನೀರು ನಿರ್ವಹಣೆ ಮೇವು,ವಿದ್ಯುತ್ ಅಭಾವ ಕುರಿತು ತಾಲ್ಲೂಕಾ ಮಟ್ಟದ ಅಧಿಕಾರಿಗಳ ಸಭೆ

• **ಉದಯವಾಹಿನಿ,ಚಿಂಚೋಳಿ:**

ಪಟ್ಟಣ ಸೇರಿದಂತೆ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ಕುಡಿಯುವ ನೀರು,ಧನಕರುಗಳಿಗೆ ಮೇವು ನೀರಿನ ತೊಂದರೆಯಾಗದಂತೆ ಅಧಿಕಾರಿಗಳು ಅನುದಾನದ ಕುಂಟ್ಟುನೇಪ ಹೇಳದೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ಶಾಸಕ ಡಾ.ಅವಿನಾಶ ಜಾಧವ ಸೂಚಿಸಿದರು.

ಪಟ್ಟಣದ ಪ್ರಜಾಸೌಧ ಕಾರ್ಯಾಲಯಲ್ಲಿ ನೀರು ನಿರ್ವಹಣೆ ಮೇವು,ವಿದ್ಯುತ್ ಅಭಾವ ಕುರಿತು ತಾಲ್ಲೂಕಾ ಮಟ್ಟದ ಅಧಿಕಾರಿಗಳ ಸಭೆ ಹಮ್ಮಿಕೊಂಡು ಮಾತನಾಡಿದ ಅವರು,ಈಗಾಗಲೇ ಗ್ರಾಮ ಮತ್ತು ತಾಂಡಾಗಳಲ್ಲಿ ಕುಡಿಯುವ ನೀರಿನ ಸಮಸ್ಯೆವುಳ್ಳ ಗ್ರಾಮ ತಾಂಡಾಗಳಿಗೆ ತಾಪಂ.ಇಓ ಹಾಗೂ ಪಿಡಿಓಗಳು,ಕುಡಿಯುವ ನೀರು ಸರಬರಾಜು ಇಲಾಖೆ ಅಧಿಕಾರಿಗಳು ಭೇಟಿನೀಡಿ ತಕ್ಷಣವೇ ಪರಿಹರಿಸಬೇಕೆಂದು ಖಡಕ್ಕಾಗಿ ಹೇಳಿದರು.

ಅನುದಾನ ಕೊರತೆ ಬಗ್ಗೆ ಅಧಿಕಾರಿಗಳು ಜನಸಾಮಾನ್ಯರಿಗೆ ಹೇಳದೆ ಸಂಬಂಧಪಟ್ಟ ಮೇಲಾಧಿಕಾರಿಗಳ ಗಮನಕ್ಕೆ ತರಬೇಕು ತಾಪಂ.ಇಓ,ಹಾಗೂ ತಹಸೀಲ್ದಾರ್ ಮತ್ತು ಜಿಪಂ. ಸಿಇಓ ಹೇಡ್ ಗಳಲ್ಲಿ ಅನುದಾನವಿರುತ್ತೆ ಕುಡಿಯುವ ನೀರು ಸರಬರಾಜು ಇಲಾಖೆಯ ಗಮನಹರಿಸಿ ಸಂಬಂಧ ಪಟ್ಟ ಅಧಿಕಾರಿಗಳಿಂದ ತಕ್ಷಣವೇ ಸಮಸ್ಯೆ ಪರಿಹರಿಸಬಹುದು ಎಂದರು.ಚಂದ್ರಂಪಳ್ಳಿ ಜಲಾಶಯ ಎಇಇ ಚೇತನ ಕಳಸ್ಕರ ಅವರು ಸತತವಾಗಿ ಸಭೆಗಳಿಗೆ ಗೈರುಯಾಗುತ್ತಿದ್ದು ಅಂಥಹ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ತಹಶೀಲ್ದಾರ್ ಅವರಿಗೆ ಶಾಸಕ ಡಾ.ಅವಿನಾಶ ಜಾಧವ ಸೂಚಿಸಿದರು.

ಚಂದ್ರಂಪಳ್ಳಿ ಜಲಾಶಯ ಅಧಿಕಾರಿ ಜೆಇ ಮಾತನಾಡಿ 66.06 ಪ್ರತಿ ಶತಃದಷ್ಟು ಚಂದ್ರಂಪಳ್ಳಿ ಜಲಾಶಯದಲ್ಲಿ ನೀರಿನ ಸಂಗ್ರಹವಿದೆ,15 ದಿನಕೊಮ್ಮೆ 100ಕ್ಯೂಸೇಕ್ ನೀರು ಬಿಟ್ಟರೆ ಇನ್ನು ಜಲಾಶಯದಲ್ಲಿ 36ಪ್ರತಿಶತಃದಷ್ಟು ನೀರು ಸಂಗ್ರಹವಿರುತ್ತೆ ಎಂದರು.

ಶಾಸಕ ಡಾ.ಅವಿನಾಶ ಜಾಧವ ಮಾತನಾಡಿ ವಿದ್ಯುತ್ ಸಂಪರ್ಕ ಬಹಳಷ್ಟು



ಉದಯವಾಹಿನಿ ಚಿತ್ರ

ಚಂದ್ರಂಪಳ್ಳಿ ಮತ್ತು ನಾಗರಾಳ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕುರಿತು ಸಂಬಂಧಪಟ್ಟ ನಾಗರಾಳ ಜಲಾಶಯ ಈಗಾಗಲೇ ಜಲಾಶಯದಲ್ಲಿ 75ಪ್ರತಿಶತಃದಷ್ಟು ನೀರಿನ ಸಂಗ್ರಹವಿದೆ ಡಿಸೆಂಬರ್ ವರೆಗೆ 15ದಿನಕೊಮ್ಮೆ 0.1ಟಿಎಂಸಿ ನೀರು ಬಿಟ್ಟರೆ ನಮ್ಮಲ್ಲಿ ಇನ್ನು ಸಾಕಷ್ಟು ನೀರು ಸಂಗ್ರಹವಿರುತ್ತದೆ ಎಂದು ಟಾಸ್ಕ್ ಫೋರ್ಸ್ ಸಭೆ ನಡೆಸಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದೇವೆ ಎಂದರು. -ಎಇಇ ಅಮೃತ ಪವ್ವಾರ

15ದಿನಕೊಮ್ಮೆ 100ಕ್ಯೂಸೇಕ್ ನೀರು ಬಿಟ್ಟರೆ ಒಳಿತು

ಕಡಿತಗೊಳಿಸಿ ರೈತರಿಗೆ ತೊಂದರೆ ಕೊಡುತ್ತಿದ್ದೀರಿ ಯಾತಕ್ಕಾಗಿ ಆಳಂದ ಸೇರಿ ಬೇರೆ ತಾಲ್ಲೂಕುಗಳಲ್ಲಿ ಪಂಪ್‌ಸೆಟ್ ಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಿಲ್ಲ ಚಿಂಚೋಳಿಯಲ್ಲಿ ಮಾತ್ರ ಕಡಿತಗೊಳಿಸಿ ಬಿಜೆಪಿ ಶಾಸಕವೆಂದು ಪಕ್ಷಪಾತ ನಡೆಸಿ ತಾರತಮ್ಯ ಮಾಡುತ್ತಿದ್ದೀರಾವೆಂದು ಜೇಸ್ಕಾಂ ಆಯುಕ್ತರಿಗೆ ಕರೆ ಮಾಡಿ ಸಿಡಿಮಿಡಿಗೊಂಡರು.

ಪಶು ಸಂಗೋಪನೆ ಅಧಿಕಾರಿ ಮಲ್ಲಿಕಾರ್ಜುನ ಮಾತನಾಡಿ

ಜೇಸ್ಕಾಂ ಈಗಾಗಲೇ ಮೇಲಾಧಿಕಾರಿಗಳ ಆದೇಶದಂತೆ ನದಿಯ ದಂಡೆಯಲ್ಲಿರುವ ಪಂಪ್‌ಸೆಟ್ ಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಆದೇಶ ಹೊರಡಿಸಿದ್ದು ಆದೇಶ ಪಾಲನೆ ವಮಾಡಲಾಗುತ್ತಿದೆ ಎಂದರು, -ಎಇಇ ಕಾಮಣ್ಣ ಇಂಜೇಳಿ

ಮೇವು ಕೊರತೆ ಉಂಟಾಗುವ ಸಾಧ್ಯತೆಯಿದ್ದು ಈಗಾಗಲೇ 50ಏಕರೆ ಜಮೀನಿನಲ್ಲಿ ಮೇವು ಬೆಳೆಸಲು ಆದೇಶವಿದ್ದು ಅದರಂತೆ ಸರ್ವೆ ನಂ.51ಮತ್ತು 56ರಲ್ಲಿ ಮೇವು ಬೆಳೆಸಲು ನಿರ್ಧಾರಕ್ಕೆಗೊಂಡಿದ್ದು ವಿಬಿಜಿ ರಾಮ್ ಜೀ ಯೋಜನೆಯಲ್ಲಿ ಹಾಗೂ ಸರ್ಕಾರಿ ಜಮೀನುಗಳಲ್ಲಿ ಮತ್ತು ಗೋಮಾಳದಲ್ಲಿ ಮೇವು ಬೆಳೆಸಲು ಅನುಮತಿಯಿದೆ ಅದರಂತೆ ದಸ್ತಾಪೂರ,ರೇಣುಕಾ,ಯಾಕಾಪೂರ ಗೋಮಾಳಗಳಲ್ಲಿ ಮೇವು ಬೆಳೆಸಲು ಅನುಮತಿ ನೀಡಿದ್ದೇವೆ ಎಂದು ಸಭೆಗೆ ಮಾಹಿತಿ ನೀಡಿದರು.

ಸಣ್ಣ ನೀರಾವರಿ ಯೋಜನೆ ಎಇಇ ಶಿವಾಜಿ ಜಾಧವ ಮಾತನಾಡಿ ಸಣ್ಣ ನೀರಾವರಿ ಯೋಜನೆಯಲ್ಲಿ 21ಕೆರೆಗಳಿವೆ ಅದರಲ್ಲಿ ಐನಾಪೂರ,ಹುಲ್ಸಗೂಡ,ಸಾಲೆಬೀರನಳ್ಳಿ ಕೆರೆಗಳಲ್ಲಿ ನೀರಿವೆ,ಉಳಿದ ಕೆರೆಗಳಲ್ಲಿ ನೀರಿಲ್ಲವೆಂದು ಸಭೆಗೆ ಮಾಹಿತಿ ನೀಡಿದರು.ತಾಲ್ಲೂಕಾ ಮಟ್ಟದ ಅಧಿಕಾರಿಗಳು ಆಯಾ ಇಲಾಖಾ ವರದಿ ವಾಚನ ಮಾಡಿದರು.ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ, ತಾಪಂ ಇಓ ಸಂತೋಷ ಚವ್ಹಾಣ,ಸಿಪಿಐ ಕಪೀಲದೇವ ವೇದಿಕೆಯಲ್ಲಿದ್ದರು.

ಮುಖ್ಯಾಧಿಕಾರಿ ವಿಜಯ ಮಹಾಂತೇಶ,ಪಿಆರ್.ಇ ಪ್ರವೀಣಕುಮಾರ,ತೋಟಗಾರಿಕೆ ಸಂತೋಷ ತಾಂಡೂರ,ಕುಡಿಯುವ ನೀರು ಸರಬರಾಜು ಇಲಾಖೆ ಎಇಇ ಉಮೇಶ ರಾಠೋಡ್,ಜೆಇ ಯುವರಾಜ ರಾಠೋಡ್,ಅರಣ್ಯ ಸಂಜುಕುಮಾರ ಚವ್ಹಾಣ,ಟಿಹೆಚ್‌ಓ ಡಾ.ದೀಪಕ ರಾಠೋಡ್,ಸೇರಿದಂತೆ ಪಿಡಿಓಗಳು ಪವನಕುಮಾರ ಮೇತ್ರಿ,ಸಂಗಮೇಶ,ವಿನೋಧ ಚವ್ಹಾಣ,ವಿಜಯಲಕ್ಷ್ಮಿ,ಪ್ರತೀಕ್ಷ ರಾಠೋಡ್, ಸೇರಿದಂತೆ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಸಿಬ್ಬಂದಿ ವರ್ಗದವರು ಇದ್ದರು.

ದಿನ ಭವಿಷ್ಯ

ರಾಹುಕಾಲ	ಸಂಜೆ	04:30 ರಿಂದ 06:00
ಗುಳಿಕ ಕಾಲ	ಮಧ್ಯಾಹ್ನ	03:00 ರಿಂದ 04:30
ಯಮಗಂಡ ಕಾಲ	ಮಧ್ಯಾಹ್ನ	12:00 ರಿಂದ 01:30

ಮೇಷ ನಿಮ್ಮ ಭಾವನೆಗಳನ್ನು ನಿಯಂತ್ರಿಸಲು ನಿಮಗೆ ಕಷ್ಟವಾಗಬಹುದು ನಿಮ್ಮ ಅಸಾಮಾನ್ಯ ವರ್ತನೆ ನಿಮ್ಮ ಸುತ್ತಲಿನ ಜನರನ್ನು ಗೊಂದಲದಲ್ಲಿ ಕೆಡವಬಹುದು ಮತ್ತು ನಿಮ್ಮನ್ನು ನಿರಾಸೆಗೊಳಿಸಬಹುದು. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಇಂದು ನೀವು ಸಾಲ ಪಡೆಯಬಹುದು.

ವೃಷಭ ಮನೆಯಲ್ಲಿ ಒತ್ತಡ ನಿಮಗೆ ಸಿಟ್ಟು ತರಿಸಬಹುದು. ಅವುಗಳನ್ನು ದಮನಗೊಳಿಸುವುದು ಕೇವಲ ದೈಹಿಕ ಸಮಸ್ಯೆಯನ್ನು ಹೆಚ್ಚಿಸುತ್ತದೆ. ದೈಹಿಕ ಚಟುವಟಿಕೆಯೊಂದಿಗೆ ಇದನ್ನು ತೊಡೆದುಹಾಕಿ. ಕಿರಿಕಿರಿಯುಂಟುಮಾಡುವ ಪರಿಸ್ಥಿತಿಯಿಂದ ಹೊರಬರುವುದು ಉತ್ತಮ.

ಮಿಥುನ ಜಗಳಗಂಟ ವ್ಯಕ್ತಿಯೊಂದಿಗಿನ ನಿಮ್ಮ ವಾದ ನಿಮ್ಮ ಮೂಡ್ ಅನ್ನು ಹಾಳು ಮಾಡಬಹುದು. ಬುದ್ಧಿವಂತಿಕೆ ತೋರಿಸಿ ಮತ್ತು ಸಾಧ್ಯವಾದರೆ ವೈಷಮ್ಯಗಳನ್ನು ತಪ್ಪಿಸಿ, ಏಕೆಂದರೆ ಜಗಳಗಳು ಹಾಗೂ ವೈಷಮ್ಯಗಳು ಯಾವತ್ತೂ ನಿಮಗೆ ಸಹಾಯ ಮಾಡುವುದಿಲ್ಲ. ನಿಮ್ಮ ಆಪ್ತರೊಂದಿಗೆ ಜಗಳವಾಗಬಹುದು.

ಕಟಕ ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ಇಂದು ನೀವು ಸ್ನೇಹಿತರೊಂದಿಗೆ ಪಾರ್ಟಿಯಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಬಹುದು ಆದರೆ ಇದರ ಹೊರತಾಗಿಯೂ ನಿಮ್ಮ ಆರ್ಥಿಕ ಭಾಗವು ಬಲವಾಗಿರುತ್ತದೆ

ಸಿಂಹ ನಿಮ್ಮ ಚೈತನ್ಯವನ್ನು ಹೆಚ್ಚಿಸಲು ನಿಮ್ಮ ಮನಸ್ಸಿನಲ್ಲಿ ಒಂದು ಪ್ರಕಾಶಮಾನವಾದ ಸುಂದರವಾದ ಮತ್ತು ಅದ್ಭುತವಾದ ಚಿತ್ರವನ್ನು ಕಲ್ಪಿಸಿಕೊಳ್ಳಿ. ನಿಮ್ಮ ಯಾವುದೇ ಹಳೆಯ ಸ್ನೇಹಿತ ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು, ಈ ಸಲಹೆಯನ್ನು ಅನುಸರಿಸಿದರೆ, ಖಂಡಿತವಾಗಿಯೂ ಹಣವನ್ನು ಗಳಿಸುವಿರಿ.

ಕನ್ಯಾ ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ವಿವಾಹಿತ ಜನರು ಇಂದು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನಿಮ್ಮ ಮನಸ್ಸಿನಲ್ಲಿ ಒತ್ತಡವಿದ್ದಲ್ಲಿ – ನಿಮ್ಮ ಸಂಬಂಧಿಕರು ಅಥವಾ ಆಪ್ತ ಸ್ನೇಹಿತರೊಡನೆ ಮಾತನಾಡಿ –ಇದು ನಿಮ್ಮ ತಲೆಯ ಹೊರೆಯನ್ನು ಕಡಿಮೆ ಮಾಡುತ್ತದೆ.

ತುಲಾ ಇಂದು ನಿಮಗೆ ತುಂಬ ಉನ್ನತ ಶಕ್ತಿಯಿರುವ ದಿನ ಮತ್ತು ನೀವು ಸಣ್ಣ ವಿಷಯಗಳಿಗೂ ಕಿರಿಕಿರಿಗೊಳ್ಳುತ್ತೀರಿ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು ಮತ್ತು ನೀವು ಹಣದ ಲಾಭವನ್ನು ಪಡೆಯಬಹುದು.

ವೃಶ್ಚಿಕ ನೀವು ಕೆಲವು ಉನ್ನತ ವ್ಯಕ್ತಿಗಳನ್ನು ಭೇಟಿಯಾಗುಬಹುದಾದ್ದರಿಂದ ಗಾಬರಿಯಾಗಬೇಡಿ ವಿಶ್ವಾಸ ಕಳೆದುಕೊಳ್ಳದಿರಿ. ಇದು ವ್ಯಾಪಾರಕ್ಕೆ ಬಂಡವಾಳದಂತೆ ಉತ್ತಮ ಆರೋಗ್ಯಕ್ಕೆ ಅಗತ್ಯವಾಗಿದೆ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ.

ಧನಸ್ಸು ನಿಮ್ಮ ಒತ್ತಡವನ್ನು ನೀವು ತೊಡೆದುಹಾಕಬಹುದು. ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದರೂ ಹಣದ ಹೊರಹರಿವು ನಿಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ತೊಂದರೆಯುಂಟುಮಾಡುತ್ತದೆ. ಅಗತ್ಯವಿದ್ದರೆ ಸ್ನೇಹಿತರು ನಿಮ್ಮ ನೆರವಿಗೆ ಬರುತ್ತಾರೆ. ಅನಿರೀಕ್ಷಿತ ಪ್ರಣಯ ಭಾವ.

ಮಕರ ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ. ನೀವು ವಿಧ್ಯಾರ್ಥಿಯಾಗಿದ್ದರೆ ವಿದೇಶಕ್ಕೆ ಹೋಗಿ ಅಧ್ಯಯನ ಮಾಡಲು ಬಯಸುತ್ತಿದ್ದರೆ ಆರ್ಥಿಕ ಬಿಕ್ಕಟ್ಟು ನಿಮ್ಮ ಹಣೆಯ ಮೇಲೆ ಸುಕ್ಕು ತರಬಹುದು.

ಕುಂಭ ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ನೀವು ನಿಮ್ಮ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣ ವ್ಯಕ್ತಿಗಳಿಗೆ ನಿಮ್ಮ ವಾದವನ್ನು ಮಂಡಿಸುವಲ್ಲಿ ತೊಂದರೆ ಹೊಂದಿರುತ್ತೀರಿ. ನಿಮ್ಮ ಪ್ರೀತಿಪಾತ್ರರೊಡನೆ ಪ್ರಯಾಣಕ್ಕೆ ಹೋಗುವ ಮೂಲಕ ನಿಮ್ಮ ಅಮೂಲ್ಯ ಕ್ಷಣಗಳನ್ನು ಪುನಃ ಜೀವಿಸಿ.

ಮೀನ ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ನಿಮ್ಮ ಮನೆಯ ಪರಿಸ್ಥಿತಿ ಸ್ವಲ್ಪ ಅನಿರೀಕ್ಷಿತವಾಗಿರುತ್ತದೆ.

ಮೂವರಿಗೆ ರಾಜ್ಯೋತ್ಸವ ಗರಿ: ಅಲ್ಲಮಪ್ರಭು ಪಾಟೀಲ ಸಂತಸ

• **ಉದಯವಾಹಿನಿ ಕಲಬುರಗಿ,:**

ಈ ಬಾರಿಯ ರಾಜ್ಯೋತ್ಸವ ಪುರಸ್ಕಾರಕ್ಕೆ ಕಲಬುರಗಿ ಜಿಲ್ಲೆಯ ಮೂವರು ಸಾಧಕರು ಆಯ್ಕೆಯಾಗಿರುವದು ತುಂಬ ಸಂತಸದ ವಿಷಯ ಎಂದು ಶಾಸಕ ಅಲ್ಲಮಪ್ರಭು ಪಾಟೀಲ್ ಹೇಳಿದ್ದಾರೆ. ಜೇವರ್ಗಿ ತಾಲ್ಲೂಕಿನ ಸೊನ್ನ ಮಠದ ಡಾ. ಶಿವಾನಂದ ಮಹಾಸ್ವಾಮಿಗಳು, ಶಿಕ್ಷಣ ತಜ್ಞರಾದ ಡಾ. ಸಂಗೀತಾ ಕಟ್ಟೀಮನಿ, ಡಾ. ರಾಜಾಸಾಹೇಬ ಅವರಿಗೆ ಆಯ್ಕೆ ಮಾಡಿ ಗೌರವಿಸುತ್ತಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಕಲಬುರಗಿ ದಕ್ಷಿಣ ಶಾಸಕರಾದ ಅಲ್ಲಂಪ್ರಭು ಪಾಟೀಲ್ ಸ್ವಾಗತಿಸಿದ್ದು ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದಿಸಿದ್ದಾರೆ.

ಡಾ. ಶಿವಾನಂದ ಸ್ವಾಮಿಗಳು ಸ್ವಾಮಿಗಳಾಗಿ ಮಠದಲ್ಲಿರದೆ ಸದಾಕಾಲ ಸಮಾಜಮುಖಿಯಾಗಿ ಕೆಲಸ ಮಾಡಿದವರು ಕಳೆದ 3 ದಶಕದ ಹಿದೆಯೇ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಅವರ ನೆರವಿನಿಂದ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಸ್ಥಾಪಿಸಿ ಕೆಲಸ ಮಾಡುತ್ತ ಹೊರಟವರು. ಅವರ ಬಡವರ, ದೀನರ ನಿರಂತರ ಸೇವೆಗೆ ರಾಜ್ಯೋತ್ಸವ ಪುರಸ್ಕಾರ ದೊರಕಿರೋದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ ಎಂದಿದ್ದಾರೆ. ಇನ್ನು ಜಿಲ್ಲೆಯವರೇ ಆಗಿರುವ ಪೊರ. ಗೋವಿಂದರಾವ ಕಮೀಟಿಯಲ್ಲಿದ್ದು ಅನೇಕ ವಿಷಯಗಳ ಅಮೂಲ್ಯ ಅಧ್ಯಯನ, ಸಂಶೋಧನೆ ಮಾಡುತ್ತಿರುವ ಡಾ. ಸಂಗೀತಾ ಕಟ್ಟೀಮನಿ, ವಿಜ್ಞಾನಿ ರಾಜಾ ಸಾಹೇಬ ಅವರಿಗೂ ರಾಜ್ಯೋತ್ಸವ ಪುರಸ್ಕಾರ ದೊರಕಿರುವದು ಜಿಲ್ಗೆ ಹೆಮ್ಮೆಯ ಸಂಗತಿ. ಎಲ್ಲರಿಗೂ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಶಾಸಕ ಅಲ್ಲಮಪ್ರಭು ಪಾಟೀಲ ತಿಳಿಸಿದ್ದಾರೆ.

ಅಂಬಾದೇವಿಗೆ ವಿಶೇಷ ಪೂಜೆ ಸಲ್ಲಿಸಿದ ಡಾ.ಅಜಯಸಿಂಗ್

• **ಉದಯವಾಹಿನಿ, ಕಲಬುರಗಿ,:**

ಸಿಂಧನೂರು ತಾಲ್ಲೂಕಿನ ಸುಕ್ಷೇತ್ರ ಅಂಬಾಮಠ ಸೋಮಲಾಪುರ ಶ್ರೀ ಅಂಬಾದೇವಿಯ ದೇವಸ್ಥಾನದ ನೂತನ ಶಿಲಾ ಮಂಟಪ ಲೋಕಾರ್ಪಣೆ ಮತ್ತು ಅಂಬಾದೇವಿಯ ಮೂರ್ತಿ ಪ್ರತಿಷ್ಠಾಪನ ಸಮಾರಂಭದಲ್ಲಿ ರಾಜ್ಯದ ಸಣ್ಣ ನೀರಾವರಿ, ವಿಜ್ಞಾನ, ತಂತ್ರಜ್ಞಾನ ಖಾತೆ ಸಚಿವರಾದ ಡಾ. ಅಜಯ್ ಸಿಂಗ್ ಅವರು ಭಾಗವಹಿಸಿ, ದೇವಿಯ ದರ್ಶನ ಪಡೆದು ಪೂಜೆ ವಿಶೇಷ ಪೂಜೆ ಸಲ್ಲಿಸಿದರು.

ಶ್ರೀ ಅಂಬಾದೇವಿಯ ಕೃಪಾಶೀರ್ವಾದ ನಾಡಿನ ಸಮಸ್ತ ಜನತೆಗೆ ಲಭಿಸಲಿ. ನಾಡಿನಲ್ಲಿ ಸುಖ, ಶಾಂತಿ, ಸಮೃದ್ಧಿ ನೆಲೆಸಲಿ ಹಾಗೂ ಎಲ್ಲರ ಬದುಕಿನಲ್ಲಿ ನೆಮ್ಮದಿ ಮತ್ತು ಸಂತೋಷ ತುಂಬಿರಲಿ ಎಂದು ತಾವು ದೇವಿಯ ಸನ್ನಿಧಿಯಲ್ಲಿ ವಿಶೇಷವಾಗಿ ಲೋಕ ಕಲ್ಯಾಣಕ್ಕಾಗಿ ಪ್ರರ್ಥನೆ ಸಲ್ಲಿಸಿರೋದಾಗಿ ಸಚಿವರಾದ ಡಾ. ಅಜಯ್ ಸಿಂಗ್ ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಶಾಸಕರಾದ ಹಂಪನಗೌಡ ಬಾದರ್ಲಿ, ಬಸನಗೌಡ ತುರುವಿಹಾಳ, ಬಸವನಗೌಡ ಬಾದರ್ಲಿ, ಸೇರಿದಂತೆ ಗಣ್ಯ ಮಾನ್ಯರು , ಸಮಸ್ತ ಭಕ್ತಾದಿಗಳು ಉಪಸ್ಥಿತರಿದ್ದರು

ಪಶುವೈದ್ಯಕೀಯ ವಿವಿ ಉಪ ಕುಲಪತಿ, ಕುಲಸಚಿವರಿಗೆ ನೋಟಿಸ್ ಜಾರಿ

• **ಉದಯವಾಹಿನಿ, ಬೀದರ್:**

ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಭಾರ ಉಪ ಕುಲಪತಿ ಡಾ.ಎ.ಟಿ ರಾಮಚಂದ್ರ ನಾಯಕ ಹಾಗೂ ಕುಲಸಚಿವ ಡಾ. ಪಿ.ಟಿ. ರಮೇಶ ಅವರಿಗೆ, ಮಾದರಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಅವಧಿಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ವರ್ಗಾವಣೆ ಮಾಡಿದ ಆರೋಪದ ಮೇಲೆ ರಾಜ್ಯ ಸರ್ಕಾರ ನೋಟಿಸ್ ಜಾರಿಗೊಳಿಸಿದೆ. ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಪಿ. ಅಶೋಕ ಅವರು ಅಕ್ಟೋಬರ್ 29ರಂದು ಈ ಸಂಬಂಧ ಪತ್ರ ಹೊರಡಿಸಿದ್ದಾರೆ. ಪತ್ರದ ಪ್ರಕಾರ, ಕರ್ನಾಟಕ ವಿಧಾನ ಪರಿಷತ್ತಿನ ನಾಲ್ಕು ಸದಸ್ಯರ ಸ್ಥಾನಗಳಿಗೆ ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 29ರಿಂದ ಅಕ್ಟೋಬರ್ 31ರ ವರೆಗೆ ಮಾದರಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ. ಅಕ್ಟೋಬರ್ 19ರಂದು ವಿಶ್ವವಿದ್ಯಾಲಯದ ಏಳು ಅಧಿಕಾರಿಗಳು/ಸಿಬ್ಬಂದಿಗಳ ವರ್ಗಾವಣೆಗೆ ಆದೇಶ ಹೊರಡಿಸಲಾಗಿದೆ ಎಂದು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ನೀತಿ ಸಂಹಿತೆ ಜಾರಿಯಲ್ಲಿರುವ ಸಂದರ್ಭದಲ್ಲಿ ತುರ್ತು ಅವಶ್ಯಕತೆ ಮತ್ತು ಸೂಕ್ತ ಅನುಮೋದನೆ ಇಲ್ಲದೆ ವರ್ಗಾವಣೆ ಆದೇಶ ಹೊರಡಿಸಿರುವುದು ಕರ್ತವ್ಯ ಲೋಪಕ್ಕೆ ಸಮಾನ ಎಂದು ಪತ್ರದಲ್ಲಿ ಹೇಳಲಾಗಿದೆ.

ಕಾಂಗ್ರೇಸ್ ಪ್ರಜಾಪ್ರಭುತ್ವದ ಹೆಸರಲ್ಲಿ ವೈಫಲ್ಯ ಮುಚ್ಚಿಕೊಳ್ಳಲು ಹೊರಟಿದೆ

ಕಾಂಗ್ರೇಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಾಲ್ಕು ಬಾರಿ ಹಾಲಿನ ಬೆಲೆ ಏರಿಕೆ ಮಾಡಿದ್ದು ಬಡವರಿಗೆ ಹೊರೆಯಾಗುತ್ತಿದೆ ಎಂದು ಟೀಕಿಸಿದರು.

• **ಉದಯವಾಹಿನಿ ಹುಬ್ಬಳ್ಳಿ:**

ಕಾಂಗ್ರೇಸ್ ಪಕ್ಷ ಚುನಾವಣೆಯಲ್ಲಿ ಸೋಲು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿಲ್ಲ. ಜನರ ತೀರ್ಪನ್ನು ಗೌರವಿಸುವ ಬದಲು ಚುನಾವಣಾ ಆಯೋಗದ ಮೇಲೆ ಆರೋಪ ಮಾಡುತ್ತಾ ಪ್ರಜಾಪ್ರಭುತ್ವ ಸಂಕಷ್ಟದಲ್ಲಿದೆ ಎಂದು ಜನರ ದಾರಿ ತಪ್ಪಿಸುತ್ತಿದೆ. ರಾಹುಲ್ ಗಾಂಧಿ ಅವರ ನಾಯಕತ್ವ ಬದಲಾವಣೆಯಾಗದಿದ್ದರೆ ಕಾಂಗ್ರೇಸ್ ಪಕ್ಷದ ಪರಿಸ್ಥಿತಿ ಸುಧಾರಿಸುವುದಿಲ್ಲ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದರು. ನಗರದಲ್ಲಿಂದು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು,

1 : 59ಕ್ಕೂ ಹೆಚ್ಚು ಚುನಾವಣೆಗಳಲ್ಲಿ ಸೋತಿದೆ
2 : ಇವಿಎಂ ಮೇಲೆ ಆರೋಪ ಮಾಡುತ್ತಿದೆ
3 : ಆಯೋಗವಾಗಲಿ ಎಸ್‌ಐಆರ್ ಕಾರಣವಲ್ಲ

ಬಿಜೆಪಿಯಿಂದ ದೇಶಾದ್ಯಂತ ಹಮ್ಮಿಕೊಂಡಿರುವ 'ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆ ಅಳಿಸಿ' ಅಭಿಯಾನದ ಉದ್ದೇಶವನ್ನು ವಿವರಿಸಿದರು. ಕಾಂಗ್ರೇಸ್ ಪಕ್ಷ 2012ರಿಂದ ಇಲ್ಲಿಯವರೆಗೆ 59ಕ್ಕೂ ಹೆಚ್ಚು ವಿಧಾನಸಭಾ ಚುನಾವಣೆಗಳಲ್ಲಿ ಸೋತಿದೆ. ಆದರೆ ತನ್ನ ಸೋಲಿಗೆ ಆತ್ಮಾವಲೋಕನ ಮಾಡಿಕೊಳ್ಳುವ ಬದಲು ಚುನಾವಣಾ ಆಯೋಗ, ಇವಿಎಂ ಹಾಗೂ ಎಸ್‌ಐಆರ್ ಮೇಲೆ ಆರೋಪ ಮಾಡುತ್ತಿದೆ. ಕೇರಳ, ತೆಲಂಗಾಣ ಮತ್ತು ಕರ್ನಾಟಕದಲ್ಲಿ ಕಾಂಗ್ರೇಸ್ ಗೆದ್ದಾಗ ಚುನಾವಣಾ ಆಯೋಗದ ಬಗ್ಗೆ ಯಾವುದೇ ಆಕ್ಷೇಪವಿಲ್ಲ. ಆದರೆ, ಅಧಿಕಾರ ಕಳೆದುಕೊಂಡ ರಾಜ್ಯಗಳಲ್ಲಿ ಮಾತ್ರ ಚುನಾವಣಾ


ಉದಯವಾಹಿನಿ ಚಿತ್ರ

ವಿಧಾನ ಪರಿಷತ್ ಚುನಾವಣೆಯಲ್ಲಿ ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆದಾಗ ಸೋಲಿನ ಬಗ್ಗೆ ಏನು ಹೇಳುತ್ತದೆ? ಕಾಂಗ್ರೇಸ್‌ಗೆ ಗೆಲುವಾದರೆ ಮಾತ್ರ ಚುನಾವಣೆ ಸರಿಯಾಗಿದೆ, ಸೋತರೆ ಅಕ್ರಮ ನಡೆದಿದೆ ಎಂಬ ಧೋರಣೆ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. -ಆರ್.ಅಶೋಕ್ ಆಕ್ರೋಶ

ವ್ಯವಸ್ಥೆಯ ಮೇಲೆ ಅನುಮಾನ ವ್ಯಕ್ತಪಡಿಸುತ್ತಿದೆ. ಕಾಂಗ್ರೇಸ್ ಸೋಲಿಗೆ ಚುನಾವಣಾ ಆಯೋಗವಾಗಲಿ, ಎಸ್‌ಐಆರ್ ಆಗಲಿ ಕಾರಣವಲ್ಲ ಪಕ್ಷದ ನಾಯಕತ್ವವೇ ಕಾರಣ ಎಂದು ಟೀಕಿಸಿದರು. ರಾಹುಲ್ ಗಾಂಧಿ ಅವರ ಮುಖ ಬದಲಾವಣೆಯಾಗದಿದ್ದರೆ ಕಾಂಗ್ರೇಸ್ ಪಕ್ಷದ ರಾಜಕೀಯ ಭವಿಷ್ಯ ಬದಲಾಗುವುದಿಲ್ಲ. ಜನರ ತೀರ್ಪನ್ನು ಒಪ್ಪಿಕೊಳ್ಳುವ ಬದಲು ನಿರಂತರವಾಗಿ ಚುನಾವಣಾ ವ್ಯವಸ್ಥೆಯನ್ನು ದೂಷಿಸುವುದು ಸರಿಯಲ್ಲ. ಮತದಾರರ ಪಟ್ಟಿಯಲ್ಲಿನ ನಕಲಿ ಮತದಾರರು, ಮೃತಪಟ್ಟವರ ಹೆಸರುಗಳು ಒಂದಕ್ಕಿಂತ ಹೆಚ್ಚು ಕಡೆ ನೋಂದಣಿಯಾಗಿರುವ ಮತದಾರರನ್ನು ಗುರುತಿಸಿ ತೆಗೆದುಹಾಕುವುದು ತಪ್ಪೇ? ಎಸ್ ಐಆರ್‌ನಲ್ಲಿ ಲೋಪಗಳಿದ್ದರೆ ತನಿಖೆಯಾಗಲಿ, ತಪ್ಪು ಮಾಡಿದವರು ಯಾರೇ ಆಗಿರಲಿ ಅವರ ವಿರುದ್ಧ ಕ್ರಮ ಕೈಗೊಳ್ಳಲಿ.

ಮತದಾರರ ಪಟ್ಟಿಗೆ ಹೆಸರು ಸೇರಿಸಲು ಈಗಲೂ ಅವಕಾಶವಿದೆ. ಬೆಂಗಳೂರಿನಲ್ಲಿ ವಿಧಾನ ಪರಿಷತ್ ಚುನಾವಣೆಯ ಮತದಾನ

ಇದೇ ವೇಳೆ, ಪೆಟ್ರೋಲ್ ಮತ್ತು ಡೀಸೆಲ್ ದರಗಳು ನಮ್ಮ ನೇರ ನಿಯಂತ್ರಣದಲ್ಲಿಲ್ಲ. ಪ್ರಸ್ತುತ ಯುದ್ಧದ ಪರಿಸ್ಥಿತಿಯೂ ಇದೆ. ಆದರೆ ರಾಜ್ಯ ಸರ್ಕಾರ ಜನಸಾಮಾನ್ಯರಿಗೆ ಹೊರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಪ್ರಮಾಣ ಶೇ.45ರ ಗಡಿ ದಾಟದಿರುವುದಕ್ಕೂ ಮತದಾರರ ಪಟ್ಟಿಯಲ್ಲಿನ ಸಮಸ್ಯೆಗಳು ಕಾರಣವಾಗಿವೆ ಎಂದು ಹೇಳಿದರು. ಕಾಂಗ್ರೇಸ್ ನಾಯಕರು ಬಾಂಗ್ಲಾದೇಶ ಮತ್ತು ನೇಪಾಳದ ಮಾದರಿಯಲ್ಲಿ ದೊಂಬಿ, ಗಲಭೆ ಸೃಷ್ಟಿಸುವ ಮಾತುಗಳನ್ನಾಡುವುದು ಅಪಾಯಕಾರಿ. ಪ್ರಜಾಪ್ರಭುತ್ವದಲ್ಲಿ ಹೋರಾಟ ಮಾಡುವ ಹಕ್ಕಿದೆ. ಆದರೆ ಹಿಂಸಾಚಾರಕ್ಕೆ ಪ್ರಚೋದನೆ ನೀಡುವುದು ಅಪರಾಧ. ದೇಶದ ಜನರು ಇಂತಹ ಬೆದರಿಕೆಗಳಿಗೆ ಜಗ್ಗುವುದಿಲ್ಲ. ಸಮಸ್ಯೆಗಳಿದ್ದರೆ ನ್ಯಾಯಾಲಯಗಳಿವೆ. ನ್ಯಾಯಾಂಗದ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಚುನಾವಣಾ ಆಯೋಗ, ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ ಹಾಗೂ ನ್ಯಾಯಾಲಯಗಳ ಮೇಲೆಯೇ ನಂಬಿಕೆ ಇಲ್ಲವೆಂದರೆ ಕಾಂಗ್ರೇಸ್‌ಗೆ ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇದೆಯೇ ಎಂದು ಅವರು ಪ್ರಶ್ನಿಸಿದರು.

ಕಾಂಗ್ರೇಸ್ ಪಕ್ಷ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಹೋರಾಟದ ನಾಟಕ ಮಾಡುತ್ತಿದೆ. ಪಕ್ಷದ ಸ್ಥಿತಿ ಐಸಿಯು ತಲುಪಿದೆ. ದೇಶಕ್ಕೆ ತುರ್ತು ಪರಿಸ್ಥಿತಿ ಹೇರಿದವರಿಂದ ಪ್ರಜಾಪ್ರಭುತ್ವದ ಪಾಠ ಕಲಿಯುವ ಅಗತ್ಯವಿಲ್ಲ. ಸಂವಿಧಾನ ಉಳಿಯಬೇಕು, ಜನರ ತೀರ್ಪು ಅಂತಿಮವಾಗಬೇಕು ಹಾಗೂ ದೇಶದ ಏಕತೆ ಮತ್ತು ಸಮಗ್ರತೆ ಕಾಪಾಡಬೇಕು ಎಂಬ ಉದ್ದೇಶದಿಂದ ಬಿಜೆಪಿ ಅಭಿಯಾನ ಆರಂಭಿಸಿದೆ ಎಂದರು.


ಅಂಗನವಾಡಿ ಸಹಾಯಕಿಯರ ಬೇಡಿಕೆಗಳಿಗೆ ಸ್ಪಂದಿಸಲು ಸಿದ್ಧ

• **ಉದಯವಾಹಿನಿ ಕಡೂರು:**

ಕ್ಷೇತ್ರದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ನ್ಯಾಯಯುತ ಬೇಡಿಕೆಗಳತ್ತ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸುವುದಾಗಿ ಶಾಸಕ ಕೆ.ಎಸ್. ಆನಂದ್ ಭರವಸೆ ನೀಡಿದರು. ಐಸಿಡಿಎಸ್ ಯೋಜನೆಗೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ತಾಲ್ಲೂಕು ಸಮಿತಿ ಹಾಗೂ ಫೆಡರೇಷನ್ ವತಿಯಿಂದ ಪಟ್ಟಣದ ಶ್ರೀಬನಶಂಕರಿ ಕಲ್ಯಾಣ ಮಂಟಪದಲ್ಲಿ, ಆಯೋಜಿಸಿದ್ದ ಸುವರ್ಣ ಮಹೋತ್ಸವ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಸಮ್ಮಿಲನ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೇಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ವೇತನವನ್ನು 3 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಕಾರ್ಯಕರ್ತೆಯರು 15 ಸಾವಿರ ವೇತನಕ್ಕೆ ಬೇಡಿಕೆ ಇಟ್ಟಿದ್ದು, ಈ ಬೇಡಿಕೆ ಈಡೇರಿಸುವಂತೆ ಮುಂಬರುವ


ಉದಯವಾಹಿನಿ ಚಿತ್ರ

ಅಧಿವೇಶನದಲ್ಲಿ ಸದನದ ಗಮನ ಸೆಳೆಯುವುದಾಗಿ ತಿಳಿಸಿದರು. ಶಾಸಕನಾದ ಬಳಿಕ ಕ್ಷೇತ್ರದಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣ ಮತ್ತು ನಿವೇಶನ ಒದಗಿಸಲು ಹೆಚ್ಚಿನ ಆದ್ಯತೆ ನೀಡಲಾಗಿದೆ. ಖಾಲಿ ಹುದ್ದೆಗಳನ್ನು ಮೂರು ಬಾರಿ ಭರ್ತಿ ಮಾಡಲಾಗಿದೆ. ಇಲಾಖೆಯ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡದೆ ಪಾರದರ್ಶಕವಾಗಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ನೇಮಕಾತಿಗೆ ಸಹಕರಿಸಿದ್ದೇನೆ. ಮುಂದೆಯೂ ಅವರ ಸಮಸ್ಯೆಗಳು ಮತ್ತು ಬೇಡಿಕೆಗಳಿಗೆ ಸ್ಪಂದಿಸುವೆ ಎಂದು ಅವರು ಹೇಳಿದರು.

ವಿಶೇಷ ಆಹ್ವಾನಿತ ಭಾರತೀಯ ಸೇನಾಧಿಕಾರಿ

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಶಾಸಕರು ಸರ್ಕಾರವನ್ನು ಒತ್ತಾಯಿಸಬೇಕು. 15 ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆಯರ ನೆರವಿಗೆ ಬಾರದ ಕೇಂದ್ರ ಸರ್ಕಾರದ ಧೋರಣೆ ಖಂಡನೀಯ. ಕಾರ್ಮಿಕ ಸಂಘಟನೆಗಳ ಹಕ್ಕುಗಳನ್ನು ಕಸಿದುಕೊಂಡು ಕೇಂದ್ರ ಸರ್ಕಾರ ಮಾಲೀಕರ ಪರವಾಗಿ ನಡೆದುಕೊಳ್ಳುತ್ತಿದೆ.

ಭವ್ಯಾ ನರಸಿಂಹಮೂರ್ತಿ ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರ ಸೇವೆ ದೇಶಸೇವೆಗೆ ಸಮಾನವಾಗಿದೆ. **ಇದು ಉದ್ಯೋಗವಲ್ಲ;** ತಾಯ್ತನ, ಶಿಕ್ಷಣ ಮತ್ತು ಆರೋಗ್ಯದ ಜವಾಬ್ದಾರಿಗಳನ್ನು ಒಳಗೊಂಡ ಮಹತ್ವದ ಸೇವೆಯಾಗಿದೆ ಎಂದರು. ಅಂಗನವಾಡಿ ಫೆಡರೇಷನ್ ರಾಜ್ಯ ಘಟಕದ ಅಧ್ಯಕ್ಷ ಬಿ. ಅಮ್ಮದ್, ಕಡೂರು ತಾಲ್ಲೂಕು ಅಧ್ಯಕ್ಷೆ ಯು.ಆರ್. ಪಾರ್ವತಮ್ಮ, ರಾಜ್ಯದ ಮಾಜಿ ಕಾರ್ಯದರ್ಶಿ ರಾಧಾ ಸುಂದರೇಶ್, ಆಸಂದಿ ಕಲ್ಲೇಶ್, ಗುಮ್ಮನಹಳ್ಳಿ ಅಶೋಕ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಬಿ.ಎಚ್. ಕೃಷ್ಣಪ್ಪ ಮಾತನಾಡಿದರು.

ಮಹದಾಯಿ ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಹುಬ್ಬಳ್ಳಿಯಲ್ಲಿ ಧರಣಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ ನರಗುಂದ:**

'ಮಹದಾಯಿ ಯೋಜನೆ ಅನುಷ್ಠಾನಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ತನ್ನ ಇಚ್ಛಾಶಕ್ತಿ ಪ್ರದರ್ಶಿಸುತ್ತಿಲ್ಲ ಎಂದು ಆರೋಪಿಸಿ ನ. 2ರಿಂದ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಆವರಣದಲ್ಲಿ ಧರಣಿ ಹಮ್ಮಿಕೊಳ್ಳಲಾಗಿದೆ' ಎಂದು ರೈತ ಸೇನಾ ಕರ್ನಾಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಬಿ. ಜೋಗಣ್ಣವರ ಹೇಳಿದರು. ಪಟ್ಟಣದಲ್ಲಿ ನಡೆಯುತ್ತಿರುವ ಮಹದಾಯಿ ಧರಣಿಯ 4,018ನೇ ದಿನವಾದ ಮಾತನಾಡಿದ ಅವರು, 'ಮಹದಾಯಿ ಯೋಜನೆ ಅನುಷ್ಠಾನಕ್ಕೆ ವಿವಿಧ, ವಿಭಿನ್ನ ರೀತಿಯ ಹೋರಾಟ ನಡೆಸಲಾಗಿದೆ. ನ್ಯಾಯ ಮಂಡಳಿಯಿಂದ ನೀರು ಹಂಚಿಕೆ ಮಾಡಲಾಗಿದೆ. ಆದರೂ ಕಾಮಗಾರಿ ಆರಂಭವಾಗಿಲ್ಲ. ಅನುಷ್ಠಾನಕ್ಕೆ ಕೇಂದ್ರ ವನ್ಯಜೀವಿ ಮಂಡಳಿ ಅನುಮತಿ ನೀಡುತ್ತಿಲ್ಲ. ಆದ್ದರಿಂದ ಅನುಮತಿ ನೀಡಿ ಕಾಮಗಾರಿ ಆರಂಭವಾಗುವವರೆಗೂ ಧರಣಿ ನಿರಂತರವಾಗಿರುತ್ತದೆ' ಎಂದರು.

'ರಾಜ್ಯದ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ರಾಜ್ಯ ಸರ್ಕಾರ ಕೇಂದ್ರದ ಮನವೊಲಿಸಬೇಕು. ಆಗ ಮಾತ್ರ ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಲಿದೆ. ಇದರ ಜೊತೆಗೆ ಬರ ಪರಿಹಾರ ರೈತರ ಖಾತೆಗೆ ಜಮೆ ಮಾಡಬೇಕು. ಇಲ್ಲದಿದ್ದರೆ ರಾಜ್ಯ ಸರ್ಕಾರದ ವಿರುದ್ಧ ಉಗ್ರ ಹೋರಾಟ ಮಾಡಲಾಗುವುದು' ಎಂದು ಒತ್ತಾಯಿಸಿದರು. ರೈತಸೇನಾ ಕರ್ನಾಟಕದ ಸಿ.ಎಸ್. ಪಾಟೀಲ, ಮಹದಾಯಿ ಹೋರಾಟಗಾರರು ಭಾಗವಹಿಸಿದ್ದರು.

ಪಿಎಂ ಕಿಸಾನ್ ಪಡೆಯಲು ಇ–ಕೆವೈಸಿ ಕಡ್ಡಾಯ

• **ಉದಯವಾಹಿನಿ ಗಂಗಾವತಿ:**

ಇಲ್ಲಿನ ಕೃಷಿ ವಿಜ್ಞಾನ ಕೇಂದ್ರದ ಸಭಾಂಗಣದಲ್ಲಿ ಪಿ.ಎಂ ಕಿಸಾನ್ ನಿಧಿಯ 24ನೇ ಕಂತಿನ ಲೋ ಕಾರ್ಪಣೆ ಹಾಗೂ ಪಿ.ಎಂ ಕಿಸಾನ್ ಉತ್ಸವ ದಿವಸ ಉದ್ಘಾಟನೆಯ ನೇರ ಪ್ರಸಾರ ಕಾರ್ಯಕ್ರಮ ಜರುಗಿತು.ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ರಾಘವೇಂದ್ರ ಎಲಿಗಾರ ಮಾತನಾಡಿ, ಪ್ರಧಾನಿ ಮೋದಿ ಅವರು ಗುಜರಾತ್‌ನ ಬನಾಸ್‌ಕಾಂತದಿಂದ ರೈತರ ಖಾತೆಗಳಿಗೆ ಪಿ.ಎಂ ಕಿಸಾನ್ ಯೋಜನೆ 24ನೇ ಕಂತಿನ ಹಣ ನೇರವಾಗಿ ಬಿಡುಗಡೆ ಮಾಡಿದರು. ಪಿ.ಎಂ ಕಿಸಾನ್ ನೆರವು ಮುಂದುವರಿಯಬೇಕಾದರೆ ಪ್ರತಿಯೊಬ್ಬ ರೈತ ಕಡ್ಡಾಯವಾಗಿ ಇ–ಕೆವೈಸಿ ಮಾಡಿಸಬೇಕು. ಆಧಾರ್ ಕಾರ್ಡ್ ಬ್ಯಾಂಕ್ ಖಾತೆಗೆ ಲಿಂಕ್ ಆಗಿರಬೇಕು' ಎಂದರು.

ಕೃಷಿ ಸಮಾಜದ ತಾಲ್ಲೂಕು ಅಧ್ಯಕ್ಷ ಚೆನ್ನಪ್ಪ ಮಳಗಿ ಮಾತನಾಡಿ, 'ರೈತರಿಗೆ ಅನುಕೂಲವಾಗಲಿ ಎಂದು ಪಿ.ಎಂ ಕಿಸಾನ್ ಯೋಜನೆಯಡಿ ರೈತರ ಖಾತೆಗಳಿಗೆ ಪ್ರತಿ ನಾಲ್ಕು ತಿಂಗಳಿಗೊಮ್ಮೆ 2 ಸಾವಿರದಂತೆ ಹಣ ಸಂದಾಯ ಮಾಡಲಾಗುತ್ತಿದೆ. ಇದರ ಭಾಗವಾಗಿ ಇಂದು 24ನೇ ಕಂತಿನ ಹಣ ಖಾತೆಗಳಿಗೆ ಹಣ ಸಂದಾಯ ಮಾಡಿದ್ದಾರೆ ಎಂದರು.



ಗಂಗಾವತಿ ಕೃಷಿ ಇಲಾಖೆ ಸಹಾಯಕ ಕೃಷಿ ನಿರ್ದೇಶಕಿ ಡಾ. ಅಭಿಲಾಷ, ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕ ಶಿವಶೇಖರ ಪಾಟೀಲ ಮಾತನಾಡಿದರು.

ಜಿಲ್ಲಾ ಯುವ ಕೃಷಿಕ ಸಮಾಜದ ಅಧ್ಯಕ್ಷ ಕನಕಪ್ಪ ಮಳಗಾಂವಿ, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಜ್ಯೋತಿ.ಆರ್, ರೇವತಿ ಆರ್.ಎಂ, ತಾಂತ್ರಿಕ ಅಧಿಕಾರಿ (ಮಣ್ಣು ವಿಜ್ಞಾನ) ಶೃತಿ ಎನ್., ಸೇರಿ ಕೃಷಿ ಇಲಾಖೆ, ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಿಬ್ಬಂದಿ ಸೇರಿ 75ಕ್ಕೂ ಹೆಚ್ಚು ರೈತ ಮಹಿಳೆಯರು ಪಾಲ್ಗೊಂಡಿದ್ದರು.

ಬೀದಿನಾಯಿ ಕಚ್ಚಿ 4 ವರ್ಷದ ಬಾಲಕ ಸಾವು

• **ಉದಯವಾಹಿನಿ ಕಲಬುರಗಿ:**

ಬೀದಿನಾಯಿ ಕಚ್ಚಿ 4 ವರ್ಷದ ಬಾಲಕ ಸಾವನ್ನಪ್ಪಿರುವ ಘಟನೆ ನಗರದ ಧರಿಯಾಪುರ–ಕೋಟನೂರ ಜಿಡಿಎ ಬಡಾವಣೆಯಲ್ಲಿ ನಡೆದಿದೆ.ತಾಲ್ಲೂಕಿನ ಜಂಬಗಾ(ಬಿ) ಗ್ರಾಮದ ಶರಣಬಸಪ್ಪ ವಗ್ಗರಗಿ ಅವರ ಪುತ್ರ ಮನೋಜ ಮೃತ ಬಾಲಕ. ಮಧ್ಯಾಹ್ನ ಗಾಣದೇವತೆ ದೇವಸ್ಥಾನದ ರಸ್ತೆಯಲ್ಲಿ ಬಾಲಕ ಆಟವಾಡುತ್ತಿದ್ದ ವೇಳೆ ಬೀದಿನಾಯಿ ದಾಳಿ ಮಾಡಿದೆ. ಹೊಟ್ಟೆ ಮತ್ತು ದೇಹದ ಹಲವೆಡೆ ಕಚ್ಚಿ ಗಂಭೀರ ಗಾಯಗೊಳಿಸಿದೆ. ಕಿರುಚಾಡುತ್ತಿದ್ದ ಬಾಲಕ ಮತ್ತು ಅವರ ತಾಯಿ ಧ್ವನಿ ಕೇಳಿ ನಿವೃತ್ತ ಶಿಕ್ಷಕ ಶಿವಪುತ್ರಪ್ಪ ಕೋಣೆನ್ ಅವರು ನಾಯಿಯನ್ನು ಹೊಡೆದೋಡಿಸಿದ್ದಾರೆ.

ಹಿರಿಯ ನಾಗರಿಕರಿಗಾಗಿ ಉಚಿತ ಆಯುರ್ವೇದ ಆರೋಗ್ಯ ಶಿಬಿರ.

• **ಉದಯವಾಹಿನಿ ಹಿರಿಯೂರು:**

ಆಯುಷ್ ಇಲಾಖೆ ಚಿತ್ರದುರ್ಗ ಹಾಗೂ ವಿಕಲಚೇತನರ ಹಾಗೂ ಹಿರಿಯನಾಗರೀಕರ ಸಬಲೀಕರಣ ಇಲಾಖೆ. ಚಿತ್ರದುರ್ಗ ಇವರ ಸಹಯೋಗದೊಂದಿಗೆ ಸರ್ಕಾರಿ ಆಯುರ್ವೇದ ಆಸ್ಪತ್ರೆ ಹಿರಿಯೂರು ಇವರ ಆಶ್ರಯದಲ್ಲಿ ಹಿರಿಯ ನಾಗರೀಕರಿಗಾಗಿ ಬೃಹತ್ ಆಯುರ್ವೇದ ಆರೋಗ್ಯ ಶಿಬಿರವನ್ನು ರೋಟರಿ ಭವನ ಹಿರಿಯೂರು ಇಲ್ಲಿ ದಿನಾಂಕ 30-10-2026 ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ.ಚಂದ್ರಕಾಂತ. ಎಸ್.ನಾಗಸಮುದ್ರ ಇವರು ಗಿಡಕ್ಕೆ ನೀರರೆಯುವುದರ ಮೂಲಕ ಉದ್ಘಾಟಿಸಿದರು. ಹಿರಿಯ ನಾಗರೀಕರನ್ನು ಉದ್ದೇಶಿಸಿ ವಯೋಸಹಜ ಖಾಯಿಲೆಗಳಿಗೆ ಆಯುರ್ವೇದದಲ್ಲಿರುವ ಆಹಾರ ಪದ್ಧತಿ. ಮತ್ತು ಜೀವನ ಶೈಲಿ, ಸರಳ ಯೋಗಬ್ಯಾಸ, ದ್ಯಾನದ ಮೂಲಕ ಆರೋಗ್ಯ ಕಾಪಡಿಕೊಳ್ಳಲು ಸಹಾಯವಾಗುತ್ತದೆ ಎಂದು ತಿಳಿಸಿದರು ಮತ್ತು ಹೆಚ್ಚಿನ ಚಿಕಿತ್ಸೆಗೆ ಹತ್ತಿರದ ಸರ್ಕಾರಿ ಆಯುರ್ವೇದ ಆಸ್ಪತ್ರೆ. ಹಿರಿಯೂರು ಇಲ್ಲಿಗೆ ಬೇಟಿ ನೀಡಿ ತಜ್ಞ ವೈದ್ಯರ ಸಲಹೆ ಮತ್ತು ಚಿಕಿತ್ಸೆ ಪಡೆದುಕೊಳ್ಳಲು ಕರೆ ನೀಡಿದರು.



ವಿಕಲಚೇತನರ ಹಾಗೂ ಹಿರಿಯನಾಗರೀಕರ ಸಬಲೀಕರಣ ಇಲಾಖೆ. ಇಲಾಖೆಯ ಉಪ ನಿರ್ದೇಶಕರಾದ ಶ್ರೀಮತಿ ವೈಶಾಲಿ. ಅವರು ಹಿರಿಯ ನಾಗರಿಕರ ಸ್ಥಳಕ್ಕೆ ಬಂದು ಸೇವೆ ನೀಡುತ್ತಿರುವ ಈ ಕಾರ್ಯ ಶ್ಲಾಘನೀಯ ಎಂದು ತಿಳಿಸಿದರು .ಸಂಪನ್ಮೂಲ ವ್ಯಕ್ತಿಗಳಾದ ಡಾ.ರಾಘವೇಂದ್ರ, ಹಾಗೂ ಡಾ ಚಂಪಾ ತಜ್ಞ ವೈದ್ಯರು. ಸರ್ಕಾರಿ ಆಯುರ್ವೇದ ಆಸ್ಪತ್ರೆ. ಹಿರಿಯೂರು ಇವರು ಪೌಷ್ಟಿಕ ಆಹಾರ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಆಯೋಜಕರಾದ ಹಾಗೂ ಆಡಳಿತ ವೈದ್ಯಾಧಿಕಾರಿಗಳಾದ ಡಾ ಪ್ರಭು ಹಾಗೂ ಸಿಬ್ಬಂದಿಯವರು, ರೋಟರಿ ಕ್ಲಬ್ ಹಿರಿಯೂರು ಹಾಗೂ ವಿಕಲಚೇತನ ಸಬಲೀಕರಣ ಇಲಾಖೆಯ ಸಿಬ್ಬಂದಿಯವರು ಹಾಜರಿದ್ದರು ಕಾರ್ಯಕ್ರಮದಲ್ಲಿ ಸುಮಾರು 195 ಜನ ಇಲ್ಲಿ ನಾಗರಿಕರನ್ನು ತಪಾಸಣೆ ಮಾಡಿ ಉಚಿತವಾಗಿ ಚಿಕಿತ್ಸೆಯನ್ನು ನೀಡಲಾಯಿತು.

ಕಾಗೋಡು ತಿಮ್ಮಪ್ಪಗೆ ರಾಜ್ಯೋತ್ಸವ ಪ್ರಶಸ್ತಿ: ಮನೆಗೆ ತೆರಳಿ ಅಭಿನಂದಿಸಿದ ಸಚಿವ

• **ಉದಯವಾಹಿನಿ ಸಾಗರ:**

ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಿರುವ ಹಿನ್ನೆಲೆಯಲ್ಲಿ, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಶನಿವಾರ ಸಾಗರದಲ್ಲಿರುವ ಕಾಗೋಡು ತಿಮ್ಮಪ್ಪ ಅವರ ನಿವಾಸಕ್ಕೆ ತೆರಳಿ ಅಭಿನಂದಿಸಿದರು.ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಚಿವ ಮಧು ಬಂಗಾರಪ್ಪ ಅವರು ವಿಡಿಯೊ ಕರೆ ಮಾಡಿ, ಕಾಗೋಡು ತಿಮ್ಮಪ್ಪ ಅವರೊಂದಿಗೆ ಮಾತನಾಡಿಸಿದರು.ಹಿರಿಯ ನಾಯಕನಿಗೆ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದಕ್ಕೆ ಮುಖ್ಯಮಂತ್ರಿ ಶುಭಾಶಯ ತಿಳಿಸಿ, ರಾಜಕೀಯ ಕ್ಷೇತ್ರದಲ್ಲಿ ಕಾಗೋಡು ತಿಮ್ಮಪ್ಪ ಅವರ ಸೇವೆ ಅನುಕರಣೀಯವಾಗಿದೆ.

ಭಗವಂತ ನಿಮಗೆ ಉತ್ತಮ ಆರೋಗ್ಯ ನೀಡಲಿ. ನಿಮ್ಮ ಆಶೀರ್ವಾದ ನಮ್ಮೆಲ್ಲರ ಮೇಲಿರಲಿ ಎಂದು ಹಾರೈಸಿದರು. ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸಲು ಬೆಂಗಳೂರಿಗೆ ಆಗಮಿಸುವುದು ಕಷ್ಟವಾಗಬಹುದೆಂಬ ಹಿನ್ನೆಲೆಯಲ್ಲಿ, ಹೆಲಿಕಾಪ್ಟರ್ ವ್ಯವಸ್ಥೆ


ಉದಯವಾಹಿನಿ ಚಿತ್ರ

ಮಾಡಬೇಕೇ ಎಂದು ಮುಖ್ಯಮಂತ್ರಿ ವಿಚಾರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕಾಗೋಡು ತಿಮ್ಮಪ್ಪ ಅವರು, ''ಬೇಡ, ನಾನು ಹೇಗೋ ಬರುವೆ' ಎಂದರು.ಕಾಗೋಡು ಅವರ ಮನೆಗೆ ತೆರಳಿ ಪ್ರಶಸ್ತಿ ಪ್ರದಾನ: ಮಧು ಬಂಗಾರಪ್ಪ ವಯೋಸಹಜ ಅನಾರೋಗ್ಯದ ಹಿನ್ನೆಲೆಯಲ್ಲಿ ಕಾಗೋಡು ತಿಮ್ಮಪ್ಪ ಅವರು ಸದ್ಯ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಹೀಗಾಗಿ ಬೆಂಗಳೂರಿಗೆ ಬಂದು ಪ್ರಶಸ್ತಿ ಸ್ವೀಕರಿಸಲು ಅವರಿಗೆ ತೊಂದರೆಯಾಗಬಹುದು. ಈ ಹಿನ್ನೆಲೆಯಲ್ಲಿ ಸರ್ಕಾರವೇ ಅವರ ಮನೆಗೆ ತೆರಳಿ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಿದೆ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಹುಬ್ಬಳ್ಳಿಗೆ ವಂದೇ ಭಾರತ್ ಸ್ಲೀಪರ್ ಬೇಕು, ಜನಶತಾಬ್ದಿಯೂ ಬೇಕು!

ಹುಬ್ಬಳ್ಳಿ ಭಾಗಕ್ಕೆ ಮತ್ತಷ್ಟು ವಂದೇ ಭಾರತ್ ರೈಲುಗಳ ಸಂಪರ್ಕ ಕಲ್ಪಿಸುವ ಬೇಡಿಕೆಯ ಜತೆಗೆ ಸಾಮಾನ್ಯ ರೈಲುಗಳ ಸೇವೆಯನ್ನು ವಿಸ್ತರಿಸಬೇಕೆಂಬ ಒತ್ತಾಯ

• **ಉದಯವಾಹಿನಿ, ಹುಬ್ಬಳ್ಳಿ:**

ಆಧುನಿಕ ಸೌಲಭ್ಯ, ವೇಗದ ಪ್ರಯಾಣ ಹಾಗೂ ಐಷಾರಾಮಿ ವ್ಯವಸ್ಥೆಗಳೊಂದಿಗೆ ಭಾರತೀಯ ರೈಲ್ವೆ ಪರಿಚಯಿಸುತ್ತಿರುವ ವಂದೇ ಭಾರತ್ ರೈಲುಗಳಿಗೆ ಪ್ರಯಾಣಿಕರಿಂದ ದಿನದಿಂದ ದಿನಕ್ಕ ಬೇಡಿಕೆ ಹೆಚ್ಚುತ್ತಿದೆ. ಅದರಲ್ಲೂ ಛೋಟಾ ಮುಂಬೈ ಎಂದೂ ಕರೆಯಲ್ಪಡುತ್ತ ವಾಣಿಜ್ಯ ನಗರಿ ಹುಬ್ಬಳ್ಳಿ ಭಾಗದಿಂದ ವಂದೇ ಭಾರತ್

1 : ಬೇಡಿಕೆಯೂ ಇದೀಗ ಮುನ್ನೆಲೆಗೆ ಬಂದಿದೆ
2 : ವಂದೇ ಭಾರತ್ ರೈಲುಗಳ ದುಬಾರಿ ದರ
3 : ಟಿಕೆಟ್ ವೆಚ್ಚ ಹೆಚ್ಚಿನ ಹೊರೆಯಾಗುತ್ತಿದೆ

ರೈಲುಗಳ ಸಂಪರ್ಕ ವಿಸ್ತರಿಸಬೇಕೆಂಬ ಒತ್ತಾಯ ಕೇಳಿಬರುತ್ತಿದೆ. ಬೆಂಗಳೂರು ಮುಂಬೈ ನಡುವೆ ಪ್ರಸ್ತಾವಿತ ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ರೈಲು ಹುಬ್ಬಳ್ಳಿ ಮಾರ್ಗವಾಗಿ ಸಂಚರಿಸಬೇಕೆಂಬ ಬೇಡಿಕೆಯೂ ಇದೀಗ ಮುನ್ನೆಲೆಗೆ ಬಂದಿದೆ.

ಆದರೆ, ಮತ್ತೊಂದೆಡೆ ವಂದೇ ಭಾರತ್ ರೈಲುಗಳ ದುಬಾರಿ ಪ್ರಯಾಣ ದರ ಸಾಮಾನ್ಯ ಪ್ರಯಾಣಿಕರಿಗೆ ಹೊರೆಯಾಗುತ್ತಿದ್ದು, ಜನಶತಾಬ್ದಿ ಸೇರಿದಂತೆ ಕಡಿಮೆ ದರದ ರೈಲುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಆಗ್ರಹವೂ ಬಲಗೊಳ್ಳುತ್ತಿದೆ.


ಉದಯವಾಹಿನಿ ಚಿತ್ರ

ವಂದೇ ಭಾರತ್ ರೈಲುಗಳು ಆಧುನಿಕ ಸೌಲಭ್ಯಗಳೊಂದಿಗೆ ವೇಗದ ಪ್ರಯಾಣದ ಅನುಭವ ನೀಡುತ್ತಿದ್ದರೂ, ಅವುಗಳ ಟಿಕೆಟ್ ದರ ಮಧ್ಯಮ ಹಾಗೂ ಬಡ ವರ್ಗದ ಪ್ರಯಾಣಿಕರ ಕೈಗೆಟುಕುವಂತಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ವಿಶೇಷವಾಗಿ ಕುಟುಂಬ ಸಮೇತರಾಗಿ ಪ್ರಯಾಣಿಸುವವರಿಗೆ ಟಿಕೆಟ್ ವೆಚ್ಚ ಹೆಚ್ಚಿನ ಹೊರೆಯಾಗುತ್ತಿದೆ. ಹೀಗಾಗಿ, ಕೇವಲ ಹೈಟೆಕ್ ರೈಲುಗಳ ಪರಿಚಯಕ್ಕೆ ಆದ್ಯತೆ ನೀಡುವುದರ ಜತೆಗೆ ಜನಸಾಮಾನ್ಯರಿಗೂ ಅನುಕೂಲವಾಗುವ ಜನಶತಾಬ್ದಿ ಹಾಗೂ ಇತರೆ ಸಾಮಾನ್ಯ ರೈಲುಗಳ ಸೇವೆಯನ್ನು ವಿಸ್ತರಿಸಬೇಕೆಂಬ ಒತ್ತಾಯ ಕೇಳಿಬರುತ್ತಿದೆ.

ಕೇವಲ ಅರ್ಧ ಗಂಟೆ ಉಳಿತಾಯ, ದರದಲ್ಲಿ ಭಾರಿ ವ್ಯತ್ಯಾಸ: ಹುಬ್ಬಳ್ಳಿ ಬೆಂಗಳೂರು ನಡುವಿನ ಸುಮಾರು 490 ಕಿ.ಮೀ.

ವಂದೇ ಭಾರತ್ ಸ್ಲೀಪರ್ ರೈಲು ಹುಬ್ಬಳ್ಳಿ ಮಾರ್ಗವಾಗಿ ಸಂಚರಿಸಿದರೆ ದಾವಣಗೆರೆ, ಹುಬ್ಬಳ್ಳಿ ಹಾಗೂ ಬೆಳಗಾವಿ ಭಾಗದ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ವಾರದಲ್ಲಿ ಕನಿಷ್ಠ ಮೂರು ದಿನವಾದರೂ ಈ ಮಾರ್ಗದಲ್ಲಿ ರೈಲು ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿರುವುದಾಗಿ ತಿಳಿಸಿದ್ದಾರೆ. -ಮಹೇಂದ್ರ ಸಿಂಘಿ

ಪ್ರಯಾಣಕ್ಕೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಅಂದಾಜು 6 ಗಂಟೆ 30 ನಿಮಿಷ ತೆಗೆದುಕೊಳ್ಳುತ್ತದೆ. ಅದೇ ಮಾರ್ಗದಲ್ಲಿ ಸಂಚರಿಸುವ ಜನಶತಾಬ್ದಿ ರೈಲು ಸುಮಾರು 7 ಗಂಟೆಗಳಲ್ಲಿ ಬೆಂಗಳೂರಿಗೆ ತಲುಪುತ್ತದೆ. ಅಂದರೆ, ಪ್ರಯಾಣದ ಅವಧಿಯಲ್ಲಿ ಸುಮಾರು ಅರ್ಧ ಗಂಟೆಯಷ್ಟೇ ವ್ಯತ್ಯಾಸವಿದೆ.

ಆದರೆ, ಪ್ರಯಾಣ ದರದಲ್ಲಿ ಮಾತ್ರ ಗಮನಾರ್ಹ ಅಂತರವಿದೆ. ಜನಶತಾಬ್ದಿ ರೈಲಿನ ಚೇರ್‌ಕಾರ್ ಟಿಕೆಟ್ ದರ ಸುಮಾರು 720 ಇದ್ದರೆ, ವಂದೇ ಭಾರತ್ ರೈಲಿನ ಚೇರ್‌ಕಾರ್ ದರ ಸುಮಾರು 1,330 ಇದೆ. ಹೀಗಾಗಿ, ಕೇವಲ ಅರ್ಧ ಗಂಟೆ ಸಮಯ ಉಳಿಸಲು ಹೆಚ್ಚುವರಿಯಾಗಿ ಸುಮಾರು 610 ಪಾವತಿಸಬೇಕಾದ ಪರಿಸ್ಥಿತಿ ಇದೆ ಎಂಬುದು ಪ್ರಯಾಣಿಕರ ಅಭಿಪ್ರಾಯ.

ವೇಗದ ರೈಲುಗಳ ಅಭಿವೃದ್ಧಿ ಎಷ್ಟು ಮುಖ್ಯವೋ, ಸಾಮಾನ್ಯ ಪ್ರಯಾಣಿಕರ ಕೈಗೆಟುಕುವ ರೈಲು ಸೇವೆಗಳ ವಿಸ್ತರಣೆಯೂ ಅಷ್ಟೇ ಮುಖ್ಯ. ರೈಲ್ವೆ ಇಲಾಖೆ ಈ ಎರಡೂ ಬೇಡಿಕೆಗಳನ್ನು ಸಮತೋಲನ ಕಾಪಾಡಬೇಕಿದೆ ಎನ್ನುವುದು ಜನರ ಬೇಡಿಕೆಯಾಗಿದೆ.

ಸ್ಲೀಪರ್ ಕ್ಲಾಸ್ ರೈಲಿಗೆ ಹುಬ್ಬಳ್ಳಿ ಸಂಪರ್ಕದ ಬೇಡಿಕೆ: ಇದರ ನಡುವೆಯೇ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವಿನ ರೈಲು ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಪ್ರಸ್ತಾವಿತ ಬೆಂಗಳೂರು ಮುಂಬೈ ವಂದೇ ಭಾರತ್ ಸ್ಲೀಪರ್ ಕ್ಲಾಸ್ ಎಕ್ಸ್‌ಪ್ರೆಸ್ ರೈಲನ್ನು ಹುಬ್ಬಳ್ಳಿ ಮಾರ್ಗವಾಗಿಯೂ ಓಡಿಸಬೇಕೆಂಬ ಬೇಡಿಕೆ ಕೂಡ ಕೇಳಿಬಂದಿದೆ.

ಹೈಟೆಕ್ ರೈಲುಗಳ ಜತೆಗೆ ಜನಸಾಮಾನ್ಯರ ರೈಲುಗಳಿಗೂ ಆದ್ಯತೆ ನೀಡಿ: ವಂದೇ ಭಾರತ್ ರೈಲುಗಳಲ್ಲಿನ ಅತ್ಯಾಧುನಿಕ ಸೌಲಭ್ಯಗಳು ಹಾಗೂ ಐಷಾರಾಮಿ ಪ್ರಯಾಣವು ಹೆಚ್ಚಿನ ಹಣ ಪಾವತಿಸಲು ಸಿದ್ಧರಿರುವ ಪ್ರಯಾಣಿಕರಿಗೆ ಅನುಕೂಲವಾಗಬಹುದು. ಆದರೆ, ಮಧ್ಯಮ ವರ್ಗ ಮತ್ತು ಬಡ ಪ್ರಯಾಣಿಕರ ಅಗತ್ಯಗಳನ್ನೂ ರೈಲ್ವೆ ಇಲಾಖೆ ಗಮನದಲ್ಲಿಟ್ಟುಕೊಳ್ಳಬೇಕಿದೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.